
Editor: **NITYANANDASWAMI** Publisher: **U. BASAVARAJA** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–27 | ಜುಲೈ 1–7, 2024 | ಪುಟ 16 | ರೂ.10/–
Volume-18 | Issue-27 | July 1-7, 2024 | Pages:16 | Price: 10/-



ಮೂರು ಹೊಸ ಕ್ರಿಮಿನಲ್ ಕಾನೂನುಗಳು ದಬ್ಬಾಳಿಕೆಯನ್ನು ಸಕ್ರಮಗೊಳಿಸಲು!

ಜೂಲಿಯನ್ ಅಸ್ಸಾಂಜೆ ಬಿಡುಗಡೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಜಯ!

ಕಲ್ಯಾಣ ಮಂಡಳಿಯ ಭ್ರಷ್ಟಾಚಾರ:
ಕಟ್ಟಡ ಕಾರ್ಮಿಕರ ರಾಜ್ಯವ್ಯಾಪಿ ಪ್ರತಿಭಟನೆ

ತುರ್ತು ಪರಿಸ್ಥಿತಿ:
ಇಂದಿರಾಗೆ ಸಹಕರಿಸುವುದಾಗಿ ಪತ್ರ ಬರೆದಿದ್ದ ಆರೆಸ್ಸೆಸ್

ಸರಕಾರದ ಹೊರಗುತ್ತಿಗೆ ನೇಮಕಾತಿ:
ಸಮರ್ಪಕ ಮೀಸಲಾತಿಗಾಗಿ ರಾಜ್ಯವ್ಯಾಪಿ ಪ್ರತಿಭಟನೆ

ಉತ್ತರ ಪ್ರದೇಶ:


ಸಂವಿಧಾನ ಮತ್ತು ಪ್ರಜಾಪ್ರಭುತ್ವ ರಕ್ಷಣೆಗಾಗಿ ಜನಾದೇಶ

ಹದಿನೆಂಟನೆ ಲೋಕಸಭಾ ಚುನಾವಣಾ ಫಲಿತಾಂಶವು ಭಾರತದ ಸಂವಿಧಾನ ಮತ್ತು ಪ್ರಜಾಪ್ರಭುತ್ವಗಳ ಉಳಿವಿಗಾಗಿ ಮತ್ತು ಮೋದಿ ನೇತೃತ್ವದ ಬಿಜೆಪಿ ಸರಕಾರದ ಸರ್ವಾಧಿಕಾರಿ ನೀತಿಯ ವಿರುದ್ಧ ಜನತೆ ನೀಡಿರುವ ಸ್ಪಷ್ಟ ಸಂದೇಶವಾಗಿದೆ. ಬಿಜೆಪಿಯು 400 ಸ್ಥಾನಗಳನ್ನು ಗೆಲ್ಲುವುದಾಗಿ ಡೋಲು ಬಾರಿಸಿಕೊಂಡು 240 ಸ್ಥಾನಗಳನ್ನು ಮಾತ್ರ ಪಡೆಯಿತು. 2019 ಕ್ಕೆ ಹೋಲಿಸಿದರೆ 63 ಸ್ಥಾನಗಳನ್ನು ಕಳೆದುಕೊಂಡಿತು. ತಾನಾಗಿ ಬಹುಮತದ ಸಂಖ್ಯೆ ತಲುಪಲು ಆಗಲಿಲ್ಲ. ಎನ್.ಡಿ.ಎ. ಒಕ್ಕೂಟದ ಒಟ್ಟು ಬಲದಿಂದ ಮಾತ್ರ ಸರಕಾರ ರಚಿಸುವಂತಾಯಿತು. ಇಂಡಿಯಾ ಕೂಟವು 234 ಸ್ಥಾನವನ್ನು ಗಳಿಸಿತು. ಈ ಒಟ್ಟು ಫಲಿತಾಂಶ ನಿರ್ಧರಿಸುವಲ್ಲಿ ಉತ್ತರ ಪ್ರದೇಶದ ಫಲಿತಾಂಶ ಪ್ರಧಾನ ಪಾತ್ರ ವಹಿಸಿದೆ.

ಹಿಂದುತ್ವ ರಾಜಕಾರಣದ ಕೇಂದ್ರ ಬಿಂದುವಿನಲ್ಲಿ

ಉತ್ತರ ಪ್ರದೇಶದ ಒಟ್ಟು 80 ಸ್ಥಾನಗಳ ಪೈಕಿ 2019 ರಲ್ಲಿ ಬಿಜೆಪಿಯು 62 ಸ್ಥಾನಗಳನ್ನು ಗಳಿಸಿತ್ತು. 2014 ರಲ್ಲಿ 71 ಸ್ಥಾನ ಗಳಿಸಿತ್ತು. ಈಗ ಎಲ್ಲ ಚುನಾವಣಾ ಪೂರ್ವ ಸಮೀಕ್ಷೆಗಳು, ಮತಗಟ್ಟೆ ಸಮೀಕ್ಷೆಗಳು, ಭಟ್ಟಂಗಿ ರಾಜಕೀಯ ಪಂಡಿತರ ಭವಿಷ್ಯವನ್ನು ಸುಳ್ಳಾಗಿಸಿ 2024 ರಲ್ಲಿ ಬಿಜೆಪಿ ಸ್ಥಾನ ಗಳಿಕೆ 33 ಕ್ಕೆ ಕುಸಿಯಿತು. ಇಂಡಿಯಾ ಒಕ್ಕೂಟ 43 ಸ್ಥಾನ ಗಳಿಸಿತು. ಸಮಾಜವಾದಿ ಪಕ್ಷ(ಎಸ್.ಪಿ.) 37 ಸ್ಥಾನಗಳನ್ನು ಗಳಿಸಿದರೆ, ಕಾಂಗ್ರೆಸ್ 6 ಸ್ಥಾನಗಳನ್ನು ಗಳಿಸಿತು. ಅಜಾದ್ ಸಮಾಜ್ ಪಕ್ಷದ ಚಂದ್ರಶೇಖರ ಒಂದು ಸ್ಥಾನ ಗೆದ್ದರು. ಬಹುಜನ ಸಮಾಜ ಪಕ್ಷ(ಬಿ.ಎಸ್.ಪಿ.) ಒಂದು ಸ್ಥಾನವನ್ನೂ ಗೆಲ್ಲಲು ಸಾಧ್ಯವಾಗಲಿಲ್ಲ. ಇಂಡಿಯಾ ಒಕ್ಕೂಟವು ಉತ್ತರ ಪ್ರದೇಶದ ಜನರ ಮುಂದೆ ಒಂದು ಬಲಿಷ್ಠ ಒಕ್ಕೂಟವಾಗಿ ತನ್ನನ್ನು ಬಿಂಬಿಸಿಕೊಂಡದ್ದು ಈ ಗೆಲುವಿಗೆ ಪೂರಕವಾಯಿತು. ಉತ್ತರ ಪ್ರದೇಶದ ಜನತೆ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ಮತ ನೀಡಿದ್ದಾರೆ. ಬೆಲೆ ಏರಿಕೆ, ನಿರುದ್ಯೋಗ, ಹಿಂದುತ್ವದ ದ್ವೇಷ ರಾಜಕಾರಣ, ಅಲ್ಪಸಂಖ್ಯಾತರ ಮೇಲಿನ ಸರಣಿ ದೌರ್ಜನ್ಯಗಳು, ದಲಿತರ ಮೇಲಿನ ಹಲ್ಲೆಗಳು, ಹತ್ಯಾಕಾಂಡಗಳು, ಸೈನ್ಯಕ್ಕೆ ಸಂಬಂಧಿಸಿದ ಅಗ್ನಿವೀರ್ ಯೋಜನೆಯ ರೂಪದ ವಂಚನೆ, ಪ್ರವೇಶ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಸೋರಿಕೆ ಹಗರಣ, ಸರ್ವಾಧಿಕಾರಿ ಪ್ರವೃತ್ತಿ, 'ಬುಲ್ಡೋಜರ್ ಬಾಬಾ' ಎಂದೇ (ಕು)ಖ್ಯಾತಿ ಗಳಿಸಿದ್ದ ಆದಿತ್ಯನಾಥ್ ಅವರ 'ಬುಲ್ಡೋಜರ್ ಆಡಳಿತ'ದ ವಿರುದ್ಧ ಜನತೆ ನಿರ್ಣಾಯಕವಾದ ತೀರ್ಪು ನೀಡಿದ್ದಾರೆ. ಈ ಮೂಲಕ ಅವರು ಕೇಂದ್ರದ ಮೋದಿ ಸರಕಾರ ಹಾಗೂ ರಾಜ್ಯದ ಆದಿತ್ಯನಾಥ್ ಸರಕಾರಗಳ 'ಡಬಲ್ ಎಂಜಿನ್ ಸರಕಾರ'ದ ದುರಾಡಳಿತವನ್ನೂ ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಅಲ್ಲದೇ ಅವರು 'ಇಂಡಿಯಾ' ಒಕ್ಕೂಟವು ಭರವಸೆ ನೀಡಿದ ಪ್ರತಿ ವ್ಯಕ್ತಿಗೆ 10 ಕೆಜಿ ಪಡಿತರ ಅಕ್ಕಿ, ರೈತರ ಸಾಲಮನ್ನಾ, ತಿಂಗಳಿಗೆ ಮಹಿಳೆಯರಿಗೆ 8,500 ರೂಪಾಯಿಗಳ ನೆರವು, ಉದ್ಯೋಗ ನೇಮಕಾತಿ ಯೋಜನೆ ಮುಂತಾದವುಗಳನ್ನು ಬೆಂಬಲಿಸಿದ್ದಾರೆ.

ಉತ್ತರ ಪ್ರದೇಶದ ಜನರಲ್ಲಿ ವಿಶೇಷವಾಗಿ ದಲಿತ ಸಮುದಾಯದಲ್ಲಿ, ಬಿಜೆಪಿಯು ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಬಾಬಾ ಸಾಹೇಬ ಅಂಬೇಡ್ಕರರು ರೂಪಿಸಿಕೊಟ್ಟ ಭಾರತದ ಸಂವಿಧಾನವನ್ನು ಬದಲಾಯಿಸುತ್ತಾರೆ ಎಂಬ ಆತಂಕ ವ್ಯಾಪಕವಾಗಿತ್ತು. ಹಲವು ಬಿಜೆಪಿ ಮುಖಂಡರು 400 ಸ್ಥಾನ ಪಡೆದು ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಾಯಿಸುವುದಾಗಿ ನೀಡಿದ ಹೇಳಿಕೆಗಳು ಜನರ ಈ ಆತಂಕವನ್ನು ಮತ್ತಷ್ಟು ಹೆಚ್ಚಿಸಿತು. ದಲಿತ ಸಮುದಾಯದ ದೊಡ್ಡ ವಿಭಾಗದ ಜನರು ದೇಶದ ಸಂವಿಧಾನವನ್ನು ರಕ್ಷಿಸಲೆಂದು ಎಸ್.ಪಿ., ಕಾಂಗ್ರೆಸ್‌ಗಳಿಗೆ ಮತ ನೀಡಿದ್ದಾರೆ. ಬಿಜೆಪಿಯು ಅಯೋಧ್ಯೆಯ ರಾಮಮಂದಿರ ನಿರ್ಮಾಣದ ವಿಷಯವನ್ನು ಮುಂದೆ ಮಾಡಿ ಮೇಲ್ಜಾತಿ ಮತಗಳನ್ನು ಕ್ರೋಢೀಕರಿಸಬಹುದು ಹಾಗೂ ಹಿಂದುಳಿದ ಸಮುದಾಯಗಳ ಜನರನ್ನು ಗೊಂದಲಕ್ಕೆ ಕೆಡವಿ, ಮತಗಳನ್ನು ವಿಭಜಿಸಿ



ಗೆಲುವು ಸಾಧಿಸಬಹುದು ಎಂದು ಯೋಜಿಸಿತ್ತು. ಬಿಜೆಪಿಯು ಉತ್ತರ ಪ್ರದೇಶದ ಎಲ್ಲಾ 80 ಸ್ಥಾನಗಳನ್ನೂ ಗೆದ್ದುಕೊಳ್ಳುವುದಾಗಿ ಘೋಷಿಸಿತ್ತು. ಬೆಲೆ ಏರಿಕೆ, ನಿರುದ್ಯೋಗ ಮುಂತಾದ ಜನರ ಬದುಕಿನ ಬವಣೆಗಳು, ಸಂಕಟ–ಸಮಸ್ಯೆಗಳು ಬಿಜೆಪಿಯ ಯೋಜನೆಯನ್ನು ತಲೆಕೆಳಗು ಮಾಡಿದವು. ಆದರೆ ಮೇಲ್ಜಾತಿಯ ಬಡವರಿಗೆ ಶೇ.10 ರಷ್ಟು ಮೀಸಲಾತಿ ನೀಡಿರುವ ಕ್ರಮವು ರಾಜ್ಯದ ಕೆಲವು ವಲಯಗಳಲ್ಲಿ ಬಿಜೆಪಿಗೆ ಲಾಭ ತಂದು ಕೊಟ್ಟಿದೆ ಎಂಬುದು ಗಮನಕ್ಕೆ ಬಂದಿದೆ.

ರಾಮಮಂದಿರದಲ್ಲಿ ಪ್ರಾಣ ಪ್ರತಿಷ್ಠಾಪನೆ ಮಾಡಿ, ಆ ಸಾಧನೆಯ ಪ್ರಚಾರದ ಬಲದಿಂದ ಇಡೀ ರಾಜ್ಯದಲ್ಲಿ ಭಾರಿ ಗೆಲುವನ್ನು ಸಾಧಿಸಬೇಕೆಂದು ಬಿಜೆಪಿ ಯೋಜಿಸಿತ್ತು. 'ರಾಮನನ್ನು ಯಾರು ಗುಡಿಗೆ ತಂದರೋ, ಅವರನ್ನು ನಾವು ಅಧಿಕಾರಕ್ಕೆ ತರುತ್ತೇವೆ' ಎಂಬ ಘೋಷಣೆಯನ್ನು ನೀಡಿ, ಮೋದಿ ಪರವಾದ ಅಲೆಯನ್ನು ಸೃಷ್ಟಿಸಲು ಪ್ರಯತ್ನಿಸಲಾಯಿತು. ಆದರೆ ಅಯೋಧ್ಯೆಯ ರಾಮಮಂದಿರ ಇರುವ ಫೈಜಾಬಾದ್ ಲೋಕಸಭಾ ಕ್ಷೇತ್ರದಲ್ಲಿಯೇ ಬಿಜೆಪಿಯು ಎಸ್.ಪಿ. ಅಭ್ಯರ್ಥಿ ಎದುರು ಸೋತು ಹೋಯಿತು. ಪ್ರಾಣ ಪ್ರತಿಷ್ಠಾಪನೆ, ಅಯೋಧ್ಯಾ ಕ್ಷೇತ್ರದ ಅಭಿವೃದ್ಧಿ ಹೆಸರಿನಲ್ಲಿ ಬಡವರ ಅಂಗಡಿಗಳು, ಮನೆಗಳನ್ನು ಒಡೆದು, ಜಮೀನನ್ನು ವಶಕ್ಕೆ ಪಡೆದುಕೊಂಡು ಸರಿಯಾದ ಪರಿಹಾರವನ್ನೂ ಕೊಡದೆ ಬಿಜೆಪಿ ಆಡಳಿತ ಸಾವಿರಾರು ಜನರ ಬದುಕನ್ನು ಬೀದಿಪಾಲು ಮಾಡಿತ್ತು.

ಮೋದಿಯವರಿಗೂ ಹಿನ್ನಡೆ

ಮೂರನೇ ಬಾರಿಗೆ ವಾರಣಾಸಿ(ಕಾಶಿ) ಕ್ಷೇತ್ರದಿಂದ ಸ್ಪರ್ಧಿಸಿದ ಮೋದಿಯವರ ನೇತೃತ್ವದಲ್ಲಿ ಉತ್ತರ ಪ್ರದೇಶದಲ್ಲಿ ಹೊಸ ನಾಟಕವೇ ಶುರುವಾಯಿತು. ಮೋದಿಯವರು ಈಗ ಇಲ್ಲಿ 'ಗಂಗಾ ಮಾತೆಯ ಪುತ್ರ'ರಾಗಿ ಅವತಾರ ತಾಳಿದರು. ಕೇಂದ್ರ ಗೃಹಮಂತ್ರಿಯೇ ಕ್ಷೇತ್ರದ ಚುನಾವಣಾ ಉಸ್ತುವಾರಿ ವಹಿಸಿದರು. ಹಲವಾರು ಕೇಂದ್ರ ಸಚಿವರು ಕ್ಷೇತ್ರದಲ್ಲಿ ಜಾಂಡಾ ಊರಿ ಪ್ರಚಾರ ನಡೆಸಿದರು. ನೀರಿನಂತೆ ಹಣವನ್ನು ಚೆಲ್ಲಲಾಯಿತು. ಆದರೆ 2019 ರಲ್ಲಿ 4.8 ಲಕ್ಷ ಮತಗಳ ಅಂತರದಿಂದ ಗೆದ್ದಿದ್ದ ಮೋದಿಯವರು ಈ ಬಾರಿ ಕೇವಲ 1.5 ಲಕ್ಷ ಮತಗಳ ಅಂತರದಿಂದ ಮಾತ್ರ ಗೆಲ್ಲುವುದು ಸಾಧ್ಯವಾಯಿತು. ಮತ ಎಣಿಕೆಯ ಕೆಲವು ಹಂತಗಳಲ್ಲಿ ಮೋದಿಯವರು ಎದುರಾಳಿ ಕಾಂಗ್ರೆಸ್ ಅಭ್ಯರ್ಥಿಗಿಂತ ಹಿಂದೆ ಬಿದ್ದಿರುವುದು ಸಹ ಕಂಡ ಬಂದು ಬಿಜೆಪಿಯ ಅಂಧ ಭಕ್ತರನ್ನು ಬೆಚ್ಚಿ ಬೀಳಿಸಿತ್ತು.

ಕೇವಲ ವಾರಣಾಸಿ ಮಾತ್ರವಲ್ಲ, ಕಾಶಿ ಸುತ್ತಮುತ್ತಲ 13 ಕ್ಷೇತ್ರಗಳ ಪೈಕಿ ಕೇವಲ 4 ಕ್ಷೇತ್ರಗಳಲ್ಲಿ ಮಾತ್ರ ಬಿಜೆಪಿ ಗೆದ್ದಿದೆ. 2019 ರಲ್ಲಿ 13 ರಲ್ಲಿ 12 ಸ್ಥಾನಗಳನ್ನು ಬಿಜೆಪಿ ಗೆದ್ದಿತ್ತು. ಅದೇ ರೀತಿ ಈಗ ಅಯೋಧ್ಯೆ ಸುತ್ತ ಮುತ್ತಲ ಅವಧ್ ಪ್ರದೇಶದ 16 ಕ್ಷೇತ್ರಗಳ ಪೈಕಿ 7 ಸ್ಥಾನಗಳನ್ನು ಮಾತ್ರ ಬಿಜೆಪಿ ಗೆದ್ದಿದೆ. 2019 ರಲ್ಲಿ ಬಿಜೆಪಿ ಈ ಪ್ರದೇಶದಲ್ಲಿ 13 ಸ್ಥಾನಗಳನ್ನು ಗೆದ್ದಿತ್ತು. ಪಶ್ಚಿಮ ಉತ್ತರ ಪ್ರದೇಶದಲ್ಲಿ ಕೂಡ ಬಿಜೆಪಿಯು ಈ ಹಿಂದೆ ಗೆದ್ದಿದ್ದ ಸ್ಥಾನಗಳನ್ನು ಉಳಿಸಿಕೊಳ್ಳಲು ಆಗಿಲ್ಲ. ಬಿಜೆಪಿಯ ಈ ಕುಸಿತದಿಂದ ಎಸ್.ಪಿ. ಹೆಚ್ಚಿನ ಲಾಭ ಗಳಿಸಿದೆ. 2019 ರಲ್ಲಿ 5 ಇದ್ದ ಎಸ್.ಪಿ. ಸ್ಥಾನಗಳು 2024 ರಲ್ಲಿ 37 ಕ್ಕೆ ಏರಿದೆ. ಎಸ್.ಪಿ. ಪಕ್ಷದ ಮತಗಳಿಕೆ ಈಗ ಶೇ. 33.59 ಇದೆ.

ಪ್ರಧಾನವಾಗಿ ಯಾದವ ಮತ್ತು ಮುಸ್ಲಿಮ್ ಸಮುದಾಯಗಳ ಮತಗಳನ್ನು ಕ್ರೋಢೀಕರಿಸುವ ಮೂಲಕ ಗೆಲುವು ಸಾಧಿಸಬೇಕೆಂಬ ಎಂದಿನ ತಂತ್ರಕ್ಕೆ ಬದಲಾಗಿ ಈ ಬಾರಿ ಎಸ್.ಪಿ. ಪಕ್ಷವು ಹಿಂದುಳಿದ ವಿಭಾಗದ ನಾನಾ ಸಮುದಾಯಗಳನ್ನು ಒಳಗೊಳ್ಳುವಂತಹ ವಿಶಾಲ ತಳಹದಿಯ ಸಮೀಕರಣವನ್ನು ರೂಪಿಸಿ ಜಾಣ್ಮೆಯ ತಂತ್ರವನ್ನು ಅನುಸರಿಸಿದ್ದು ಸಾಕಷ್ಟು ಉತ್ತಮ ಫಲಿತಾಂಶ ನೀಡಿದೆ. ಇದೊಂದು ಸಕಾರಾತ್ಮಕ ಬೆಳವಣಿಗೆ. ಕಾಂಗ್ರೆಸ್‌ನ ಸ್ಥಾನಗಳಿಕೆ 1 ಸ್ಥಾನದಿಂದ 6 ಕ್ಕೇರಿದೆ. ಮತ ಗಳಿಕೆ ಪ್ರಮಾಣ ಶೇ. 9.46 ಇದೆ. ಇವೆರಡೂ ಪಕ್ಷಗಳ ಒಟ್ಟು ಮತಗಳಿಕೆ 43.05 ಇದೆ. ರಾಜ್ಯದಲ್ಲಿ ಎನ್.ಡಿ.ಎ. ಕೂಟದಲ್ಲಿ ಬಿಜೆಪಿಯ ಮತಗಳಿಕೆ 41.37 ರಷ್ಟು ಇದ್ದು, ಎನ್.ಡಿ.ಎ. ಒಟ್ಟು ಮತಗಳಿಕೆ ಶೇ. 42 ರಷ್ಟು ಇದೆ. 2019 ರಲ್ಲಿ ಎಸ್.ಪಿ. ಜೊತೆಗಿನ ಮೈತ್ರಿಯೊಂದಿಗೆ 10 ಸ್ಥಾನ ಗಳಿಸಿದ್ದ ಬಹುಜನ ಸಮಾಜ ಪಕ್ಷ(ಬಿಎಸ್.ಪಿ.) ಈ ಸಾರಿ ಯಾವುದೇ ಸ್ಥಾನ ಗಳಿಸುವಲ್ಲಿ ವಿಫಲವಾಗಿದೆ. 2019 ರಲ್ಲಿ ಸುಮಾರು ಶೇ. 20 ರಷ್ಟು ಮತ ಗಳಿಸಿದ್ದ ಬಿ.ಎಸ್.ಪಿ. ಈಗ 9.4 ರಷ್ಟು ಮತಗಳನ್ನು ಗಳಿಸಿದ್ದು ಶೇ. 10 ರಷ್ಟು ಮತಗಳನ್ನು ಅಂದರೆ ಸರಿಸುಮಾರು ಅರ್ಧಕ್ಕರ್ಧ ಮತಗಳನ್ನು ಕಳೆದುಕೊಂಡಿದೆ.

ಬಿ.ಎಸ್.ಪಿ.ಗೆ ಭಾರಿ ನಷ್ಟ

ಸಾಂಪ್ರದಾಯಿಕವಾಗಿ ಮಾಯಾವತಿಯವರ ನಾಯಕತ್ವಕ್ಕೆ ಮತ ನೀಡುತ್ತ ಬಂದಿದ್ದ ದಲಿತ ಸಮುದಾಯದ ಬಹುದೊಡ್ಡ ವಿಭಾಗ ಈ ಬಾರಿ ಇಂಡಿಯಾ ಕೂಟಕ್ಕೆ ಮತ ನೀಡಿದೆ. ಬಿ.ಎಸ್.ಪಿ. ಬೆಂಬಲಿಗರು, ಮಾಯಾವತಿಯವರು ಪರೋಕ್ಷವಾಗಿ ಬಿಜೆಪಿಯನ್ನು ಬೆಂಬಲಿಸುವ ತಂತ್ರಗಾರಿಕೆ ಅನುಸರಿಸುತ್ತಿದ್ದಾರೆ ಎಂದು ಭಾವಿಸಿದ್ದು ಈ ಬದಲಾವಣೆಗೆ ಕಾರಣವಾಗಿದೆ. ಬಹಳ ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಂ ಅಭ್ಯರ್ಥಿಗಳಿಗೆ ತಮ್ಮ ಪಕ್ಷದಿಂದ ಟಿಕೆಟ್ ನೀಡಿ ಮುಸ್ಲಿಮ್ ಮತಗಳನ್ನು ವಿಭಜಿಸಬಹುದು ಎಂದು ಭಾವಿಸಿದ್ದ ಮಾಯವತಿಯವರ ತಂತ್ರಗಾರಿಕೆ ವಿಫಲವಾಗಿದ್ದು ಭಾರಿ ಮುಖಭಂಗವಾಗಿದೆ ಮತ್ತು ಮಾಯಾವತಿಯವರ 'ಸೆಕ್ಯುಲರ್' ಮುಖವಾಡ ಕಳಚಿ ಬಿದ್ದಿದೆ. ಮುಸ್ಲಿಮ್ ಸಮುದಾಯವು ಕೋಮುವಾದಿ ಬಿಜೆಪಿ ವಿರುದ್ಧ 'ಇಂಡಿಯಾ' ಒಕ್ಕೂಟಕ್ಕೆ ದೃಢವಾದ ಬೆಂಬಲ ನೀಡಿದೆ. ಚುನಾವಣಾ ಫಲಿತಾಂಶದ ನಂತರ ಮಾಯಾವತಿಯವರು ಬಿ.ಎಸ್.ಪಿ. ಪಕ್ಷಕ್ಕೆ ಮತ ನೀಡದಿರುವುದಕ್ಕಾಗಿ ಮುಸ್ಲಿಮ್ ಸಮುದಾಯವನ್ನು ನಿಂದಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮುಂದೆ ಮುಸ್ಲಿಂ ಅಭ್ಯರ್ಥಿಗಳಿಗೆ ಟಿಕೆಟ್ ಕೊಡುವಾಗ ಯೋಚಿಸಿ

ಪುಟ 4 ಕ್ಕೆ

ಕಲ್ಯಾಣ ಮಂಡಳಿಯ ಭ್ರಷ್ಟಾಚಾರ ವಿರೋಧಿಸಿ ಕಟ್ಟಡ ನಿರ್ಮಾಣ ಕಾರ್ಮಿಕರ ರಾಜ್ಯವ್ಯಾಪಿ ಪ್ರತಿಭಟನೆ

ವೈದ್ಯಕೀಯ ತಪಾಸಣೆ ಹೆಸರಿನಲ್ಲಿ, ಮಕ್ಕಳಿಗೆ ಲ್ಯಾಪ್ ಟಾಪ್ ಮತ್ತು ಪೌಷ್ಠಿಕಾಂಶ ಪದಾರ್ಥಗಳ ಖರೀದಿಯಲ್ಲಿ ನಡೆದಿರುವ ಕೋಟ್ಯಾಂತರ ರೂಪಾಯಿ ಅವ್ಯವಹಾರ ತನಿಖೆಗೆ ಒಳಪಡಿಸಬೇಕು ಎಂಬುದೂ ಸೇರಿದಂತೆ, ಹಲವು ಬೇಡಿಕೆಗಳನ್ನು ಇಟ್ಟು ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಜೂನ್ 28ರಿಂದ ಜುಲೈ 3 ರವರೆಗೆ ರಾಜ್ಯಾದ್ಯಂತ ಹಲವು ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿವೆ.

ಕಲ್ಯಾಣ ಮಂಡಳಿ ಹಾಗೂ ಕಾರ್ಮಿಕ ಇಲಾಖೆಯಲ್ಲಿ ಕಟ್ಟಡ ಕಾರ್ಮಿಕರಿಗೆ ಸೌಲಭ್ಯಗಳನ್ನು ನೀಡುವಲ್ಲಿ, ವಿದ್ಯಾರ್ಥಿ ವೇತನ ವಿತರಣೆಯಲ್ಲಿ, ವಿವಿಧ ರೀತಿಯ ವಸ್ತುಗಳ ಖರೀದಿಗೆ ಟೆಂಡರ್ ಗಳನ್ನು ನೀಡುವಲ್ಲಿ ಮತ್ತು ನೇಮಕಾತಿಗಳಲ್ಲಿ ವ್ಯಾಪಕ ಭ್ರಷ್ಟಾಚಾರಗಳು ನಡೆಯುತ್ತಿದೆ. ಈ ಭಷ್ಟಾಚಾರದಲ್ಲಿ ಅಧಿಕಾರಿಗಳು ನೇರವಾಗಿ ಶಾಮೀಲಾಗಿದ್ದಾರೆ ಎಂದು ಆರೋಪಿಸಿರುವ ಸಂಘಟನೆಗಳು, ಇದರ ಬಗ್ಗೆ ಕಠಿಣ ಕ್ರಮ ಕೈಗೊಳ್ಳಬೇಕು ಮತ್ತು ಎಲ್ಲಾ ಖರೀದಿ ಟೆಂಡರ್ ಗಳನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ಕರ್ನಾಟಕ ರಾಜ್ಯ ಕಟ್ಟಡ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ಯಲ್ಲಿ CITU, AITUC, INTUC, NCL, HMS, AICCTU, AIUTUC ಹಾಗು TUCC ಸಂಯೋಜಿತ ಸಂಘಗಳು ಸೇರಿವೆ. ಇವರ ಜೊತೆಯಲ್ಲಿ ಹಲವು ಸ್ವತಂತ್ರ ಸಂಘಗಳು ಹೋರಾಟಗಳಲ್ಲಿ ಭಾಗವಹಿಸುತ್ತಿವೆ. ಬೆಂಗಳೂರು ಹಾಗೂ ಸುತ್ತಲಿನ ಪ್ರದೇಶದ ಕಾರ್ಮಿಕರು ಬೆಂಗಳೂರಿನಲ್ಲಿರುವ ಕಲ್ಯಾಣ ಮಂಡಳಿ ಎದುರು ಜುಲೈ 3ರಂದು ಪ್ರತಿಭಟನೆ ನಡೆಸಿದ್ದಾರೆ.

ಹೈಕೋರ್ಟ್ ಆದೇಶದಂತೆ 2021 ಅಧಿಸೂಚನೆಯಂತೆ ಎಲ್ಲ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಧನಸಹಾಯ ಬಿಡುಗಡೆ ಮಾಡಬೇಕು. ಮಂಡಳಿಯು ಕೊಡುವ ಸೌಲಭ್ಯಗಳಿಗಾಗಿ ಅರ್ಜಿ ಸಲ್ಲಿಸಲು ಆಗುತ್ತಿರುವ ತೊಂದರೆ ನಿವಾರಿಸಬೇಕು. ಪಿಂಚಣಿ, ವೈದ್ಯಕೀಯ ಧನಸಹಾಯ ಇತ್ಯಾಧಿಗಳ ಧನಸಹಾಯ ನೀಡುವಲ್ಲಿ ಆಗುತ್ತಿರುವ ವಿಳಂಬ ಧೋರಣೆಗಳನ್ನು ತಪ್ಪಿಸಬೇಕು ಎಂದು ಸಮನ್ವಯ ಸಮಿತಿಯ ನಾಯಕರು ಒತ್ತಾಯಿಸಿದ್ದಾರೆ.

ಕಲ್ಯಾಣ ಮಂಡಳಿಯ ಅಧ್ಯಕ್ಷರು ಹಾಗು ಕಾರ್ಮಿಕ ಸಚಿವರಾಗಿರುವ ಸಂತೋಷ ಲಾಡ ಅವರು ಮಂಡಳಿಯಲ್ಲಿ ಸೆಸ್ ಸಂಗ್ರಹ ಹೆಚ್ಚಳಕ್ಕೆ ಮತ್ತು ನಕಲಿ ಕಾರ್ಡುದಾರರ ಹಾವಳಿ ತಡೆಗಟ್ಟಲು ನಡೆಸಿರುವ ಕ್ರಮಗಳನ್ನು 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ (CWFI)' ಸ್ವಾಗತಿಸಿದ್ದು, ನೈಜ ಕಟ್ಟಡ ಕಾರ್ಮಿಕರು ಹಾಗೂ ಅವರ ಅವಲಂಬಿತರು ಕಳೆದ ಒಂದು ವರ್ಷದಿಂದ ವಿವಿಧ ಸೌಲಭ್ಯಗಳಿಂದ ದೊಡ್ಡಸಂಖ್ಯೆಯಲ್ಲಿ ವಂಚಿತರಾಗುತ್ತಿದ್ದಾರೆ. ಈ ಬಗ್ಗೆ ಕಾರ್ಮಿಕ ಸಂಘಟನೆಗಳು ಹತ್ತಾರು ಬಾರಿ ಅವರನ್ನು ಭೇಟಿಯಾಗಿ ಅಹವಾಲುಗಳನ್ನು ಸಲ್ಲಿಸಿದ್ದರೂ ಸಮಸ್ಯೆಗಳು ಇತ್ಯರ್ಥವಾಗಿಲ್ಲ, ಈ ಅಂಶಗಳತ್ತ ಸಹ ಸಚಿವರು ಗಮನಹರಿಸಬೇಕು ಎಂದು ಆಗ್ರಹಪಡಿಸಿದೆ.



ದೇಶದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಕಾನೂನು ಹಾಗೂ ಕಲ್ಯಾಣ ಮಂಡಳಿ ಜಾರಿಗೆ ಪ್ರಮುಖ ಪಾತ್ರವಹಿಸಿದ ಸಂಘಟನೆಗಳನ್ನೇ ದೂರ ಮಾಡುವ ವ್ಯವಸ್ಥಿತ ಪ್ರಯತ್ನಗಳನ್ನು ಸಚಿವರೂ ಸೇರಿದಂತೆ ಮಂಡಳಿ ಅಧಿಕಾರಿಗಳು ಮಾಡುತ್ತಿದ್ದಾರೆ ಎಂದು ಆರೋಪಿಸಿರುವ ಸಿ.ಡಬ್ಲ್ಯೂ.ಎಫ್.ಐ. ಮುಖಂಡರು, ಇಂತಹ ಪ್ರಯತ್ನಗಳನ್ನು ಕೈಬಿಡಬೇಕು ಎಂದು ಒತ್ತಾಯಿಸಿದ್ದಾರೆ.

ಜೂನ್ 28 ರಂದು ರಾಯಚೂರು, ತುಮಕೂರು, ಪಾವಗಡ, ಹರಪನಹಳ್ಳಿ, ಉಡುಪಿ ಕುಂದಾಪುರ, ಬೈಂದೂರು, ಹಗರಿ ಬೊಮ್ಮನಹಳ್ಳಿ, ದಾವಣಗೆರೆ, ಧಾರವಾಡ, ಕೋಲಾರ, ವಿಜಯನಗರ ಜಿಲ್ಲೆಯ ಹೊಸಪೇಟೆ ಸೇರಿದಂತೆ ಹಲವು ಕಡೆಗಳಲ್ಲಿ ಜಂಟಿ ಹೋರಾಟಗಳು ಯಶಸ್ವಿಯಾಗಿ ಜರುಗಿವೆ.

ಈ ವಿಷಯವಾಗಿ ಮಧ್ಯಪ್ರವೇಶಿಸುವಂತೆ ಒತ್ತಾಯಿಸಿ ಆಗಸ್ಟ್ ಮೊದಲ ವಾರದಲ್ಲಿ ಸಾವಿರಾರು ಕಾರ್ಮಿಕರಿಂದ 'ಮುಖ್ಯಮಂತ್ರಿ ಮನೆ ಚಲೋ' ನಡೆಸಲು ಸಂಘಟನೆಗಳು ನಿರ್ಧರಿಸಿವೆ.

ಕಟ್ಟಡ ನಿರ್ಮಾಣ ಕಾರ್ಮಿಕರ ಇಬ್ಬರು ಮಕ್ಕಳಿಗೆ ದಂಡಸಹಿತ ಶೈಕ್ಷಣಿಕ ಧನಸಹಾಯ ಪಾವತಿ ಪ್ರತಿಯೊಂದು ಖರ್ಚಿನ ಲೆಕ್ಕ ಮಂಡಿಸುವಂತೆ ಹೈಕೋರ್ಟ್ ಆದೇಶ

ಹೈಕೋರ್ಟ್ ಮಧ್ಯಂತರ ಆದೇಶದನ್ವಯ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯು, ಕಟ್ಟಡ ನಿರ್ಮಾಣ ಕಾರ್ಮಿಕರ ಇಬ್ಬರು ಮಕ್ಕಳಿಗೆ ದಂಡಸಹಿತ ಶೈಕ್ಷಣಿಕ ಧನಸಹಾಯ (ರೂ. 60,000 ಹಾಗೂ ರೂ. 55,000) ಪಾವತಿಸಿದೆ. ಇಬ್ಬರು ವಿದ್ಯಾರ್ಥಿನಿಯರಿಗೆ ಧನಸಹಾಯ ಪಾವತಿಸಿದ ಮಾತ್ರಕ್ಕೆ ಈ ವಿಚಾರಣೆ ಇಲ್ಲಿಗೆ ನಿಲ್ಲುವುದಿಲ್ಲ ಎಂದಿರುವ ನ್ಯಾಯಪೀಠವು, ಕಲ್ಯಾಣ ಮಂಡಳಿಯಲ್ಲಿರುವ ಪ್ರತಿಯೊಂದು ರೂಪಾಯಿಯು ಬಡ ಕಾರ್ಮಿಕರ ಕಲ್ಯಾಣ ಮತ್ತು ಮಕ್ಕಳ ಶೈಕ್ಷಣಿಕ ಬದುಕಿಗೆ ಖರ್ಚು ಮಾಡಬೇಕು, ಮಂಡಳಿಯು ಮಾಡುತ್ತಿರುವ ಪ್ರತಿಯೊಂದು ಖರ್ಚಿನ ಲೆಕ್ಕವನ್ನು ನ್ಯಾಯಾಲಯದ ಮುಂದೆ ಮಂಡಿಸಬೇಕು ಎಂದು ಆದೇಶಿಸಿದೆ.

ಸಿಐಟಿಯು ಸಂಯೋಜಿತ 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್ (CWFI)' ಮತ್ತು ಇತರೆ ನಾಲ್ಕು ಜನರು ಹೈಕೋರ್ಟ್ ನಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆಯನ್ನು ಏಪ್ರಿಲ್ 23 ರಂದು ನಡೆಸಿದ್ದ ನ್ಯಾಯಮೂರ್ತಿ ಶ್ರೀ ನಾಗಪ್ರಸನ್ನ ಅವರ ಏಕಸದಸ್ಯ ಪೀಠವು, ಎಲ್.ಎಲ್.ಬಿ. ಹಾಗೂ ಎಂ.ಬಿ.ಎ. ಓದುತ್ತಿರುವ ಇಬ್ಬರು ವಿದ್ಯಾರ್ಥಿನಿಯರಿಗೆ 2021 ರ ಅಧಿಸೂಚನೆ ಅನ್ವಯ ಶೈಕ್ಷಣಿಕ ಧನ ಸಹಾಯ ಪಾವತಿಸಲು ಆದೇಶಿಸಿತ್ತು. ಮಕ್ಕಳನ್ನು ನ್ಯಾಯಾಲಯದ ಮೆಟ್ಟಿಲು ಹತ್ತುವಂತೆ ಮಾಡಿದ ಕಲ್ಯಾಣ ಮಂಡಳಿಗೆ ತಲಾ ರೂ. 25 ಸಾವಿರ ದಂಡ ವಿಧಿಸಿ ನಾಲ್ಕು ವಾರದೊಳಗೆ ಪಾವತಿಸಲು ಆದೇಶಿಸಿತ್ತು. ಆದರೆ ನ್ಯಾಯಾಲಯದ ಆದೇಶವನ್ನು ಪಾಲಿಸದೇ ಕಲ್ಯಾಣ ಮಂಡಳಿ ವಿಳಂಬ ಧೋರಣೆ ಅನುಸರಿಸಿತ್ತು.

ಜೂನ್ 7 ರಂದು ಈ ರಿಟ್ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಂಡ ನ್ಯಾಯಮೂರ್ತಿಗಳು, ಬಡ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಧನಸಹಾಯ ನೀಡಲು ಮಾಡಿದ ಆದೇಶವನ್ನು ಜಾರಿಗೊಳಿಸದ ಕಲ್ಯಾಣ ಮಂಡಳಿಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಲ್ಲದೆ, ಕಠಿಣ ಕ್ರಮದ ಎಚ್ಚರಿಕೆ ನೀಡಿದ್ದರು. ಬಿಸಿಲು, ಮಳೆಯಲ್ಲಿ ಶ್ರಮಪಡುವ ಕಟ್ಟಡ ಕಾರ್ಮಿಕರ ದುಡಿಮೆಯಿಂದಾಗಿ ಸಾವಿರಾರು ಕೋಟಿ ಸೆಸ್ ಸಂಗ್ರಹವಾಗುತ್ತಿದೆ. ಅದನ್ನು ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಖರ್ಚುಮಾಡಬೇಕೆ ಹೊರತು ಅಧಿಕಾರಿಗಳ ಓಡಾಟ ಮತ್ತು ಐಶಾರಾಮಿ ಜೀವನಕ್ಕಲ್ಲ ಎಂದು ಮಂಡಳಿ ನಡೆಯನ್ನು ಟೀಕಿಸಿದ್ದರು. ಅಲ್ಲದೆ ಮಂಡಳಿಯಲ್ಲಿ ಸಂಗ್ರಹವಿರುವ ರೂ. 6700 ಕೋಟಿ ಹಣದ ವಿವರಗಳನ್ನು ಪೀಠದ ಮುಂದೆ ಮಂಡಿಸಲು ತಾಕೀತು ಮಾಡಿ ವಿಚಾರಣೆಯನ್ನು ಮುಂದೂಡಿದ್ದರು.

ಸೆಸ್ ಹಣ ಕಾರ್ಮಿಕರ ಕಲ್ಯಾಣಕ್ಕಾಗಿ ಖರ್ಚುಮಾಡಿ ಎಂದ ಕೋರ್ಟ್

ಪುನಃ ಜೂನ್ 25ರಂದು ವಿಚಾರಣೆ ಆರಂಭಗೊಂಡಾಗ, ರಾಜ್ಯ ಸರ್ಕಾರ ಹಾಗೂ ಕಲ್ಯಾಣ ಮಂಡಳಿ ಪ್ರತಿನಿಧಿಸಿ ಸರ್ಕಾರದ ಅಡ್ವೋಕೇಟ್ ಜನರಲ್ ಶಶಿಕಿರಣ ಶೆಟ್ಟಿ ಹಾಜರಾಗಿದ್ದರು. ಅವರು "ಕಲ್ಯಾಣ ಮಂಡಳಿಯು ಈಗಾಗಲೇ 6 ಲಕ್ಷ ವಿದ್ಯಾರ್ಥಿಗಳಿಗೆ ರೂ. 500 ಕೋಟಿ ಶೈಕ್ಷಣಿಕ ಸಹಾಯಧನ ವಿತರಿಸಿದೆ. ಅಲ್ಲದೆ ಮಂಡಳಿಯಲ್ಲಿ 19 ಇತರೆ ಕಲ್ಯಾಣ ಕಾರ್ಯಕ್ರಮಗಳನ್ನು ಕಟ್ಟಡ ಕಾರ್ಮಿಕರಿಗಾಗಿ ಜಾರಿಗೊಳಿಸುತ್ತಿದೆ. ಆದ್ದರಿಂದ 2021 ಅಧಿಸೂಚನೆ ಅನ್ವಯ ಶೈಕ್ಷಣಿಕ ಧನಸಹಾಯ ನೀಡಲು ಕಷ್ಟವಾಗಲಿದೆ" ಎಂದು ವಾದಿಸಿದರು. ಆದರೆ ಅವರ ವಾದವನ್ನು ಒಪ್ಪದ ನ್ಯಾಯಮೂರ್ತಿಗಳು "ರಾಜ್ಯದಲ್ಲಿ ನಿರ್ಮಾಣ ಕಾಮಗಾರಿಗಳಿಂದ ಸಂಗ್ರಹವಾಗುವ ಸೆಸ್ ಹಣ ಕಾರ್ಮಿಕರ ಕಲ್ಯಾಣ ಮತ್ತು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡಬೇಕಲ್ಲವೇ" ಎಂದು ಪ್ರಶ್ನಿಸಿದ್ದರು.

ನಿಗದಿಗಿಂತ ಹೆಚ್ಚು ಖರ್ಚು: ಸಿಎಜಿ ವರದಿ ಉಲ್ಲೇಖಿಸಿ ವಾದ

ಜೂನ್ 25ರಂದು ಅರ್ಜಿದಾರರ ಪರವಾಗಿ ಹಾಜರಾಗಿದ್ದ ವಕೀಲ ಆದಿತ್ಯ ಚಟರ್ಜಿಯವರು, "2019 ರ ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ (ಸಿಎಜಿ)ಯ ವರದಿಯು, ಕರ್ನಾಟಕ ಕಟ್ಟಡ ನಿರ್ಮಾಣ ಕಲ್ಯಾಣ ಮಂಡಳಿಯು ತನ್ನ ಆಡಳಿತಾತ್ಮಕ ವೆಚ್ಚವನ್ನು ಕಾನೂನು ನಿಗದಿಪಡಿಸಿದ ಶೇ.5 ರಷ್ಟನ್ನು ಮೀರಿ, ಶೇ.9 ರಿಂದ ಶೇ.72 ರಷ್ಟು ಹೆಚ್ಚಾಗಿ ಖರ್ಚು ಮಾಡಿದೆ" ಎಂದು ಸಿಎಜಿ ವರದಿಯ ಅಂಶವನ್ನು ಉಲ್ಲೇಖಿಸಿದರು. ಅಲ್ಲದೆ ಹಿಂದೆ ಘಟನೋತ್ತರ ಅನುಮೋದನೆ ಮೂಲಕ ಮಂಡಳಿಯು ಇನ್ನೋವಾ ಕಾರುಗಳನ್ನು ಖರೀದಿಸಿ, ಮಂಡಳಿ ನಿಧಿಯನ್ನು ಅನಗತ್ಯವಾಗಿ ಖರ್ಚು ಮಾಡಿರುವ ಅಂಶಗಳತ್ತ ಬೆಳಕು ಚೆಲ್ಲಿದರು. ಅಲ್ಲದೆ, ಇದುವರೆಗೂ ಮಧ್ಯಂತರ ಆದೇಶದಂತೆ ಇಬ್ಬರು ವಿದ್ಯಾರ್ಥಿನಿಯರಿಗೆ ಹಣ ಪಾವತಿ ಮಾಡಿಲ್ಲ ಎನ್ನುವ ಸಂಗತಿಯನ್ನು ಪೀಠದ ಗಮನಕ್ಕೆ ತಂದಿದ್ದರು.

ಇದು ನೈಜ ಕಟ್ಟಡ ನಿರ್ಮಾಣ ಕಾರ್ಮಿಕರು ಕಾರ್ಮಿಕ ಸಂಘಟನೆ ಮೂಲಕ ನಡೆಸಿದ ಕಾನೂನು ಹೋರಾಟಕ್ಕೆ ಸಿಕ್ಕ ಮೊದಲ ಅತಿ ದೊಡ್ಡ ಗೆಲುವಾಗಿದೆ ಎಂದಿರುವ ಸಿಐಟಿಯು ಸಂಯೋಜಿತ 'ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಶನ್' (ಸಿ.ಡಬ್ಲ್ಯೂ.ಎಫ್.ಐ.) ಇದಕ್ಕೆ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಿದೆ.

ಮಹಾರಾಷ್ಟ್ರ: ಬುಡಕಟ್ಟು ಜನರ ಭೂಮಿ ಕಬಳಿಸಿದ್ದ ಬಿಜೆಪಿ ಗೂಂಡಾಗಳ ದೌರ್ಜನ್ಯ ವಿರೋಧಿಸಿ ಪ್ರತಿಭಟನೆ

ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರವು ಶಿವಸೇನೆ ಮತ್ತು ಎನ್.ಸಿ.ಪಿ. ಪಕ್ಷಗಳಲ್ಲಿ ಒಡಕು ಮೂಡಿಸಿರುವುದರಿಂದ ಲೋಕಸಭಾ ಚುನಾವಣೆಗಳಲ್ಲಿ ತಮ್ಮ ಒಕ್ಕೂಟವು ಬಾರಿ ಮೇಲುಗೈ ಸಾಧಿಸುತ್ತದೆ ಎಂಬ ಭ್ರಮೆಯಲ್ಲಿತ್ತು. ಇದೇ ಭ್ರಮೆಯಲ್ಲಿ ಜನಚಳುವಳಿಗಳ ಕಾರ್ಯಕರ್ತರು, ನಾಯಕರು, ಮುಖಂಡರ ಮೇಲೆಯೂ ನಾನಾ ರೀತಿಯ ದೌರ್ಜನ್ಯಗಳನ್ನು ನಡೆಸುತ್ತಿತ್ತು. ಸರಕಾರದ ಉಪ ಮುಖ್ಯಮಂತ್ರಿ ಬಿಜೆಪಿಯ ದೇವೇಂದ್ರ ಫಡ್ನವಿಸ್ ಕುಮ್ಮಕ್ಕಿನಿಂದ ಪಾಲ್ಘರ್ ಜಿಲ್ಲೆಯ ಪೋಲಿಸ್ ಅಧಿಕಾರಿಗಳು ಮತ್ತು ಜಿಲ್ಲಾಡಳಿತ ಜಿಲ್ಲೆಯ ಬುಡಕಟ್ಟು ಮಹಿಳೆಯರು ಸೇರಿದಂತೆ ಜನರ ಮೇಲೆ ದೌರ್ಜನ್ಯಕ್ಕೆ ನಿಂತಿದ್ದರು. ಅವರು ನಿರ್ದಿಷ್ಟವಾಗಿ ಸಿಪಿಐ(ಎಂ) ಪಕ್ಷದ ವಿರುದ್ಧ ಗುರಿ ಇಟ್ಟಿದ್ದರು. ಸುಳ್ಳು ಮೊಕದ್ದಮೆಗಳನ್ನು ಹಾಕುವುದು, ಬಿಜೆಪಿ ಗೂಂಡಾಗಳನ್ನು ಬಳಸಿಕೊಂಡು ಬುಡಕಟ್ಟು ಜನರ ಭೂಮಿ ಕಬಳಿಸುವುದು ಮಾಡುತ್ತಿದ್ದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎಐಕೆಎಸ್ ನಾಯಕ ಕಿರಣ ಗಹಲ ಮತ್ತು ಸಿಪಿಐ(ಎಂ) ಜಿಲ್ಲಾ ಮುಖಂಡರು ಮತ್ತು ಅಖಿಲ ಭಾರತ ಮಹಿಳಾ ಸಂಘಟನೆಯ ನಾಯಕಿ, ತಲಸರಿ ತೆಹಸಿಲ್ ಪಂಚಾಯತ್ ಸಮಿತಿ ಅಧ್ಯಕ್ಷೆ ಸುನಿತಾ ಶಿಂಗ್ಡ ವಿರುದ್ಧವು ಅವರು ಸುಳ್ಳು ಮೊಕದ್ದಮೆಗಳನ್ನು ಹಾಕಿದ್ದರು. ಈ ದೌರ್ಜನ್ಯಗಳ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿದ್ದವು.

ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಕೂಟಕ್ಕೆ ದೊಡ್ಡ ಮುಖಭಂಗವಾದ ನಂತರ ಬಿಜೆಪಿಯ ದೌರ್ಜನ್ಯಗಳ ವಿರುದ್ಧದ ಹೋರಾಟಕ್ಕೆ ಇನ್ನಷ್ಟು ಹುರುಪು ಬಂದಿತು. ಜೂನ್ 12 ಮತ್ತು ಜೂನ್ 19, 2024 ರಂದು ಥಾಣೆ–ಪಾಲ್ಘರ್ ಜಿಲ್ಲಾ ಸಮಿತಿ ನೇತೃತ್ವದಲ್ಲಿ ತಲಸರಿ ಮತ್ತು ವಿಕ್ರಮಗಡ ಪೋಲಿಸ್ ಠಾಣೆಗಳಿಗೆ ಮುತ್ತಿಗೆ ಹಾಕಿ ತೀವ್ರವಾದ ಪ್ರತಿಭಟನೆಯನ್ನು ದಾಖಲಿಸಲಾಗಿದೆ.

ಜೂನ್ 12 ರಂದು ತಲಸರಿ ಮತ್ತು ದಹನು ತೆಹಸಿಲ್‌ಗಳಿಂದ ಸಾವಿರಾರು ಜನರು ತಲಸರಿಯಲ್ಲಿ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು. ಹಾಗೆಯೇ ತೆಹಸೀಲ್ ಕಚೇರಿ ಮತ್ತು ಪೋಲಿಸ್ ಠಾಣೆಯ ಮುಂದೆ ತೀವ್ರ ಪ್ರತಿಭಟನೆ ನಡೆಸಿದರು. ಪ್ರತಿಭಟನೆಗೆ ಸ್ಪಂದಿಸಿ ಹಿರಿಯ ಅಧಿಕಾರಿಗಳು ಮಾತುಕತೆಗೆ ಮುಂದಾದದರು. ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಪೋಲಿಸ್ ಇನ್‌ಸ್ಪೆಕ್ಟರ್ ಹಾರಿದ್ದು ತಾನು ಸುನಿತಾ ಶಿಂಗ್ಡ ಅವರ ಭೂಮಿಯನ್ನು ಕಬಳಿಸಲು ಬಿಜೆಪಿ ನಾಯಕರಿಗೆ ಸಹಾಯ ಮಾಡಿರುವುದನ್ನು ಒಪ್ಪಿಕೊಳ್ಳಬೇಕಾಯಿತು. ಕರಜ್‌ಗಾಂವ್ ಗ್ರಾಮ ಪಂಚಾಯತಿಯಲ್ಲಿ ಈ ಬಿಜೆಪಿ ಮುಖಂಡ ಮತ್ತು ಆತನ ತಂಡವನ್ನು ಬಾರಿ ಬಹುಮತದೊಂದಿಗೆ ಸೋಲಿಸಿದ್ದರಿಂದ ಕೆರಳಿ ಈ ರೀತಿಯಲ್ಲಿ ಶಿಂಗ್ಡಾ ವಿರುದ್ಧ 'ಸೇಡು' ತೀರಿಸಿಕೊಳ್ಳಲು ಬಿಜೆಪಿ ಮುಖಂಡ ದೌರ್ಜನ್ಯದ ದಾರಿ ಹಿಡಿದಿದ್ದ.

ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ವಿಕ್ರಮಗಡ ತೆಹಸಿಲ್‌ನ ಡೋಲ್ಹರಿ ಗ್ರಾಮದಲ್ಲಿ ಮತದಾರರಿಗೆ ಹಣ ಹಂಚುತ್ತಿದ್ದ ಬಿಜೆಪಿ ಮುಖಂಡನನ್ನು ಪ್ರಶ್ನಿಸಿದ್ದೇ ಕಿರಣ್ ಗಹಲ ಅವರ ಅಪರಾಧವಾಯಿತು. ಗೂಂಡಾಗಳು ಕಿರಣ್ ಮೇಲೆ ಹಲ್ಲೆಗೆ ಯತ್ನಿಸಿದರು. ಕಿರಣ್ ಪೋಲಿಸ್ ಠಾಣೆಗೆ ದೂರು ಕೊಡಲು ಹೋದರೆ ಗಂಟೆಗಟ್ಟಲೆ ಕೇಸು ದಾಖಲಿಸದೇ ಕಾಯುವಂತೆ ಮಾಡಿ ಕೊನೆಗೆ ಕಿರಣರ ಮೇಲೆಯೇ ದೂರು ದಾಖಲಿಸಿಕೊಂಡಿದ್ದರು ಪೊಲೀಸರು. ಜೂನ್ 19 ರಂದು ವಿಕ್ರಮಗಡ, ಜವ್ಹಾರ್ ಮತ್ತು ವಾಡಾ ತೆಹಸೀಲ್‌ಗಳಿಂದ ಬಂದ ಪ್ರತಿಭಟನಾಕಾರರು ಊರಿನಲ್ಲಿ ಮೆರವಣಿಗೆ ನಡೆಸಿ ನಂತರ ಪೋಲಿಸ್ ಠಾಣೆಗೆ ಮುತ್ತಿಗೆ ಹಾಕಿ ಅಪರಾಧಿಗಳೊಂದಿಗೆ ಶಾಮೀಲಾಗುವ ಪೋಲಿಸರಿಗೆ ಎಚ್ಚರಿಕೆ ನೀಡಿದರು. ಸುರಿವ ಮಳೆ ಪ್ರತಿಭಟನೆಗೆ ಅಡ್ಡಿಯಾಗಲಿಲ್ಲ. ಇಲ್ಲಿಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ವಿರುದ್ಧ ಈಗಾಗಲೇ ಹಣ ವಸೂಲಿಗೆ ಸಂಬಂಧಿಸಿದಂತೆ ಹಲವು ಮೊಕದ್ದಮೆಗಳು ದಾಖಲಾಗಿದ್ದು, ಶಿಸ್ತು ಕ್ರಮ ಜರುಗದಿದ್ದರೆ ಹೋರಾಟವನ್ನು ತೀವ್ರಗೊಳಿಸುವ ಎಚ್ಚರಿಕೆ ನೀಡಲಾಗಿದೆ.

ಮುಸ್ಲಿಮರ ಮೇಲಿನ ಕ್ರೂರ ಕೋಮು ದಾಳಿಗಳು ಹಿನ್ನಡೆಗೆ ಪ್ರತೀಕಾರದ ಬಿಜೆಪಿಯ ಪ್ರಯತ್ನ

ಚುನಾವಣಾ ಫಲಿತಾಂಶಗಳ ನಂತರದ ಅವಧಿಯಲ್ಲಿ ದೇಶದ ವಿವಿಧ ಭಾಗಗಳಲ್ಲಿ ಮುಸ್ಲಿಂ ಸಮುದಾಯದವರ ಮೇಲೆ ನಡೆಯುತ್ತಿರುವ ದಾಳಿಗಳ ಹೆಚ್ಚಿವೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಖಂಡಿಸಿದೆ.

ಛತ್ತೀಸ್‌ಗಢದ ರಾಜಧಾನಿ ರಾಯ್‌ಪುರದಲ್ಲಿ ಎತ್ತುಗಳನ್ನು ಸಾಗಿಸುತ್ತಿದ್ದ ಮೂವರು ಮುಸ್ಲಿಂ ಪುರುಷರನ್ನು ಹಸು ಕಳ್ಳಸಾಗಣೆದಾರರು ಎಂದು ಬ್ರಾಂಡ್ ಮಾಡಿ ಗೋರಕ್ಷಕರು ಎಂದು ಕರೆಯುವವರಿಂದ ಕೊಲೆಗೋಡಾಗಿದ್ದಾರೆ. ಅಲಿಘರ್‌ನಲ್ಲಿ ಕಳ್ಳತನದ ಆರೋಪದ ಮೇಲೆ ಮುಸ್ಲಿಂ ವ್ಯಕ್ತಿಯನ್ನು ಹೊಡೆದು ಕೊಂದಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದೆ.

ಮಧ್ಯಪ್ರದೇಶದ ಮಂಡಲದಲ್ಲಿ ಮುಸ್ಲಿಮರ ಹನ್ನೊಂದು ಮನೆಗಳನ್ನು, ಅವರ ರೆಫ್ರಿಜರೇಟರ್‌ಗಳಿಂದ "ಗೋಮಾಂಸ" ವಶಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಿದ ವರದಿಗಳ 24 ಗಂಟೆಗಳ ಒಳಗೆ ಕೆಡವಲಾಯಿತು. ಲಕ್ನೋದ ಪ್ರಧಾನವಾಗಿ ಮುಸ್ಲಿಮರು ವಾಸಿಸುವ ಪ್ರದೇಶವಾದ ಅಕ್ಬರ್ ನಗರದಲ್ಲಿ, ನದಿ ಮುಂಭಾಗ ನಿರ್ಮಾಣಕ್ಕಾಗಿ ಸಾವಿರ ಕುಟುಂಬಗಳ ಮನೆಗಳನ್ನು ಬುಲ್ಡೋಜರ್‌ನಿಂದ ನೆಲಸಮ ಮಾಡಲಾಯಿತು ಎಂದಿದೆ.

ಗುಜರಾತ್‌ನ ವಡೋದರಾದಲ್ಲಿ. ಮುಖ್ಯಮಂತ್ರಿಗಳ ವಸತಿ ಯೋಜನೆಯಡಿ ಕಡಿಮೆ ಆದಾಯ ವರ್ಗದ ವಸತಿ ಸಮುಚ್ಚಯದಲ್ಲಿ ಮುಸ್ಲಿಂ ಮಹಿಳೆಗೆ ಫ್ಲ್ಯಾಟ್ ಮಂಜೂರು ಮಾಡಿದ್ದನ್ನು ವಿರೋಧಿಸಿ ಅಕ್ಕಪಕ್ಕದ ಹಿಂದೂ ಸಮುದಾಯಕ್ಕೆ ಸೇರಿದವರು ಬಹಿರಂಗ ಪ್ರತಿಭಟನೆ ಮಾಡಿದ್ದಾರೆ.

ಹಿಮಾಚಲ ಪ್ರದೇಶದ ನಹಾನ್‌ನಲ್ಲಿ ಈದ್–ಅಲ್–ಅಧಾ ಸಮಯದಲ್ಲಿ ಹಸುವನ್ನು ಬಲಿ ನೀಡಿದ್ದಾರೆ ಎಂಬ ಆರೋಪದ ನಂತರ ಮುಸ್ಲಿಂರೊಬ್ಬರ ಅಂಗಡಿಯನ್ನು ಲೂಟಿ ಮಾಡಿ ಧ್ವಂಸಗೊಳಿಸಲಾಗಿದೆ. ಗೋಹತ್ಯೆ ಆರೋಪದಡಿ ಅವರ ವಿರುದ್ಧ ಒಂದು ಪ್ರಕರಣವೂ ದಾಖಲಾಗಿದೆ. ಪಟ್ಟಣದಲ್ಲಿನ ಇತರ ಎಲ್ಲಾ 16 ಮುಸ್ಲಿಂ ಅಂಗಡಿ ಮಾಲೀಕರು ಘಟನೆಯ ನಂತರ ಊರು ಬಿಟ್ಟು ಪಲಾಯನ ಮಾಡಬೇಕಾಗಿ ಬಂದಿದೆ.

ದೆಹಲಿಯ ಸಂಗಮ್ ವಿಹಾರ್‌ನ ನಿವಾಸಿಗಳು ಪಲಾಯನ ಮಾಡುತ್ತಿರುವ ವರದಿಗಳಿವೆ. ಪೂಜಾ ಸ್ಥಳದ ಬಳಿ ಹಸುವಿನ ಕಳೇಬರ ಕಂಡು ಬಂದ ಮೇಲೆ, ಹಿಂದುತ್ವ ಸಂಘಟನೆಗಳ ಸದಸ್ಯರು ಮಾಡಿದ ಪ್ರಚೋದನಕಾರಿ ಭಾಷಣಗಳ ನಂತರದ ಗಂಭೀರ ಪರಿಸ್ಥಿತಿಯಿಂದಾಗಿ ಈ ಪಲಾಯನಗಳು ಸಂಭವಿಸಿವೆ.

ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಅನುಭವಿಸಿದ ಹಿನ್ನಡೆಯ ನಂತರ ಕೋಮುವಾದಿ ದಾಳಿಗಳ ಇಂತಹ ತೀಕ್ಷ್ಣತೆ, ಬಿಜೆಪಿ ಮತ್ತು ಹಿಂದುತ್ವ ಕೋಮುವಾದಿ ಶಕ್ತಿಗಳು ಒಂದು ನವೀಕೃತ ಪ್ರತೀಕಾರದ ಭಾವನೆಯೊಂದಿಗೆ ಧ್ರುವೀಕರಣದ ತಮ್ಮ ಪ್ರಯತ್ನಗಳನ್ನು ತೀವ್ರಗೊಳಿಸುತ್ತವೆ ಎಂಬ ವಾಸ್ತವವನ್ನು ಸ್ಪಷ್ಟವಾಗಿ ಎತ್ತಿ ತೋರಿಸುತ್ತಿವೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ಎಲ್ಲಾ ಘಟಕಗಳಿಗೆ ಬಿಜೆಪಿ ಮತ್ತು ಇತರ ಕೋಮುವಾದಿ ಸಂಘಟನೆಗಳ ಇಂತಹ ನಿರ್ಲಜ್ಜ ಕುತಂತ್ರಗಳ ವಿರುದ್ಧ ಜಾಗರೂಕತೆಯಿಂದ ಇರುವಂತೆ ಕರೆ ನೀಡಿದೆ. ವಾತಾವರಣವನ್ನು ಹಾಳುಗೆಡಹುವ ಕೆಟ್ಟ ಪ್ರಯತ್ನಗಳ ಮತ್ತು ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಪ್ರಯತ್ನಗಳ ವಿರುದ್ಧ ತಕ್ಷಣವೇ ದೇಶದಾದ್ಯಂತ ಪಕ್ಷದ ಘಟಕಗಳು ಪ್ರತಿಭಟನೆಗಳನ್ನು ಆಯೋಜಿಸಬೇಕು ಎಂದೂ ಕರೆ ನೀಡಿದೆ.

ಉತ್ತರ ಪ್ರದೇಶ ಸಂವಿಧಾನ ಮತ್ತು ಪ್ರಜಾಪ್ರಭುತ್ವ ರಕ್ಷಣೆಗಾಗಿ ಜನಾದೇಶ.....

ಪುಟ 2 ರಿಂದ

ಟಿಕೆಟ್ ನೀಡುತ್ತೇನೆ ಎಂದು ಹೇಳಿದ್ದಾರೆ. ಆದರೆ ಕೈಬಿಟ್ಟು ಹೋದ ದಲಿತ ಮತಗಳ ಸಂಬಂಧ ಅವರು ದಲಿತ ಸಮುದಾಯವನ್ನು ನಿಂದಿಸಿಲ್ಲ, ಟೀಕಿಸಿಲ್ಲ ಎಂಬುದನ್ನು ಗಮನಿಸಬೇಕಿದೆ. ದಲಿತ ಸಮುದಾಯದ ಗಣನೀಯ ವಿಭಾಗವು ಈ ಬಾರಿ ಬಿ.ಎಸ್.ಪಿ.ಯನ್ನು ಕೈಬಿಟ್ಟಿದ್ದರೂ ಮುಂದೆಯೂ ಹಾಗೆಯೇ ಮಾಡುತ್ತಾರೆ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿಯೂ ಇದೇ ಪ್ರವೃತ್ತಿ ಮುಂದುವರಿಯುತ್ತದೆ ಎಂದು ಈಗಲೇ ಖಚಿತವಾಗಿ ಹೇಳುವುದು ಸಾಧ್ಯವಿಲ್ಲ.

ಇಂಡಿಯಾ ಕೂಟದ ದೌರ್ಬಲ್ಯಗಳು

ಇಂಡಿಯಾ ಒಕ್ಕೂಟವು ಬಿಜೆಪಿ ಕೂಟವನ್ನು ಎದುರಿಸುವಲ್ಲಿ ಹಲವು ಸಂಘಟನಾತ್ಮಕವಾದ ಮತ್ತು ಸಮನ್ವಯಕ್ಕೆ ಸಂಬಂಧಿಸಿದ ದೌರ್ಬಲ್ಯಗಳು ಸಹ ಕಂಡುಬಂದವು. ಕಾಂಗ್ರೆಸ್–ಎಸ್.ಪಿ. ಪಕ್ಷಗಳ ಚುನಾವಣೆಗೆ ಸಂಬಂಧಿಸಿದ ಸಂಘಟನಾ ಕೆಲಸಗಳು ತುಂಬಾ ದುರ್ಬಲವಾಗಿದ್ದವು. ಹಲವಾರು ಕಡೆಗಳಲ್ಲಿ, ಗೆಲ್ಲಬೇಕೆಂಬ ದೃಢ ಪ್ರಯತ್ನದ ಕೊರತೆ ಕಾಣುತ್ತಿತ್ತು. ಬಿಜೆಪಿ ವಿರುದ್ಧದ ಜನರ ಆಕ್ರೋಶದ ಕಾರಣದಿಂದ ಮೈತ್ರಿಯು ಹೆಚ್ಚಿನ ಸ್ಥಾನಗಳನ್ನು ಗಳಿಸಿದ್ದರೂ ಸಹ ಎಸ್.ಪಿ. ಮತ್ತು ಕಾಂಗ್ರೆಸ್ ಪಕ್ಷಗಳ ನಡುವೆ ಆಂತರಿಕ ಸಮನ್ವಯದ ಕೊರತೆ ವ್ಯಾಪಕವಾಗಿ ಎದ್ದು ಕಾಣುತ್ತಿತ್ತು. ಬಹಳ ಮುಖ್ಯವಾಗಿ ಸಮಾಜವಾದಿ ಪಕ್ಷವು ಕಾಂಗ್ರೆಸ್ ಅನ್ನು ಹೊರತು ಪಡಿಸಿ, ಇಂಡಿಯಾ ಒಕ್ಕೂಟದ ಇತರ ಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಇತರೆಲ್ಲಾ ಪಕ್ಷಗಳನ್ನು ಎಸ್.ಪಿ.ಯು ವಿಶ್ವಾಸಕ್ಕೆ ತೆಗೆದುಕೊಂಡಿದ್ದರೆ ಬಿಜೆಪಿಯನ್ನು ಇನ್ನಷ್ಟು ಕ್ಷೇತ್ರಗಳಲ್ಲಿ ಸೋಲಿಸಲು ಸಾಧ್ಯವಾಗುತ್ತಿತ್ತು. ಎಸ್.ಪಿ. ಮುಖಂಡ ಅಖಿಲೇಶ್ ಯಾದವ್ ಸಿಪಿಐ(ಎಂ), ಸಿಪಿಐ ಪಕ್ಷಗಳೊಂದಿಗೆ ಸಹ ಮಾತುಕತೆ ನಡೆಸಲಿಲ್ಲ. ಹಲವು ಸಣ್ಣ ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದವು.

ಸಿಪಿಐ(ಎಂ) ಪ್ರಚಾರಾಂದೋಲನ

ಸಿಪಿಐ(ಎಂ) ಪಕ್ಷವು ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸದಿದ್ದರೂ, ರಾಜ್ಯದಲ್ಲಿ ಕೋಮುವಾದಿ ಬಿಜೆಪಿ ಪಕ್ಷವನ್ನು ಸೋಲಿಸುವ ನಿಟ್ಟಿನಲ್ಲಿ ಸ್ವತಂತ್ರವಾದ ಪ್ರಚಾರಾಂದೋಲನವನ್ನು ನಡೆಸಿತು. 'ಮೋದಿ ಕೀ ಝೂಟ್' ಅಂದರೆ 'ಮೋದಿಯ ಸುಳ್ಳುಗಳು' ಎಂಬ ಪಕ್ಷದ ಕೇಂದ್ರ ಸಮಿತಿಯ 5,000 ಕಿರುಹೊತ್ತಿಗೆಯನ್ನು ಹಂಚಿ ಪ್ರಚಾರ ನಡೆಸಿತು. ಇದಲ್ಲದೇ ಪ್ರತ್ಯೇಕ ಕರಪತ್ರವನ್ನು ಮುದ್ರಿಸಿ, ಜಾಥಾಗಳು ಮತ್ತು ಸಭೆಗಳನ್ನು ನಡೆಸಿ ಪ್ರಚಾರ ನಡೆಸಿತು. ಸಿಪಿಐ ಪಕ್ಷವು ಒಟ್ಟು 6 ಕ್ಷೇತ್ರಗಳಲ್ಲಿ ಸ್ಪರ್ಧಿಸಿತು. ಮತ್ತು ವಿಧಾನಸಭಾ ಉಪಚುನಾವಣೆಯ ಒಂದು ಕ್ಷೇತ್ರದಲ್ಲಿ ಸ್ವತಂತ್ರ ಅಭ್ಯರ್ಥಿಯನ್ನು ಬೆಂಬಲಿಸಿತು.

ಕೋಮುವಾದಿ ಕೂಟಕ್ಕೆ ಸಾಮಾಜಿಕ ಮಾಧ್ಯಮದ ಹೊಡೆತ

ಈ ಚುನಾಚಣೆಯಲ್ಲಿ ಸಾಮಾಜಿಕ ಮಾಧ್ಯಮದ ಪ್ರಚಾರ ತುಂಬಾ ಪರಿಣಾಮಕಾರಿಯಾಗಿತ್ತು. ಮೋದಿ ಕೂಟದ ಸುಳ್ಳುಗಳು, ಮೋದಿ ತೊಡೆಯ ಮೇಲೆ ಕುಳಿತ ನಾಯಿಗಳೋ ಎಂಬಂತೆ ಮೋದಿ ಪರ ಬೊಬ್ಬೆ ಹೊಡೆದ ಭಟ್ಟಂಗಿ ಮಾಧ್ಯಮಗಳ ಹಸಿಹಸಿ ಸುಳ್ಳುಗಳಿಗೆ, ಸತ್ಯದ ಪ್ರಖರ ಪ್ರತ್ಯುತ್ತರ ನೀಡಿ ಸುಳ್ಳು, ದ್ವೇಷ ಪ್ರಚಾರಗಳನ್ನು ಹಿಮ್ಮೆಟ್ಟಿಸಿದ್ದು ಈ ಸಾಮಾಜಿಕ ಮಾಧ್ಯಮದ ಹೆಗ್ಗಳಿಕೆ. ಇಂತಹ ಪ್ರಚಾರ ರಾಜ್ಯದ ಹಳ್ಳಿ ಹಳ್ಳಿಗಳನ್ನು ತಲುಪಿತು ಎಂಬುದು ಮತ್ತೊಂದು ಮಹತ್ವದ ವಿಷಯ.

ಮತಾಂಧ ಹಿಂದುತ್ವ ರಾಜಕಾರಣದ ಕೇಂದ್ರ ಬಿಂದುವಾದ ಉತ್ತರ ಪ್ರದೇಶದಲ್ಲಿ ಕೋಮುವಾದಿ ಮತ್ತು ಜಾತಿವಾದಿಯಾದ ಬಿಜೆಪಿಯನ್ನು ರಾಜ್ಯದ ಜನತೆ ಸೋಲಿಸಿರುವುದು ಒಂದು ಸಕಾರಾತ್ಮಕವಾದ ಬೆಳವಣಿಗೆಯಾಗಿದೆ. ಇಂಡಿಯಾ ಕೂಟವು ಜನತೆಗೆ ನೀಡಿದ ಭರವಸೆಗಳಿಗೆ ಜನ ಮತ ನೀಡಿದ್ದಾರೆ. ಮುಂದೆ ಜನರ ಬದುಕಿನ ಜ್ವಲಂತ ಪ್ರಶ್ನೆಗಳಾದ ಆಹಾರ, ಉದ್ಯೋಗ, ಆರೋಗ್ಯ, ಶಿಕ್ಷಣ, ಸಾಮಾಜಿಕ ನ್ಯಾಯ ಮುಂತಾದ ವಿಷಯಗಳ ಮೇಲೆ, ಜಾತಿ ದೌರ್ಜನ್ಯ, ಕೋಮುವಾದಿ ಹಿಂಸೆಗಳ ವಿರುದ್ಧ ಐಕ್ಯ ಜನಾಂದೋಲನ ಬಲಗೊಳ್ಳಬೇಕಿದೆ.

('ಪೀಪಲ್ಸ್ ಡೆಮಾಕ್ರೆಸಿ' ಪತ್ರಿಕೆಯ, ಹರಿಲಾಲ್ ಯಾದವ್ ಅವರ ಬರಹದ ಭಾವಾನುವಾದ ಮತ್ತು ವಿಸ್ತರಣೆ. ಆರ್. ರಾಮಕೃಷ್ಣ.)

ಸರಕಾರದ ಹೊರಗುತ್ತಿಗೆ ನೇಮಕಾತಿ ಹಾಗೂ ಏಜೆನ್ಸಿ ಟೆಂಡರ್‌ನಲ್ಲಿ ಸಮರ್ಪಕ ಮೀಸಲಾತಿ ಜಾರಿಗಾಗಿ ರಾಜ್ಯವ್ಯಾಪಿ ಪ್ರತಿಭಟನೆ

ಸರಕಾರದ ಹೊರಗುತ್ತಿಗೆ ನೇಮಕಾತಿಯಲ್ಲಿ ನೀತಿಯಲ್ಲಿನ ಕೊರತೆ ನೀಗಿಸಿ, ಸಮರ್ಪಕವಾದ ಮೀಸಲಾತಿ ಸೌಲಭ್ಯ ಒದಗಿಸಬೇಕು, ಹೊರಗುತ್ತಿಗೆ ನೌಕರರನ್ನು ಒದಗಿಸುವ ಹೊರ ಸಂಪನ್ಮೂಲ ಏಜೆನ್ಸಿ (ಟೆಂಡರ್)ಗಳಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಆದ್ಯತೆ ನೀಡುವಂತಾಗಬೇಕು, ಖಾಯಂ ನೌಕರರ ನೇಮಕಾತಿಯಲ್ಲಿ ಹೊರಗುತ್ತಿಗೆ ನೌಕರರಿಗೆ ಆದ್ಯತೆ ನೀಡಬೇಕು, ಸೇವಾಹಿರಿತನ ಇರುವ ಹೊರಗುತ್ತಿಗೆ ನೌಕರರನ್ನು ಖಾಯಂ ಮಾಡಬೇಕು, ಹೊರಗುತ್ತಿಗೆ ನೇಮಕಾತಿ ನೀತಿಗೆ ಬದಲಾಗಿ ಖಾಯಂ ನೇಮಕಾತಿ ನೀತಿ ಅನುಸರಿಸಬೇಕು ಮುಂತಾದ ಹಲವು ಬೇಡಿಕೆಗಳಿಗೆ ಆಗ್ರಹಿಸಿ ದಲಿತ ಹಕ್ಕುಗಳ ಸಮಿತಿ(ಡಿ.ಎಚ್.ಎಸ್.) ಕರ್ನಾಟಕ ರಾಜ್ಯ ಸಮಿತಿಯ ನೇತೃತ್ವದಲ್ಲಿ ಜುಲೈ 2, 2024 ರಂದು ರಾಜ್ಯಾದ್ಯಂತ ಹೋರಾಟಗಳು ನಡೆದಿವೆ.



ರಾಜ್ಯಕೇಂದ್ರ ಬೆಂಗಳೂರು ಉತ್ತರ ಮತ್ತು ದಕ್ಷಿಣ, ಮಂಡ್ಯ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ವಿಜಯನಗರ ಮುಂತಾದ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದ ವರದಿಗಳು ಬರುತ್ತಿವೆ. ರಾಜ್ಯವ್ಯಾಪಿ ಪ್ರತಿಭಟನೆಗಳ ಭಾಗವಾಗಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ದಲಿತ ಹಕ್ಕುಗಳ ಸಮಿತಿ ಬೆಂಗಳೂರು ಉತ್ತರ–ದಕ್ಷಿಣ ಸಮಿತಿಗಳು ಪ್ರತಿಭಟನೆ ನಡೆಸಿದವು. ಈ ಸಂದರ್ಭದಲ್ಲಿ ಡಿ.ಎಚ್.ಎಸ್. ರಾಜ್ಯಾಧ್ಯಕ್ಷರಾದ ಗೋಪಾಲಕೃಷ್ಣ ಹರಳಹಳ್ಳಿಯವರು ಪ್ರತಿಭಟನೆ ಉದ್ಘಾಟನೆ ಮಾಡಿ ಮಾತನಾಡುತ್ತಾ, ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ಕುರಿತ ಸರ್ಕಾರದ ಆದೇಶವನ್ನು ದಲಿತ ಹಕ್ಕುಗಳ ಸಮಿತಿ ರಾಜ್ಯ ಸಮಿತಿ ಸ್ವಾಗತಿಸುತ್ತದೆ, ಆದರೆ, ಆದೇಶದ ಮಾರ್ಗಸೂಚಿಯನ್ನು ಗಮನಿಸಿದಾಗ, ಇದು ದಲಿತರ ಮೂಗಿಗೆ ತುಪ್ಪ ಸವರುವ ನಿರ್ದಾರವಾಗಿದೆ. ಕಾರಣ, ಗುತ್ತಿಗೆದಾರರ ನೇಮಕಾತಿ ಪಟ್ಟಿಯಲ್ಲಿ 20 ಜನ ಇದ್ದರೆ ಮಾತ್ರ ಮಿಸಲಾತಿ ಎಂದು ತಿಳಿಸಿದೆ. ಈ ನಿರ್ಧಾರ ಸಮಂಜಸವಲ್ಲ. ನ್ಯಾಯವಲ್ಲ. ಹೀಗಾಗಿ ಆದೇಶಕ್ಕೆ ಕೆಲವು ಮಾರ್ಪಾಡು ಆಗಬೇಕೆಂದು ಒತ್ತಾಯಿಸಿದರು.

ವೇತನ ಆಯೋಗದ ವರದಿಯು 70,000 ಜನರನ್ನು ಹೊರಗುತ್ತಿಗೆಯಲ್ಲಿ ನೇಮಕಾತಿ ಮಾಡಲಾಗಿದೆ ಎಂದು ತಿಳಿಸುತ್ತದೆ. ಈ ನೌಕರರ ಕೆಲಸದ ಅವಧಿ 11 ತಿಂಗಳು ಮಾತ್ರ. ಇವರಿಗೆ ಕೆಲಸದ ಅವಧಿ ಭದ್ರತೆ ಇಲ್ಲ. ಆದ್ದರಿಂದ ಈ ಹೊರಗುತ್ತಿಗೆ ನೌಕರರಿಗೆ ಸೇವಾ ನಿಯಮಾವಳಿ ತಂದು ಕೆಲಸದ ಮೀಸಲಾತಿ ಭದ್ರತೆ ನೀಡಬೇಕು. ಆ ಮೂಲಕ ಮೀಸಲಾತಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಕೂಡ ಖಾಸಗೀಕರಣದ ನೀತಿಗಳ ಪರವಾಗಿದೆ. 1991 ರಲ್ಲಿ ಉದಾರೀಕರಣ, ಖಾಸಗೀಕರಣದ ನೀತಿಗಳನ್ನು ಆರಂಭಿಸಿದ್ದು, 1994 ರಲ್ಲಿ ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕಿದ್ದು ಆಗಿನ ಕಾಂಗ್ರೆಸ್ ಸರಕಾರದ ಪ್ರಧಾನಿ ಪಿ.ವಿ. ನರಸಿಂಹ ರಾವ್ ಎಂಬುದನ್ನು ಮರೆಯಬಾರದು. ಕಾಂಗ್ರೆಸ್‌ನ ಉದಾರೀಕರಣ ನೀತಿಗಳನ್ನು ಖಂಡಿಸಿ ತೀವ್ರತರ ಹೋರಾಟ ನಡೆಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಡಿ.ಎಚ್.ಎಸ್. ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರಾಜಣ್ಣ, ಉಪಾಧ್ಯಕ್ಷರಾದ ರಾಜಶೇಖರ ಮೂರ್ತಿ ಬಿ., ಒಳಚರಂಡಿ ಮಂಡಳಿ ಎಸ್ಸಿ/ಎಸ್ಟಿ ನೌಕರರ ಸಂಘದ ಅಧ್ಯಕ್ಷರಾದ ಚಂದ್ರಶೇಖರ್ ಮತ್ತು ಸಿ.ಐ.ಟಿ.ಯು. ಜಿಲ್ಲಾ ಮುಖಂಡರಾದ ಡಿ.ಚಂದ್ರಶೇಖರ್ ಮಾತಾಡಿದರು. ದಕ್ಷಿಣ ಜಿಲ್ಲಾ ಸಮಿತಿ ಅಧ್ಯಕ್ಷರಾದ ಮಾದೇಶ ಸ್ವಾಗತಿಸಿದರು. ಉತ್ತರ ಜಿಲ್ಲಾ ಉಪಾಧ್ಯಕ್ಷರಾದ ಶರಣಪ್ಪ ವಾಲಿ ವಂದಿಸಿದರು. ಉತ್ತರ ಜಿಲ್ಲಾ ಅಧ್ಯಕ್ಷರಾದ ಹೆಚ್.ಜಿ. ನಾಗಣ್ಣ ನಿರ್ವಹಣೆ ಮಾಡಿದರು. ಜಿಲ್ಲಾ ಮುಖಂಡರಾದ ಜಿ. ಚಂದ್ರಶೇಖರ್, ರವಿಚಂದ್ರನ್ ಮುಂತಾದವರು ಪಾಲ್ಗೊಂಡಿದ್ದರು. ಪ್ರತಿಭಟನೆಯ ಭಾಗವಾಗಿ ಈ ಕೆಳಕಂಡ ಅಂಶಗಳು ಮತ್ತು ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರವನ್ನು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಿಗೆ ಮುಖ್ಯಮಂತ್ರಿಗಳ ಉಪ ಕಾರ್ಯದರ್ಶಿಗಳ ಮೂಲಕ ಸಲ್ಲಿಸಲಾಯಿತು.

ಮನವಿ ಪತ್ರದ ಸಾರಾಂಶ

ಕರ್ನಾಟಕ ರಾಜ್ಯ ಸರ್ಕಾರ "ಹೊರಗುತ್ತಿಗೆ ನೇಮಕಾತಿ" ಯಲ್ಲಿ ಮೀಸಲಾತಿಯನ್ನು ಅಳವಡಿಸಲು ಮುಂದಾಗಿರುವುದನ್ನು 'ದಲಿತ ಹಕ್ಕುಗಳ ಸಮಿತಿ–ಕರ್ನಾಟಕ', ರಾಜ್ಯ ಸಮಿತಿ ಸ್ವಾಗತಿಸುತ್ತದೆ. ಆದರೆ 21.12.2023 ರಂದು ಸಂಪುಟ ಸಭೆಯಲ್ಲಿ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ನೀತಿಯನ್ನು ಜಾರಿಗೊಳಿಸಿರುವ ನಿರ್ಣಯದಲ್ಲಿ ಗಂಭೀರವಾದ ಲೋಪಗಳಿವೆ. ಉದಾಹರಣೆ: ರಾಜ್ಯ ಸರ್ಕಾರ ಹೊರಡಿಸಿರುವ ಸುತ್ತೋಲೆ (ಸಂಖ್ಯೆ:ಸಿಆಸುಇ06ಸೆನೆನಿ2024/20–5–2024) ಯಲ್ಲಿನ "6 ಸೂಚನೆಯಲ್ಲಿ ಕನಿಷ್ಠ 20 ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಸಂದರ್ಭದಲ್ಲಿ ಮಾತ್ರ ಮೀಸಲಾತಿ ನೀತಿಯನ್ನು ಜಾರಿಗೊಳಿಸತಕ್ಕದ್ದು" ಎಂದು ಸೂಚಿಸಲಾಗಿದೆ. ಹೀಗಾದಲ್ಲಿ ಹೆಸರಿಗೆ ಮಾತ್ರ ಹೊರಗುತ್ತಿಗೆಯಲ್ಲಿ ಮೀಸಲಾತಿ ಜಾರಿ ಎಂಬಂತೆ ಆಗುತ್ತದೆ. ಹೀಗಾಗಿ ಖಾಯಂ ನೇಮಕಾತಿಗೆ ಅನುಸರಿಸುವ ಮೀಸಲಾತಿ ಮಾನದಂಡವನ್ನೇ ಹೊರಗುತ್ತಿಗೆ ನೌಕರರ ನೇಮಕಾತಿ ಮೀಸಲಾತಿಯಲ್ಲೂ ಅಳವಡಿಸಿಕೊಳ್ಳಬೇಕಿದೆ.

ಸಂವಿಧಾನದ ಮೂಲ ಆಶಯ ಮತ್ತು ಸಾಮಾಜಿಕ ನ್ಯಾಯವನ್ನು ಖಾತ್ರಿ ಪಡಿಸಲೆಂದು ದಲಿತ–ಹಿಂದುಳಿದ, ಅಲ್ಪ ಸಂಖ್ಯಾತರು ಸೇರಿದಂತೆ ದುಡಿಯುವ ಜನತೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರವನ್ನು ಬೆಂಬಲಿಸಿರುವುದು ಎಂಬುದನ್ನು ರಾಜ್ಯ ಸರ್ಕಾರ ಮರೆಯಬಾರದು. ಹೀಗಿರುವಾಗ ಹೊರಗುತ್ತಿಗೆ ನೇಮಕಾತಿ ಮೀಸಲಾತಿ ಅಳವಡಿಸುವ ನೀತಿಯಲ್ಲಿ ಆಗಿರುವ ಲೋಪವನ್ನು ಕೂಡಲೇ ತಿದ್ದುಪಡಿ ಮಾಡಿಕೊಳ್ಳಬೇಕೆಂದು 'ದಲಿತ ಹಕ್ಕುಗಳ ಸಮಿತಿ–ಕರ್ನಾಟಕ' ರಾಜ್ಯ ಸಮಿತಿ ಈ ಮೂಲಕ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ.

ಎರಡನೆಯದಾಗಿ ತುಂಬಾ ಮುಖ್ಯವಾಗಿ ಹೊರಗುತ್ತಿಗೆಯಲ್ಲಿ ಮೀಸಲಾತಿ ಜಾರಿಗೊಳಿಸುವಾಗ ಬರೀ ನೌಕರರ ನೇಮಕಾತಿಯಲ್ಲಿ ಮೀಸಲಾತಿ ಅಳವಡಿಸುವುದಷ್ಟೇ ಅಲ್ಲ, ಹೊರಗುತ್ತಿಗೆ ನೌಕರರನ್ನು ಒದಗಿಸುವ ಹೊರ ಸಂಪನ್ಮೂಲ ಏಜೆನ್ಸಿ (ಟೆಂಡರ್)ಗಳಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಆದ್ಯತೆ ನೀಡುವಂತಾಗಬೇಕು.

ಜೊತೆಗೆ ತುಂಬಾ ಮುಖ್ಯವಾಗಿ ರಾಜ್ಯ ಸರ್ಕಾರ 'ಆಡಳಿತ ಸುಧಾರಣೆ' ಹೆಸರಿನಲ್ಲಿ ವಾಹನ ಚಾಲಕರು, ಡಾಟಾ ಎಂಟ್ರಿ ಆಪರೇಟರ್ಸ್, ಸ್ವಚ್ಛತಾ ಸಿಬ್ಬಂದಿ, ಗ್ರೂಪ್ ಡಿ ಹುದ್ದೆಗಳು ಲಕ್ಷ ಲಕ್ಷ ನೌಕರರನ್ನು ಅಭದ್ರಗೊಳಿಸಿ ಸಂಪೂರ್ಣವಾಗಿ ಹೊರಗುತ್ತಿಗೆ ನೌಕರರನ್ನಾಗಿ ಮಾಡುವ ಮುಖಾಂತರ ಉದ್ಯೋಗ ಭದ್ರತೆಯನ್ನು ನಾಶಗೊಳಿಸಲು ಹೊರಟಿದೆ.

ಹೀಗಾಗಿ ಹೊರಗುತ್ತಿಗೆ ನೇಮಕಾತಿ ನೌಕರರಾಗುವವರೆಲ್ಲರೂ (ಮೀಸಲಾತಿಯಿಂದಲೂ ಆಯ್ಕೆಯಾಗಿರುವವರೂ ಸೇರಿದಂತೆ) ನಿರಂತರವಾಗಿ ಹೊರಗುತ್ತಿಗೆ ಆಧಾರದಲ್ಲಿ 11 ತಿಂಗಳಿಗೆ ಮಾತ್ರ ಕೆಲಸ ಎಂಬ ನೀತಿಯನ್ನು ರಾಜ್ಯ ಸರ್ಕಾರವೇ ಅಧಿಕೃತವಾಗಿ ಅನುಸರಿಸಲು ಮುಂದಾಗಿದೆ. ಇದರಿಂದಾಗಿ ಸಂವಿಧಾನದ ಅನುಚ್ಛೇದ 21 ಹಾಗೂ ರಾಜ್ಯ ನಿರ್ದೇಶಕ ತತ್ವದ ಅನುಚ್ಛೇದ 39 ಎ–42 ಹಾಗೂ 43 ಕಲಂ ಹೇಳುವ ಹಾಗೆ ದುಡಿಮೆಗೆ ತಕ್ಕ ಜೀವನ ನಿರ್ವಹಣಾ ವೇತನ ಮತ್ತು ಸೇವಾ ಹಿರಿತನಕ್ಕೆ ತಕ್ಕ ಬಡ್ತಿ ಮತ್ತು ಇತರೆ ಅಗತ್ಯಗಳನ್ನು ಖಾತ್ರಿಗೊಳಿಸಬೇಕೆಂಬುದನ್ನು ರಾಜ್ಯ ಸರ್ಕಾರವೇ ನಿರಾಕರಿಸುವಂತಹ ಮಟ್ಟಕ್ಕೆ ಇಳಿದಂತಾಗಿದೆ. ಈಗಾಗಲೇ ದಲಿತರು ಭೂಹೀನರಾಗಿ, ಕೃಷಿ, ವಾಣಿಜ್ಯ ಕ್ಷೇತ್ರಗಳಲ್ಲಿ ಇತರೆ ಸಮುದಾಯಗಳಿಗೆ ಹೋಲಿಸಿದಲ್ಲಿ ತುಂಬಾ ಹಿಂದುಳಿದಿರುವುದು ಸರ್ಕಾರಕ್ಕೆ ತಿಳಿದ ವಿಚಾರವಾಗಿದೆ. ಹೀಗಿರುವಾಗ ಸಂವಿಧಾನದ ಮೂಲ ಆಶಯಗಳಲ್ಲಿ ಒಂದಾದ "........ಎಲ್ಲ ಪ್ರಜೆಗಳಿಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು........" ಈಡೇರಿಸುವಂತಹ ನೀತಿಗಳನ್ನು ಜಾರಿಗೆ ತರುವ ಬದಲಾಗಿ ಸಂವಿಧಾನದ ಆಶಯಕ್ಕೆ ವಿರುದ್ಧವಾದ ನೀತಿಗಳನ್ನು ರಾಜ್ಯ ಸರ್ಕಾರವೇ ಅನುಸರಿಸುವುದು ದಲಿತ ವಿರೋಧಿ ಧೋರಣೆಯಾಗಿದೆ. ದಲಿತರಿಗೆ ಹೊರಗುತ್ತಿಗೆಯಲ್ಲೂ ಮೀಸಲಾತಿ ಜಾರಿಗೊಳಿಸುತ್ತಿದ್ದೇವೆ ಎನ್ನುವುದು ಹೆಸರಿಗೆ ಮಾತ್ರ ಎಂಬಂತಾಗಿದೆ.

ಹೀಗಾಗಿ ಜವಾಬ್ದಾರಿಯುತ ರಾಜ್ಯ ಸರ್ಕಾರ ಈ ಕೆಳಕಂಡಂತೆ ಹೊರಗುತ್ತಿಗೆ ನೇಮಕಾತಿ ಮೀಸಲಾತಿ ಅಳವಡಿಸಬೇಕೆಂದು ದಲಿತ ಹಕ್ಕುಗಳ ಸಮಿತಿ–ಕರ್ನಾಟಕ, ರಾಜ್ಯ ಸಮಿತಿ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತದೆ.

ನಿರ್ದಿಷ್ಟ ಬೇಡಿಕೆಗಳು

1. ಹೊರಗುತ್ತಿಗೆ ನೇಮಕಾತಿ ಮೀಸಲಾತಿಯಲ್ಲೂ ಖಾಯಂ ನೇಮಕಾತಿ ಮೀಸಲಾತಿ ನಿಯಮವನ್ನೇ ಅನುಸರಿಸಬೇಕು.
2. ಎಲ್ಲಾ ಹೊರಗುತ್ತಿಗೆ ನೌಕರರನ್ನು ಖಾಯಂಗೊಳಿಸಿ.
3. ಹೊರ ಸಂಪನ್ಮೂಲ ಏಜೆನ್ಸಿಗಳಲ್ಲೂ (ಟೆಂಡರ್) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಆದ್ಯತೆಯನ್ನು ನೀಡಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೊರ ಸಂಪನ್ಮೂಲ ಏಜೆನ್ಸಿಗಳು ಕೂಡ ಹೊರ ಗುತ್ತಿಗೆ ನೌಕರರನ್ನು ಒದಗಿಸುವಂತಹ ಅವಕಾಶವನ್ನು ಖಾತ್ರಿಗೊಳಿಸಬೇಕು.
4. ಹೊರಗುತ್ತಿಗೆ ಆಧಾರದಲ್ಲಿ ನೇಮಕವಾದವರನ್ನು ಪ್ರತಿ 11 ತಿಂಗಳ ನಂತರ ಕೈಬಿಡುವುದನ್ನು ನಿಲ್ಲಿಸಿ, ಅವರನ್ನೇ ಮುಂದುವರೆಸಿ, ಕನಿಷ್ಟ 5 ವರ್ಷ ಗುತ್ತಿಗೆ ಆಧಾರದಲ್ಲಿ ದುಡಿದವರಿಗೆ ಖಾಯಂ ನೇಮಕಾತಿ ಮಾಡುವ ಸಂದರ್ಭದಲ್ಲಿ ಮೊದಲ ಆದ್ಯತೆ ನೀಡಬೇಕು ಮತ್ತು ಕನಿಷ್ಟ 10 ವರ್ಷ ಹೊರಗುತ್ತಿಗೆ ನೌಕರರಾಗಿ ದುಡಿದವರನ್ನು ಖಾಯಂಗೊಳಿಸಬೇಕು.
5. ಹೊರ ಗುತ್ತಿಗೆ ನೌಕರರಿಗೆ ಏಜೆನ್ಸಿಗಳಿಂದ ಅನ್ಯಾಯ ಆಗುವುದನ್ನು ತಪ್ಪಿಸಲು ವೇತನವನ್ನು ನೌಕರರ ಬ್ಯಾಂಕ್ ಖಾತೆಗೆ ನೇರವಾಗಿ ಹಾಕುವ ಕ್ರಮ ತತ್‌ಕ್ಷಣ ಜಾರಿಗೆ ಬರಬೇಕು.
6. ಎಲ್ಲಾ ಸರ್ಕಾರಿ ಇಲಾಖೆಗಳು, ಮಂಡಳಿಗಳು, ವಿ.ವಿ.ಗಳು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು.
7. ರಾಜ್ಯ ಸರ್ಕಾರ ಬಂಡವಾಳಶಾಹಿ–ಕಾರ್ಪೊರೇಟ್ ಕಂಪನಿಗಳ ಪರವಾದ ಉದಾರೀಕರಣ–ಖಾಸಗೀಕರಣ ನೀತಿಗಳನ್ನು ಕೈ ಬಿಟ್ಟು, ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ತುಂಬಬೇಕು. ಅಭದ್ರ ಉದ್ಯೋಗದ 11 ತಿಂಗಳ ಹೊರಗುತ್ತಿಗೆ ನೇಮಕಾತಿ ಪದ್ಧತಿ ರದ್ದುಮಾಡಿ, ಖಾಯಂ ಆಗಿ ನೇರ ನೇಮಕಾತಿ ಮಾಡಿಕೊಳ್ಳಬೇಕು.

ಈ ಮೇಲ್ಕಂಡ ಬೇಡಿಕೆಗಳನ್ನು ಈಡೇರಿಸಬೇಕೆಂದು ರಾಜ್ಯದಾದ್ಯಂತ ಜುಲೈ 2, 2024 ರಂದು ಜಿಲ್ಲಾ–ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸುವ ಮುಖಾಂತರ ದಲಿತ ಹಕ್ಕುಗಳ ಸಮಿತಿ–ಕರ್ನಾಟಕ, ರಾಜ್ಯ ಸಮಿತಿಯು ರಾಜ್ಯ ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸುತ್ತಿದೆ.

ಈ ನಮ್ಮ ಮನವಿಯನ್ನು ರಾಜ್ಯ ಸರ್ಕಾರ ಪರಿಗಣಿಸಿ, ಹೊರಗುತ್ತಿಗೆ ನೇಮಕಾತಿ ಮೀಸಲಾತಿ ನೀತಿಯಲ್ಲಿ ಮಾರ್ಪಾಡು ಮಾಡಿಕೊಂಡು, ಈ ಮೇಲಿನ ಅಂಶಗಳನ್ನು ಅಳವಡಿಸಿಕೊಂಡು ಪುನರ್ ಆದೇಶವನ್ನು ಹೊರಡಿಸಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ತೀವ್ರತರ ಹೋರಾಟಕ್ಕೆ ಮುಂದಾಗಬೇಕಾಗುತ್ತದೆಂದು ಈ ಮೂಲಕ ರಾಜ್ಯ ಸರ್ಕಾರದ ಗಮನಕ್ಕೆ ದಲಿತ ಹಕ್ಕುಗಳ ಸಮಿತಿ–ಕರ್ನಾಟಕ, ರಾಜ್ಯ ಸಮಿತಿ ತರಬಯಸುತ್ತದೆ.

ತುರ್ತು ಪರಿಸ್ಥಿತಿ ಘೋಷಿಸಿದ ಇಂದಿರಾ ಅವರಿಗೆ ಸಹಕರಿಸುವುದಾಗಿ ಪತ್ರ ಬರೆದ ಆರೆಸ್ಸೆಸ್

ಮೋದಿ ನೇತೃತ್ವದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ

ಜೂನ್ 25 ಇಂದಿರಾಗಾಂಧಿಯವರ ಆಡಳಿತದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದ ದಿನ. ಇದೇ ಜೂನ್ 24 ರಂದು ಲೋಕಸಭೆಯ ಮೊದಲ ದಿನದ ಸಮಾವೇಶದಲ್ಲಿ ನರೇಂದ್ರ ಮೋದಿಯವರು "ಪ್ರಜಾಪ್ರಭುತ್ವ ವರ್ಸಸ್ ತುರ್ತು ಪರಿಸ್ಥಿತಿ" ಎನ್ನುತ್ತ, ಪ್ರತಿಪಕ್ಷಗಳ ಮೇಲೆ, ವಿಶೇಷವಾಗಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಗೋಡಿ ಮಾಧ್ಯಮಗಳಲ್ಲಿ ಅವರ ಹೇಳಿಕೆಗಳು ಪ್ರಧಾನವಾಗಿ ಕಾಣಿಸಿಕೊಂಡವು.

ಭಾರತ ದೇಶದ ಪ್ರಜಾಪ್ರಭುತ್ವದ ಚರಿತ್ರೆಯಲ್ಲಿ ತುರ್ತು ಪರಿಸ್ಥಿತಿಯು ನಿಸ್ಸಂದೇಹವಾಗಿ ಒಂದು ಕರಾಳ ಅಧ್ಯಾಯ. ಆದರೆ ಬಹುತೇಕ ಫ್ಯಾಸಿಸ್ಟ್ ರೀತಿಯಲ್ಲಿ ಪ್ರಜಾಪ್ರಭುತ್ವವನ್ನು ಕೊಂದು ಸಂವಿಧಾನವನ್ನು ಬದಲಾಯಿಸಲು ತಯಾರಿ ನಡೆಸುತ್ತಿರುವ ವ್ಯಕ್ತಿಯ ಮಾತಿನಲ್ಲಿ ಪ್ರಜಾಪ್ರಭುತ್ವ ಎನ್ನುವುದು ಕಪಟತನವಲ್ಲದೆ ಬೇರೇನೂ ಅಲ್ಲ.

ತುರ್ತುಪರಿಸ್ಥಿತಿಯ ಕರಾಳ ದಿನಗಳು

ಸುಮಾರು ಅರ್ಧ ಶತಮಾನದ ಹಿಂದೆ, 1975 ಜೂನ್ 25 ರಂದು, ಭಾರತದ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹ್ಮದ್ ಅವರು, ಅಧಿಕೃತವಾಗಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದರು. ಅದಕ್ಕೆ ಕಾರಣ ಅಲಹಾಬಾದ್ ಹೈಕೋರ್ಟ್ ನ ತೀರ್ಪು. ಇದರ ಪ್ರಕಾರ 1971ರ ಚುನಾವಣೆಯಲ್ಲಿ ಇಂದಿರಾ ಗಾಂಧಿಯವರ ಆಯ್ಕೆ ಅಸಿಂಧುವಾಗಿತ್ತು. ಅಧಿಕಾರ ಕಳೆದುಕೊಳ್ಳುವ ಭಯದಿಂದ ಸರ್ಕಾರವು ಸಂವಿಧಾನದ ಆರ್ಟಿಕಲ್ 352 ಅನ್ನು ಅನ್ವಯಿಸಿ ತುರ್ತು ಪರಿಸ್ಥಿತಿಯನ್ನು ಹೇರಿತು. ಇದು ಮಾರ್ಚ್ 21, 1977 ರವರೆಗೆ ಮುಂದುವರೆಯಿತು. ಭಾರತದ ಪ್ರಜಾಪ್ರಭುತ್ವದ ಚರಿತ್ರೆಯಲ್ಲಿ ಅದೊಂದು ಕರಾಳ ಅವಧಿ.

ಪತ್ರಿಕಾ ಸ್ವಾತಂತ್ರ್ಯ ಮೊಟಕು

ತುರ್ತು ಪರಿಸ್ಥಿತಿ ಘೋಷಣೆಯಾದ ಕೂಡಲೇ ಸರ್ಕಾರ ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಒಂದು ಕಾನೂನನ್ನು ಜಾರಿಗೆ ತಂದಿತು. ಸರ್ಕಾರದ ನಿಯಂತ್ರಣದಲ್ಲಿರುವ ವಾರ್ತಾಪತ್ರಿಕೆಗಳು, ಆಕಾಶವಾಣಿ ಮತ್ತು ದೂರದರ್ಶನ ಇವುಗಳು ಮಾತ್ರ ಸರ್ಕಾರದ ವೈಭವವನ್ನು ಪ್ರಸಾರ ಮಾಡುತ್ತಲೇ ಇದ್ದವು. ವಾರ್ತಾಪತ್ರಿಕೆಗಳು, ನಿಯತಕಾಲಿಕೆಗಳಿಂದ ಅವರಿಗೆ ಅಹಿತಕರವಾದ ವಿಷಯಗಳನ್ನು ತೆಗೆದುಹಾಕಲು ಬ್ಯೂರೋ ಆಫ್ ಪ್ರೆಸ್ ಸೆನ್ಸಾರ್ಶಿಪ್ ಕೆಲಸ ಮಾಡಿತು. ಆದಾಗ್ಯೂ, ಕೆಲವು ಪತ್ರಿಕೆಗಳು ಮತ್ತು ಅನೇಕ ಪತ್ರಕರ್ತರು ಪ್ರಮುಖವಾದ ಸತ್ಯವನ್ನು ಹೇಳಲು ಪ್ರಯತ್ನಿಸಿದರು. ಪರಿಣಾಮವಾಗಿ, ಅನೇಕ ಸಂಪಾದಕರು ಮತ್ತು ಪತ್ರಕರ್ತರು ಬಂಧನಕ್ಕೊಳಗಾದರು.

MISA ಬಳಸಿ ವಿರೋಧ ಪಕ್ಷಗಳ ನಾಯಕರ ಬಂಧನ

ತುರ್ತುಪರಿಸ್ಥಿತಿಯ ಅವಧಿಯಲ್ಲಿ ಸಂಸದೀಯ ವ್ಯವಸ್ಥೆಯನ್ನು ನಿರ್ಲಕ್ಷ್ಯ ಮಾಡಿದರು. ವಿರೋಧ ಪಕ್ಷಗಳ ಮೇಲೆ ದಾಳಿಗಳು ಮತ್ತು ದೇಶಾದ್ಯಂತ ಸಾಮೂಹಿಕ ಬಂಧನಗಳು ನಡೆದವು. ಸಮಾವೇಶಗಳು, ಪ್ರದರ್ಶನಗಳು, ಮೆರವಣಿಗೆಗಳು, ಸಭೆಗಳನ್ನು ನಿಷೇಧಿಸಲಾಯಿತು. ಜ್ಯೋತಿ ಬಸು, ಜಯಪ್ರಕಾಶ್ ನಾರಾಯಣ್ ಮತ್ತು ಮೊರಾರ್ಜಿ ದೇಶಾಯಿ ಸೇರಿದಂತೆ ದೇಶದ ಪ್ರಮುಖ ರಾಜಕೀಯ ನಾಯಕರು ಜೈಲು ಪಾಲಾದರು. MISA (ಆಂತರಿಕ ಭದ್ರತಾ ಕಾಯಿದೆ ನಿರ್ವಹಣೆ) ಮತ್ತು ಇತರ ಕಾನೂನುಗಳ ಅಡಿಯಲ್ಲಿ ಸಾವಿರಾರು ರಾಜಕೀಯ ಕಾರ್ಯಕರ್ತರು ಮತ್ತು ಮುಖಂಡರನ್ನು ಬಂಧಿಸಲಾಯಿತು.

ಇದಲ್ಲದೆ, ಸಾಮಾನ್ಯ ಜನರ ಮೂಲಭೂತ ಹಕ್ಕುಗಳು ಸಹ ಅಪಾಯಕ್ಕೆ ಒಳಗಾದವು. ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರತಿಭಟನೆ ಮಾಡುವ ಹಕ್ಕು, ನಾಗರಿಕ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು. ಸಾಂಸ್ಕೃತಿಕ ಜಗತ್ತಿನಲ್ಲಿ ನಿರ್ಬಂಧಗಳು, ಬಂಧನಗಳು ನಡೆದವು. ನಾಟಕ ಪ್ರದರ್ಶನಗಳ ಮೇಲೆ ನಿಷೇಧ, ಚಲನಚಿತ್ರ ಪ್ರದರ್ಶನವನ್ನು ಸ್ಥಗಿತಗೊಳಿಸಿದ್ದು ನಡೆಯಿತು.

ತುರ್ತು ಪರಿಸ್ಥಿತಿ ಮತ್ತು ಆರೆಸ್ಸೆಸ್

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಪ್ರತಿಪಕ್ಷಗಳ ರಾಜಕೀಯ ನಾಯಕರು ಮತ್ತು ಕಾರ್ಯಕರ್ತರನ್ನು ಬಂಧಿಸಿದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರೆಸ್ಸೆಸ್)ದ ಮುಖ್ಯಸ್ಥ ಬಾಳಾ ಸಾಹೇಬ್ ದೇವರಸ್ ಬಂಧನದ ನಂತರ, ತಮ್ಮನ್ನು ಮತ್ತು ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕೆಂದು ಮನವಿ ಮಾಡಿ ಇಂದಿರಾ ಗಾಂಧಿಯವರಿಗೆ ದೇವರಸ್ ಅವರು ಪದೇ ಪದೇ ಪತ್ರಗಳನ್ನು ಬರೆದರು. ಒಂದು ಪತ್ರದಲ್ಲಿ ಆರೆಸ್ಸೆಸ್ ರಾಜಕೀಯೇತರ ನಿಲುವನ್ನು ಹೊಂದಿದೆ ಎಂದು ಒತ್ತಿ ಹೇಳಿ, ದೇಶ ಸೇವೆಗೆ ತನ್ನ ಬದ್ಧತೆಯನ್ನು ವ್ಯಕ್ತಪಡಿಸಿದರು. ಎರಡನೇ ಪತ್ರದಲ್ಲಿ ದೇಶದ ಅಭಿವೃದ್ಧಿ ಹಾಗೂ ರಾಷ್ಟ್ರ ನಿರ್ಮಾಣಕ್ಕೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು. ಜೈಲಿನಲ್ಲಿರುವ ಆರೆಸ್ಸೆಸ್ ಕಾರ್ಯಕರ್ತರನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಿದರು. ಮೂರನೇ ಪತ್ರವು ದೇಶದ ಕಲ್ಯಾಣಕ್ಕಾಗಿ ಒಟ್ಟಾಗಿ ಕೆಲಸ ಮಾಡುವ ವಿಧಾನಗಳನ್ನು ಚರ್ಚಿಸಲು ಇಂದಿರಾ ಗಾಂಧಿಯವರೊಂದಿಗೆ ಖಾಸಗಿ ಸಭೆಯನ್ನು ಕೋರಿತು. ಅಂತಿಮವಾಗಿ ಬಿಡುಗಡೆಗೆ ಸರ್ಕಾರ ನಿಗದಿಪಡಿಸಿದ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸುವ ಮೂಲಕ ಅವರು ಬಿಡುಗಡೆಯಾದರು.


ಮೋದಿ ಆಡಳಿತದಲ್ಲಿ 'ಪ್ರಜಾಪ್ರಭುತ್ವ' ಅರ್ಥವಿಲ್ಲದ್ದು

ನರೇಂದ್ರ ಮೋದಿಯವರ ಆಡಳಿತದಲ್ಲಿ ಪಿಎಂಒ (ಪ್ರಧಾನ ಮಂತ್ರಿ ಕಛೇರಿ) ಕಾರ್ಯಾಲಯ ಕೇಂದ್ರವಾಗಿ ಮಾರ್ಪಟ್ಟಿದೆ. ಮೋದಿ ಎಂದಿಗೂ ಪ್ರಜಾಪ್ರಭುತ್ವದ ಮಾರ್ಗವನ್ನು ಅನುಸರಿಸಲಿಲ್ಲ. 'ಮನ್ ಕಿ ಬಾತ್' ಎನ್ನುತ್ತಾರೆ. ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರು ಕೇಳುವ ಪ್ರಶ್ನೆಗಳಿಗೆ ಯಾವುದೇ ಉತ್ತರ ಕೊಡುವುದಿಲ್ಲ. ಸಂಸತ್ತಿನಲ್ಲಿ ಪ್ರತಿಪಕ್ಷಗಳ ಚರ್ಚೆಗೆ ಅವರು ಕಿವಿಗೊಡಲಿಲ್ಲ. ಯಾರ ಮಾತನ್ನೂ ಕೇಳದೆ, ಸಂಸತ್ತಿನಲ್ಲಿ ಚರ್ಚೆ ನಡೆಸದೆ ನೋಟು ಅಮಾನ್ಯೀಕರಣ ಮಾಡಿದರು. ಕೋವಿಡ್ ಅವಧಿಯಲ್ಲಿ ತರ್ಕಬದ್ಧವಲ್ಲದ, ಅವೈಜ್ಞಾನಿಕ ಕ್ರಮಗಳನ್ನು ತೆಗೆದುಕೊಂಡರು. ಪಿಎಂ ಕೇರ್ಸ್ ಫಂಡ್ ಅನ್ನು ಖಾಸಗಿ ನಿಧಿಯಾಗಿ ಪರಿವರ್ತಿಸಿದರು. ಯಾವುದೇ ಚರ್ಚೆಯಿಲ್ಲದೆ ಚುನಾವಣಾ ಬಾಂಡ್‌ಗಳನ್ನು ಪರಿಚಯಿಸಿದರು.

ಅಧಿಕಾರಗಳ ಕೇಂದ್ರೀಕರಣ

ರಾಜ್ಯ ಸರ್ಕಾರಗಳ ಅಧಿಕಾರವನ್ನು ಕ್ರಮೇಣ ಮೊಟಕುಗೊಳಿಸಲಾಗಿದೆ. ಸಂಸತ್ತಿನಲ್ಲಿ ಚರ್ಚೆಗೆ ಅವಕಾಶವೇ ಇಲ್ಲದಂತಾಗಿದೆ. ಸಂಸದೀಯ ವ್ಯವಸ್ಥೆಯಲ್ಲಿ ಕಾನೂನು ಮಾಡುವ ಹಕ್ಕನ್ನು ಕಸಿದುಕೊಂಡು ಆರ್ಡಿನೆನ್ಸ್ ರಾಜ್ ಅನ್ನು

ಭಾರತ ಪ್ರಜಾಪ್ರಭುತ್ವದ ಚರಿತ್ರೆಯಲ್ಲಿ ತುರ್ತು ಪರಿಸ್ಥಿತಿಯು ನಿಸ್ಸಂದೇಹವಾಗಿ ಒಂದು ಕರಾಳ ಅಧ್ಯಾಯ. ಆದರೆ ಬಹುತೇಕ ಫ್ಯಾಸಿಸ್ಟ್ ರೀತಿಯಲ್ಲಿ ಪ್ರಜಾಪ್ರಭುತ್ವವನ್ನು ಕೊಂದು ಸಂವಿಧಾನವನ್ನು ಬದಲಾಯಿಸಲು ತಯಾರಿ ನಡೆಸುತ್ತಿರುವ ವ್ಯಕ್ತಿಯ ಮಾತಿನಲ್ಲಿ ಪ್ರಜಾಪ್ರಭುತ್ವ ಎನ್ನುವುದು ಕಪಟತನವಲ್ಲದೆ ಬೇರೇನೂ ಅಲ್ಲ. ತುರ್ತುಪರಿಸ್ಥಿತಿ ಸಂದರ್ಭದಲ್ಲಿ ಆರೆಸ್ಸೆಸ್ ಮುಖ್ಯಸ್ಥ ಬಾಳಾ ಸಾಹೇಬ್ ದೇವರಸ್ ತಮ್ಮ ಬಂಧನದ ನಂತರ, 'ಆರೆಸ್ಸೆಸ್ ರಾಜಕೀಯೇತರ ನಿಲುವನ್ನು ಹೊಂದಿದೆ, ನಾವು ರಾಷ್ಟ್ರ ನಿರ್ಮಾಣಕ್ಕೆ ಸಹಕಾರ ನೀಡುತ್ತೇವೆ' ಎನ್ನುತ್ತಾ, ತಮ್ಮನ್ನು ಮತ್ತು ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕೆಂದು ಮನವಿ ಮಾಡಿ ಇಂದಿರಾ ಗಾಂಧಿಯವರಿಗೆ ಪದೇ ಪದೇ ಪತ್ರಗಳನ್ನು ಬರೆದರು. ಅಂತಿಮವಾಗಿ ಬಿಡುಗಡೆಗೆ ಸರ್ಕಾರ ನಿಗದಿಪಡಿಸಿದ ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸುವ ಮೂಲಕ ಅವರು ಬಿಡುಗಡೆಯಾದರು.



ಕೃಪೆ: ಸತೀಶ್ ಆಚಾರ್ಯ

ಸ್ಥಾಪಿಸಿದರು. ಕೃಷಿ ಕಾಯಿದೆ ಮತ್ತು ವಿದ್ಯುಚ್ಛಕ್ತಿ ಕಾಯಿದೆಗಳನ್ನು ಸುಗ್ರೀವಾಜ್ಞೆಗಳ ಮೂಲಕ ಜಾರಿಗೆ ತರಲಾಯಿತು. ಸಂಸತ್ತಿನಲ್ಲಿ ಬಹುಮತ ಇರುವುದರಿಂದ ಬಹುತೇಕ ಬಲವಂತದ ಮೂಲಕವೇ ಮಸೂದೆಗಳನ್ನು ಅಂಗೀಕರಿಸುವುದು ವಾಡಿಕೆಯಾಯಿತು.

ಭಾರತದ ಸಂವಿಧಾನದ ಮುಖ್ಯ ಲಕ್ಷಣಗಳಲ್ಲಿ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟ ರಚನೆ (Democracy, Secularism, Federalism) ಮುಖ್ಯವಾದವುಗಳಾಗಿವೆ. ಆದರೆ ಮೋದಿ ಸರಕಾರ ಸಂವಿಧಾನದ ಸಾರದ ಮೇಲೆಯೇ ವ್ಯವಸ್ಥಿತವಾಗಿ ದಾಳಿಗೆ ಇಳಿದಿದೆ. ಕೇಂದ್ರ–ರಾಜ್ಯ ಸಂಬಂಧಗಳನ್ನು ಹಾಳು ಮಾಡುವ ಮೂಲಕ ಇದು ರಾಜ್ಯಗಳನ್ನು ದುರ್ಬಲಗೊಳಿಸಿದೆ. ರಾಜ್ಯಗಳ ಒಪ್ಪಿಗೆಯಿಲ್ಲದೆ ಸಂವಿಧಾನದ 370 ನೇ ವಿಧಿಯನ್ನು ಏಕಪಕ್ಷೀಯವಾಗಿ ರದ್ದುಗೊಳಿಸಿತು. ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲಾಗಿದೆ. ಅದೇ ರೀತಿ ಜಿಎಸ್‌ಟಿಯನ್ನು ಏಕಪಕ್ಷೀಯವಾಗಿ ಜಾರಿಗೊಳಿಸಲಾಗಿದೆ. ಇವೆಲ್ಲವೂ ರಾಜ್ಯಗಳ ಹಕ್ಕುಗಳನ್ನು ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ನಾಶಪಡಿಸಿವೆ.

ಸ್ವಾಯತ್ತ ಸಂಸ್ಥೆಗಳ ಮೇಲಿನ ಹಿಡಿತ

ಸ್ವಾಯತ್ತ ಸಂಸ್ಥೆಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿದೆ. ವಿರೋಧ ಪಕ್ಷಗಳನ್ನು ಒಡೆಯಲು, ಸರ್ಕಾರಗಳನ್ನು ವಶಪಡಿಸಿಕೊಳ್ಳಲು, ಚುನಾವಣಾ ಬಾಂಡ್‌ಗಳ ಮೂಲಕ ಆರ್ಥಿಕ ಲಾಭ ಪಡೆಯಲು ಇಡಿ, ಸಿಬಿಐ ನಂತಹ ಕೇಂದ್ರೀಯ ಸಂಸ್ಥೆಗಳನ್ನು ಬಳಸಲಾಗುತ್ತಿದೆ. ಸಂಘಕ್ಕೆ ನಿಷ್ಠಾವಂತರಾಗಿರುವವರನ್ನು ಈ ಸಂಸ್ಥೆಗಳ ಮುಖ್ಯ ಅಧಿಕಾರಿಗಳಾಗಿ ನೇಮಿಸುತ್ತಿದೆ. ಚುನಾವಣಾ ಆಯೋಗ, ಭಾರತೀಯ ರಿಸರ್ವ್ ಬ್ಯಾಂಕ್, ಸಿಬಿಐ ಮುಂತಾದವುಗಳನ್ನು ಈ ರೀತಿ ತುಂಬಿಸಲಾಗುತ್ತದೆ. ಶಿಕ್ಷಣ ಕ್ಷೇತ್ರವನ್ನು ಕೇಂದ್ರೀಕರಿಸಲು ಮತ್ತು ಖಾಸಗೀಕರಣಗೊಳಿಸಲು, ಸಿಬಿಎಸ್‌ಸಿ ನಿಂದ ಇತಿಹಾಸ ಸಂಶೋಧನಾ ಮಂಡಳಿಯವರೆಗೆ, ಎಲ್ಲಾ ಕೇಂದ್ರೀಯ ವಿಶ್ವವಿದ್ಯಾಲಯಗಳನ್ನು ತಮ್ಮ ನಿಷ್ಠಾವಂತರನ್ನು ನೇಮಿಸುವ ಮೂಲಕ ಎಲ್ಲವನ್ನೂ ಸ್ವಾಧೀನಪಡಿಸಿಕೊಂಡರು.

ಇಂದು ಸಂಸತ್ತು ಭ್ರಷ್ಟಾಚಾರಿಗಳಿಂದ ತುಂಬಿದೆ. ಯುಜಿಸಿ ಮತ್ತು ಎನ್.ಟಿ.ಎ. ಗಳು ಬಿಜೆಪಿ ಮತ್ತು ಆರೆಸ್ಸೆಸ್ ಸಿದ್ಧಾಂತ ತುಂಬಿದ ಅಸಮರ್ಥರ ಕೈಗೆ ಹೋಗಿವೆ. ಶಾಲಾ–ಕಾಲೇಜುಗಳಲ್ಲಿ ಏನನ್ನು ಕಲಿಸಬೇಕು, ಪಠ್ಯಪುಸ್ತಕಗಳಲ್ಲಿ ಏನನ್ನು ಸೇರಿಸಬೇಕು ಮತ್ತು ಯಾವುದನ್ನು ತೆಗೆದುಹಾಕಬೇಕು ಎಂಬುದನ್ನು ಆರೆಸ್ಸೆಸ್ ನಿರ್ಧರಿಸುತ್ತದೆ. ಕಾನೂನು ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸುವ ಯಾವುದೇ ಪ್ರಯತ್ನವನ್ನು ನಿರ್ಲಕ್ಷಿಸಬಾರದು. ನ್ಯಾಯಾಧೀಶರ ನೇಮಕದಲ್ಲಿ ಮತ್ತು ನ್ಯಾಯಾಂಗದ ಮೇಲೆ ಸರ್ಕಾರ ನಿರಂತರ ಒತ್ತಡ ಹೇರಿದೆ. ಚುನಾವಣಾ ಆಯುಕ್ತರ ನೇಮಕದ ಹೊಣೆಗಾರಿಕೆಯಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನು ತಪ್ಪಿಸಿ ಚುನಾವಣಾ ಆಯೋಗವನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡಿದೆ.

ಜಾತ್ಯತೀತತೆ, ಬಹುತ್ವ ಅಪಾಯದಲ್ಲಿದೆ

ಭಾರತ ದೇಶದಲ್ಲಿ ಜಾತ್ಯತೀತ ಸಿದ್ಧಾಂತವನ್ನು ಅನುಸರಿಸಿ, ಧರ್ಮ, ಭಾಷೆ, ಜಾತಿ–ಗೋತ್ರ, ಲಿಂಗ ಮತ್ತು ಸಂಸ್ಕೃತಿಯನ್ನು ಲೆಕ್ಕಿಸದೆ ಕಾನೂನಿನ ದೃಷ್ಟಿಯಲ್ಲಿ ಎಲ್ಲಾ ಜನರು ಸಮಾನರು. ಆದರೆ ಜನರನ್ನು ವಿಭಜಿಸುವ ಉದ್ದೇಶದಿಂದ, ಮೋದಿ ಸರ್ಕಾರವು ಧರ್ಮದ ಆಧಾರದ ಮೇಲೆ ಪೌರತ್ವವನ್ನು ನೀಡಲು ತಿದ್ದುಪಡಿ ಮಾಡಿದ ಸಿಎಎಯನ್ನು ಅಸಂವಿಧಾನಿಕವಾಗಿ ಜಾರಿಗೆ ತಂದಿತು. ಸಾಮಾಜಿಕ ಸೌಹಾರ್ದತೆ, ಒಗ್ಗಟ್ಟು ಹಾಳು ಮಾಡಿ, ಆರೆಸ್ಸೆಸ್ ನ ಹಿಂದುತ್ವ ಸಿದ್ಧಾಂತ ಜಾರಿಗೆ ತರಲು ಸರ್ಕಾರ ಮುಂದಾಗಿದೆ.

ಪುಟ 14 ಕ್ಕೆ



ಏನೂ ಬದಲಾವಣೆಯಿಲ್ಲದ ಮೋದಿ ಆಡಳಿತ

ಪ್ರಕಾಶ್ ಕಾರತ್

ಮೋದಿ ನೇತೃತ್ವದ ಎನ್‌ಡಿಎ ಸರಕಾರವು, ಸಮ್ಮಿಶ್ರ ಸರಕಾರದ ರಚನೆಯಿಂದಾಗಿ ಬಿಜೆಪಿ/ಆರ್‌ಎಸ್‌ಎಸ್‌ನ ಸರ್ವಾಧಿಕಾರಿ ಕೋಮುವಾದಿ ಕಾರ್ಪೊರೇಟ್ ಕಾರ್ಯಸೂಚಿಯನ್ನು ಮುಂದಕ್ಕೆ ಒಯ್ಯುವಲ್ಲಿ ಗಂಭೀರ ಅಡೆತಡೆಗಳನ್ನು ಎದುರಿಸುವ ಒಂದು ಸರಕಾರವಾಗಲಿದೆ ಎಂದು ಕೆಲವು ವಲಯಗಳಲ್ಲಿ ನಿರೀಕ್ಷೆ ಹುಟ್ಟಿದೆ. ಈ ಕೆಲವು ನಿರೀಕ್ಷೆಗಳು ನಿಜವಾಗಿಯೂ ಅತಿಶಯೋಕ್ತಿಯದ್ದಾಗಿವೆ. ಬಿಜೆಪಿ ತನ್ನ ಬಹುಮತವನ್ನು ಕಳೆದುಕೊಂಡಿರುವುದು ಹಾಗೂ ಲೋಕಸಭೆಯಲ್ಲಿ 240 ಸ್ಥಾನಕ್ಕೆ ಸೀಮಿತಗೊಂಡಿರುವುದು ವಾಸ್ತವವಾಗಿರುವುದರಿಂದ ಮೋದಿ ಆಡಳಿತದ ಮೂರನೇ ಅವಧಿಯಲ್ಲಿ ಮೋದಿ ಮತ್ತು ಆರೆಸ್ಸೆಸ್/ಬಿಜೆಪಿಯ ಅಜೆಂಡಾದ ಕೆಲವು ಅಂಶಗಳನ್ನು ಕಾರ್ಯಗತಗೊಳಿಸುವುದಕ್ಕೆ ತಡೆಯಾಗಬಹುದು ಅಥವಾ ನಿಧಾನಗೊಳ್ಳಬಹುದು.

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸುವ, ಜಾತ್ಯತೀತ ಸಿದ್ಧಾಂತವನ್ನು ತುಳಿಯುವ ಮತ್ತು ಸರ್ವಾಧಿಕಾರಿ ಕೇಂದ್ರೀಯವಾದವನ್ನು ಮತ್ತಷ್ಟು ಹೇರಿಕೆ ಮಾಡುವ ಅಪಾಯವಿರುವ ಸಾಂವಿಧಾನಿಕ ಬದಲಾವಣೆಗಳನ್ನು ಜಾರಿ ಮಾಡುವ ಗುರಿಯನ್ನು ಈಗ ಸಾಧಿಸುವುದು ಕಷ್ಟವಾಗಬಹುದು. ಆದರೆ ಆರ್ಥಿಕ ನೀತಿಗಳು, ಸಂಸ್ಥೆಗಳನ್ನು ಬುಡಮೇಲು ಮಾಡುವುದು ಹಾಗೂ ಸರ್ವಾಧಿಕಾರಿ ಧೋರಣೆಯನ್ನು ಮುಂದುವರಿಸುವಲ್ಲಿ ಮೋದಿ ಆಡಳಿತದ ಆಕ್ರಮಣಕಾರಿ ಕ್ರಮ ಗುಣಾತ್ಮಕ ಬದಲಾವಣೆ ಕಾಣಲಿದೆ.

ಆರಂಭದಲ್ಲೇ ಬಹಿರಂಗ

ಪ್ರತಿಪಕ್ಷಗಳ ಕುರಿತ ಸಂಘರ್ಷಮಯ ಧೋರಣೆ ಮತ್ತು ಸಾಂವಿಧಾನಿಕ ನಿಯಮಗಳನ್ನು ಅಗೌರವಿಸುವ ಮೋದಿ ಆಡಳಿತದ ನಿಲವು ಸಂಸತ್ ಅಧಿವೇಶನವನ್ನು ವ್ಯವಸ್ಥೆಗೊಳಿಸಿದ ಆರಂಭದಲ್ಲೇ ಬಹಿರಂಗಗೊಂಡಿದೆ. ಹೊಸ ಸ್ಪೀಕರ್‌ಅನ್ನು ಆಯ್ಕೆ ಮಾಡುವ ವಿಚಾರದಲ್ಲಿ, ಡೆಪ್ಯುಟಿ (ಉಪ) ಸ್ಪೀಕರ್ ಹುದ್ದೆಯನ್ನು ವಿಪಕ್ಷಗಳಿಗೆ ನೀಡುವುದನ್ನು ಸರ್ಕಾರ ತಿರಸ್ಕರಿಸಿದೆ. ಈ ಮೂಲಕ ಈ ವಿಷಯದಲ್ಲಿ ಸಹಮತ ಮೂಡಿಸುವ ಸಾಧ್ಯತೆಯನ್ನು ವಿಫಲಗೊಳಿಸಿದೆ.

ಸರ್ವಾಧಿಕಾರಿ ಆಡಳಿತ

ಹೊಸ ಸರಕಾರ ಪ್ರಮಾಣ ವಚನ ಸ್ವೀಕರಿಸಿದ ಕೆಲವೇ ದಿನಗಳು, ಸರ್ವಾಧಿಕಾರಿ–ದಬ್ಬಾಳಿಕೆ ಆಡಳಿತದ ಶಿಲ್ಪ ಇನ್ನೂ ಅಸ್ತಿತ್ವದಲ್ಲಿ ಇದೆ ಎನ್ನುವುದನ್ನು ನಮಗೆ ನೆನಪಿಸಿದೆ. ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಕೆಳ ನ್ಯಾಯಾಲಯದಿಂದ ಜಾಮೀನು ಪಡೆದರೂ ಅದನ್ನು ಹೈಕೋರ್ಟ್ ಅಸಿಂಧುಗೊಳಿಸುವಂತೆ ಮಾಡಲಾಗಿದೆ. ಕೇಜ್ರಿವಾಲ್ ಜೈಲಿನಿಂದ ಹೊರಗಡೆ ಬಾರದಿರುವುದನ್ನು ಖಾತರಿಪಡಿಸಲು ಕೇಜ್ರಿವಾಲ್‌ರನ್ನು ಕೋರ್ಟ್‌ಗೆ ಹಾಜರುಪಡಿಸಿದ್ದಾಗ ಕೇಂದ್ರೀಯ ತನಿಖಾ ದಳ (ಸಿಬಿಐ) ಸಿಎಂರನ್ನು ಇದೇ ಕೇಸ್‌ನಲ್ಲಿ ಬಂಧಿಸಿದೆ. ಲೇಖಕಿ ಅರುಂಧತಿ ರಾಯ್ ವಿರುದ್ಧ ಪ್ರಕರಣವನ್ನು ದಾಖಲಿಸಿದ 14 ವರ್ಷಗಳ ನಂತರ ಅವರ ವಿರುದ್ಧ ಯುಎಪಿಎ ಅಡಿಯಲ್ಲಿ ಕಾನೂನು ಕ್ರಮ ಜರುಗಿಸಲು ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಅನುಮತಿ ನೀಡಿದ್ದಾರೆ.

ಹಿಂದಿನ ಕ್ರಿಮಿನಲ್ ಪ್ರೊಸೀಜರ್ ಮತ್ತು ಪೀನಲ್ ಕಾನೂನುಗಳ ಬದಲಿಗೆ ತರಲಾಗಿರುವ ಮೂರು ಕ್ರಿಮಿನಲ್ ಸಂಹಿತೆಗಳು (ಕ್ರಿಮಿನಲ್ ಕೋಡ್) ಜುಲೈ 1ರಿಂದ ಜಾರಿಯಾಗಲಿವೆ. ಈ ಸಂಹಿತೆಗಳಲ್ಲಿರುವ ಬಹಳಷ್ಟು ನಿಯಮಗಳು ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಹೆಚ್ಚು ನಿರ್ಬಂಧಗಳನ್ನು ಹೇರಲಿವೆ ಹಾಗೂ ನಾಗರಿಕರ ವಿರುದ್ಧ ಕ್ರಮ ಕೈಗೊಳ್ಳುವ ಪೊಲೀಸ್ ಅಧಿಕಾರವನ್ನು ಹೆಚ್ಚಿಸಲಿವೆ. ದೇಶದ್ರೋಹದಂಥ ಅಪರಾಧಗಳಲ್ಲಿ ಶಿಕ್ಷೆ ನೀಡುವ ಹೆಚ್ಚು ಕರಾಳ ಅಧಿಕಾರಗಳೂ ಅದರಲ್ಲಿವೆ.

ಅಮಿತ್ ಷಾರನ್ನು ಗೃಹ ಸಚಿವರಾಗಿ ಪುನಃ ನೇಮಿಸಿರುವುದರಿಂದ ಅನುಷ್ಠಾನ ನಿರ್ದೇಶನಾಲಯ (ಇ.ಡಿ.), ಸಿಬಿಐ ಮತ್ತಿತರ ಕೇಂದ್ರೀಯ ಸಂಸ್ಥೆಗಳು ಪ್ರತಿಪಕ್ಷಗಳನ್ನು ಟಾರ್ಗೆಟ್ ಮಾಡುವುದನ್ನು ಮುಂದುವರಿಸುವ ನಿರೀಕ್ಷೆಯಿದೆ. ಸರಕಾರಕ್ಕೆ ವಿರುದ್ಧವಾದವರು ಮತ್ತು ಶರಣಾಗುವಂತೆ ಮಾಡಲು ಕಿರುಕುಳ ನೀಡುವುದು ಅಗತ್ಯ ಎಂದು ಕಂಡು ಬಂದ ಯಾವುದೇ ಸಂಸ್ಥೆಗಳು ಮತ್ತು ವ್ಯಕ್ತಿಗಳನ್ನು ಕೂಡ ಟಾರ್ಗೆಟ್ ಮಾಡಲಾಗುತ್ತದೆ.

ಹಿಂದಿನ ಸರಕಾರದ ಕೊನೆಯ ಹಂತದಲ್ಲಿ ಅಂಗೀಕರಿಸಲಾದ ದೂರಸಂಪರ್ಕ ಕಾನೂನು ಮತ್ತು ಐಟಿ ಕಾಯಿದೆ ನಿಯಮಗಳು ಕೂಡ ಈಗ ಅನುಷ್ಠಾನಕ್ಕೆ ಬರಲಿವೆ. 2023ರ ಟೆಲಿಕಾಂ ಕಾನೂನಿನ ಬಗ್ಗೆ ಜೂನ್ 26ರಂದು ಭಾಗಶಃ ಅಧಿಸೂಚನೆ ಹೊರಡಿಸಲಾಗಿದೆ. ಇದು ಸಾರ್ವಜನಿಕ ತುರ್ತುಪರಿಸ್ಥಿತಿ ವೇಳೆ ಸಾರ್ವಜನಿಕ ಸುರಕ್ಷತೆಯ ಹೆಸರಿನಲ್ಲಿ ಇಂಟರ್‌ನೆಟ್‌ನಲ್ಲಿ ಯಾವುದೇ ಸಂದೇಶ ಪ್ರಸಾರ ಮಾಡುವುದನ್ನು ತಡೆಯಲು ಸರಕಾರಕ್ಕೆ ಅನುಮತಿ ನೀಡುತ್ತದೆ. ದೂರಸಂಪರ್ಕ ಸಂವಹನವನ್ನು ತಿಳಿದುಕೊಳ್ಳಲು (ಇಂಟರ್‌ಸೆಪ್ಟ್) ಹತ್ತು ಕೇಂದ್ರೀಯ ಸಂಸ್ಥೆಗಳಿಗೆ ಅಧಿಕಾರ ನೀಡಲಾಗಿದೆ. ಹಾಗೆ ಮಾಡಲು ಅವು ಗೃಹ ಕಾರ್ಯದರ್ಶಿಯ ಅನುಮತಿ ಪಡೆಯ ಬೇಕಾಗುತ್ತದೆ.

ಉದ್ಯಮಿಗಳ ಬೆಂಬಲ

ಲೋಕಸಭೆ ಚುನಾವಣೆಗಳ ಸಂದರ್ಭ, ದೊಡ್ಡ ಉದ್ಯಮಿಗಳು ಬಿಜೆಪಿ ಮತ್ತು ನರೇಂದ್ರ ಮೋದಿಗೆ ಬೇಷರತ್ ಬೆಂಬಲ ನೀಡಿದ್ದವು. ಬಿಜೆಪಿ ಬಹುಮತ ಕಳೆದುಕೊಂಡಿದೆ ಎಂಬ ಫಲಿತಾಂಶ ಹೊರಬಿದ್ದಾಗ ಕುಸಿದ ಷೇರು ಮಾರುಕಟ್ಟೆ, ಮೋದಿ ನೇತೃತ್ವದ ಎನ್‌ಡಿಎ ಸರಕಾರ ರಚನೆಯಾಗಲಿದೆ ಎಂಬ ವಿಚಾರ ಘೋಷಣೆಯಾಗುತ್ತಲೇ ಚೇತರಿಸಿ ಕೊಂಡಿತು.

ಮುಂದಿನ ತಲೆಮಾರಿನ ಸುಧಾರಣೆಗಳನ್ನು ತಕ್ಷಣವೇ ಕೈಗೆತ್ತಿಕೊಳ್ಳಲಾಗುವುದೆಂದು ಹಣಕಾಸು ಸಚಿವರಾಗಿ ಮರುನೇಮಕಗೊಂಡ ನಿರ್ಮಲಾ ಸೀತಾರಾಮನ್ ತಮ್ಮ ಮೊದಲ ಹೇಳಿಕೆಯಲ್ಲೇ ತಿಳಿಸಿದ್ದಾರೆ. ಕೇಂದ್ರ ಬಜೆಟ್‌ನಲ್ಲಿ ತಮಗೆ ಬೇಕಾದುದನ್ನು ಪಡೆಯಲು ದೊಡ್ಡ ಉದ್ಯಮ ವಲಯದವರು ಹಣಕಾಸು ಮಂತ್ರಿಯೊಂದಿಗೆ ಲಾಬಿ ಮಾಡುವಲ್ಲಿ ನಿರತವಾಗಿವೆ.

ಮೂರನೇ ಬಾರಿ ಮೋದಿ ಸರಕಾರ ಅಧಿಕಾರಕ್ಕೆ ಬಂದಿರುವುದು ಕಾರ್ಪೊರೇಟ್–ಪರ, ನವ–ಉದಾರವಾದಿ ಪರ ನೀತಿಗಳು ಪೂರ್ಣ ಬಿರುಸಿನಿಂದ ಮುಂದುವರಿಯಲಿವೆ ಎನ್ನುವುದರ ಸೂಚನೆಯಾಗಿದೆ. ರಾಷ್ಟ್ರೀಯ ಮಾನಿಟೈಸೇಶನ್ ಪೈಪ್‌ಲೈನ್ (ಎನ್‌ಎಂಪಿ) ಅನ್ನು ಇನ್ನಷ್ಟು ಜಾರಿ ಮಾಡುವಂಥ ಖಾಸಗೀಕರಣದ ಕ್ರಮಗಳನ್ನು ನಿರೀಕ್ಷಿಸಬಹುದಾಗಿದೆ. ತೆಲುಗು ದೇಶಂ ಮತ್ತು ಜೆಡಿಯುನಂಥ ಸರಕಾರದ ಮಿತ್ರ ಪಕ್ಷಗಳ ಸ್ವರೂಪವನ್ನು ನೋಡಿದರೆ ಅವುಗಳಿಂದ ಆರ್ಥಿಕ ನೀತಿಗಳಿಗೆ ಯಾವುದೇ ಪ್ರತಿರೋಧ ಬರುವುದು ಅನುಮಾನವಾಗಿದೆ.

ಹಿಂದೂತ್ವ ರಾಜಕಾರಣವನ್ನು ಮುಂದುವರಿಸುವಲ್ಲಿ ಹಾಗೂ ಅಲ್ಪಸಂಖ್ಯಾತರನ್ನು ಟಾರ್ಗೆಟ್ ಮಾಡುವಲ್ಲಿ ಯಾವುದೇ ವಿನಾಯಿತಿ ಇಲ್ಲ ಎನ್ನುವುದು ಮೋದಿ ಸರಕಾರ ಅಧಿಕಾರ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಗೊತ್ತಾಗಿದೆ.

ವಿಶೇಷವಾಗಿ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಮುಸಲ್ಮಾನರನ್ನು ಟಾರ್ಗೆಟ್ ಮಾಡಿದ ಅನೇಕ ಘಟನೆಗಳು ವರದಿಯಾಗಿವೆ. ಛತ್ತೀಸ್‌ಗಢ ರಾಜಧಾನಿ ರಾಯ್ಪುರ ಸಮೀಪದ ಅರಂಗ್‌ನಲ್ಲಿ ದನ ಸಾಗಿಸುತ್ತಿದ್ದ ಮೂವರ ಮೇಲೆ ಆಕ್ರಮಣ ನಡೆಸಿ ಕೊಲ್ಲಲಾಗಿದೆ. ಅವರು ದನಗಳ ವ್ಯಾಪಾರಿಗಳು ಎನ್ನುವುದೊಂದೇ ಅವರ ಅಪರಾಧವಾಗಿತ್ತು. ಬಿಜೆಪಿ ಆಡಳಿತವಿರುವ ಮಧ್ಯ ಪ್ರದೇಶದ ಮಾಂಡ್ಲಾ ಜಿಲ್ಲೆಯಲ್ಲಿ ತಮ್ಮ ಮನೆಗಳ ಫ್ರಿಜ್‌ಗಳಲ್ಲಿ ಗೋಮಾಂಸವನ್ನು ಸಂಗ್ರಹಿಸಿಟ್ಟಿದ್ದರೆಂಬ ಆರೋಪದ ಮೇಲೆ 11 ಜನರನ್ನು ಬಂಧಿಸಲಾಗಿದೆ. ನಂತರ ಈ ಹನ್ನೊಂದು ಜನರ ಮನೆಗಳು ಒತ್ತುವರಿಯಾದುದು ಎಂಬ ನೆಪ ಹೇಳಿ ಅವುಗಳನ್ನು ಸ್ಥಳೀಯ ಆಡಳಿತ ನೆಲಸಮ ಮಾಡಿದೆ. ರಾಜಸ್ಥಾನದ ಜೋಧ್‌ಪುರದಲ್ಲಿ ಕೋಮು ಘರ್ಷಣೆ ನಡೆದು 51 ಜನರನ್ನು ಬಂಧಿಸಲಾಗಿದೆ. ಕೋಮು ಧ್ರುವೀಕರಣ ಸೃಷ್ಟಿಸುವುದು ಹಾಗೂ ಅಲ್ಪಸಂಖ್ಯಾತರನ್ನು ಟಾರ್ಗೆಟ್ ಮಾಡುವುದು ಹಿಂದೂತ್ವ ಪಡೆಗಳ ಸಾಮಾನ್ಯ ರಾಜಕೀಯವಾಗಿದೆ. ಅದನ್ನು ತಡೆಯಲು ಕೇಂದ್ರ ಸರಕಾರ ಯಾವುದೇ ಕ್ರಮವನ್ನು ಕೈಗೊಳ್ಳುವುದಿಲ್ಲ.

ಸಮ್ಮಿಶ್ರ ಕೂಟದಲ್ಲಿ ಬಿಜೆಪಿ ಪ್ರಮುಖ ಶಕ್ತಿ ಹಾಗೂ ಎರಡು ಪ್ರಮುಖ ಮಿತ್ರರಾದ ಟಿಡಿಪಿ ಮತ್ತು ಜೆಡಿಯು ಯಾವುದೇ ರಾಜಕೀಯ ಅಥವಾ ನೀತಿಯನ್ನು ಪ್ರತಿಪಾದಿಸುವ ಸ್ಥಿತಿಯಲ್ಲಿ ಇಲ್ಲ, ಆಸಕ್ತವಾಗಿಯೂ ಇಲ್ಲ ಎನ್ನುವುದನ್ನು ನಾವು ಗುರುತಿಸಬೇಕು. ಟಿಡಿಪಿ ಬಗ್ಗೆ ಹೇಳುವುದಾದರೆ ಅದರ ನಾಯಕ ಚಂದ್ರಬಾಬು ನಾಯ್ಡು ಆಂಧ್ರ ಪ್ರದೇಶದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವತ್ತ ಗಮನವನ್ನು ಕೇಂದ್ರೀಕರಿಸಿದ್ದಾರೆ. ಆಂಧ್ರ ಪ್ರದೇಶದಲ್ಲಿ ತನ್ನ ಆದ್ಯತಾ ಯೋಜನೆಗಳಿಗೆ ನಿಧಿ ಹಾಗೂ ಪ್ಯಾಕೇಜ್‌ಗಳನ್ನು ಪಡೆಯುವುದಷ್ಟಕ್ಕೇ ಕೇಂದ್ರದ ಕುರಿತು ಅವರ ಧೋರಣೆ ಸೀಮಿತವಾಗಿರುತ್ತದೆ. ಜೆಡಿಯುಗೆ ಬಿಹಾರದಾಚೆ ಯಾವುದೇ ಪ್ರಭಾವವಿಲ್ಲ. ಆ ರಾಜ್ಯದ ಮುಂದಿನ ವರ್ಷದ ವಿಧಾನಸಭೆ ಚುನಾವಣೆಯಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದಕ್ಕೆ ಅದು ಹೆಚ್ಚು ಗಮನ ಹರಿಸಲಿದೆ. ಪ್ರತಿಪಕ್ಷಗಳು ಕಾರ್ಯತಂತ್ರ ರೂಪಿಸುವಾಗ ಈ ವಾಸ್ತವತೆಯನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ.

ಸಂಸತ್ತಿನಲ್ಲಿ ವಿಪಕ್ಷದ ಬಲ ಹೆಚ್ಚಿರುವುದರಿಂದ ಮೋದಿ ಸರಕಾರದ ನೀತಿಗಳ ವಿರುದ್ಧದ ಹೋರಾಟ ಮತ್ತು ಅದರ ದುರಾಡಳಿತಗಳನ್ನು ಬಯಲು ಮಾಡುವಲ್ಲಿ ಸಂಸತ್ತಿನಲ್ಲಿ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಬಹುದಾಗಿದೆ.

ಪ್ರತಿರೋಧ ಕಟ್ಟೋಣ

ಆದರೆ, ಪ್ರಜಾಪ್ರಭುತ್ವದ ಮೇಲೆ ಮೋದಿ ಸರಕಾರದ ಸರ್ವಾಧಿಕಾರಿ ಆಕ್ರಮಣ ಮತ್ತು ನವ–ಉದಾರವಾದಿ ನೀತಿಗಳ ಮೂಲಕ ಜನರ ಜೀವನೋಪಾಯದ ಮೇಲೆ ಅದರ ಆಕ್ರಮಣಗಳ ವಿರುದ್ಧ ಪ್ರತಿರೋಧವನ್ನು ಕಟ್ಟುವುದು ತುಂಬಾ ಅಗತ್ಯವಾಗಿದೆ. ಹೋರಾಟಗಳು ಮತ್ತು ಸಾಮೂಹಿಕ ಪ್ರತಿಭಟನೆಗಳ ಮೂಲಕ ಇದನ್ನು ಸಾಧಿಸಬೇಕು.

ಇಲ್ಲಿ ಎಡಪಂಥೀಯರ ಪಾತ್ರ ಮಹತ್ವದ್ದಾಗುತ್ತದೆ. ಯಾಕೆಂದರೆ, ನವ ಉದಾರವಾದಿ ನೀತಿಗಳು ಮತ್ತು ಹಿಂದೂತ್ವ ಸಿದ್ಧಾಂತಕ್ಕೆ ಹೆಚ್ಚು ದೃಢವಾದ ಹಾಗೂ ಸತತವಾದ ಪ್ರತಿರೋಧ ತೋರಿಸುವವರು ಅವರೇ ಆಗಿದ್ದಾರೆ. ಸಂವಿಧಾನ, ಪ್ರಜಾಪ್ರಭುತ್ವ ಮತ್ತು ಒಕ್ಕೂಟತತ್ವ ರಕ್ಷಣೆ ಕುರಿತ ವಿಶಾಲವಾದ ವಿಷಯಗಳಲ್ಲಿ ಇಂಡಿಯಾ ಕೂಟ ಮತ್ತು ವಿಶಾಲವಾದ ಪ್ರತಿಪಕ್ಷದ ಒಗ್ಗಟ್ಟು ಮುಖ್ಯ ಪಾತ್ರ ವಹಿಸಬೇಕಾಗುತ್ತದೆ. ಅದೇ ಹೊತ್ತಿನಲ್ಲಿ ಜನರನ್ನು ಅವರ ದೈನಂದಿನ ಹೋರಾಟಗಳಲ್ಲಿ ಅಣಿನೆರೆಯಿಸುವಲ್ಲಿ ಮತ್ತು ನವ–ಉದಾರವಾದಿ ನೀತಿಗಳ ವಿರುದ್ಧದ ಒಟ್ಟಾರೆ ಪ್ರತಿರೋಧ ರೂಪಿಸುವಲ್ಲಿ ಈ ಹೋರಾಟಗಳನ್ನು ಸಂಪರ್ಕಿಸುವಲ್ಲಿ, ಅಲ್ಲದೆ ಪರ್ಯಾಯ ನೀತಿಗಳನ್ನು ವಿಶ್ವಾಸಾರ್ಹ ವೇದಿಕೆಯಾಗಿ ಮಾಡುವಲ್ಲಿ ಎಡಶಕ್ತಿಗಳ ಪಾತ್ರ ಮುಖ್ಯವಾಗುತ್ತದೆ.

ಎಡಶಕ್ತಿಗಳೊಂದಿಗೆ ಸಂಬಂಧವಿರುವ ನಾನಾ ಸಾಮೂಹಿಕ ಸಂಘಟನೆಗಳು ಮತ್ತು ಪ್ರಜಾಸತ್ತಾತ್ಮಕ ವೇದಿಕೆಗಳು ವಿಶಾಲವಾದ ಸಂಯುಕ್ತ ಕಾರ್ಯಾಚರಣೆಗಳನ್ನು ಕಟ್ಟಬೇಕಿದೆ.

ಹಿಂದೂತ್ವ–ಕಾರ್ಪೊರೇಟ್ ಮೈತ್ರಿಕೂಟಕ್ಕೆ ಪ್ರತಿರೋಧವನ್ನು ತೀವ್ರಗೊಳಿಸಲು ಸ್ವಲ್ಪ ರಾಜಕೀಯ ಸ್ಥಳಾವಕಾಶ ರೂಪುಗೊಂಡಿದೆ ಎನ್ನುವುದು ಲೋಕಸಭೆ ಚುನಾವಣೆಯಿಂದ ಕಲಿಯಬಹುದಾದ ಪ್ರಮುಖ ಪಾಠವಾಗಿದೆ.

ಅನು: ವಿಶ್ವ

"ಸ್ವತಂತ್ರ ವ್ಯಕ್ತಿಯಾಗಲು ಹೇಗೆನಿಸುತ್ತದೆ, ಮಿಸ್ಟರ್ ಅಸ್ಸಾಂಜೆ?" ಯಾರೋ ಕೂಗಿದರು. ಅವನು ಮುಗುಳ್‌ನಕ್ಕು ತಲೆಯಾಡಿಸಿ ನಡೆಯುತ್ತಲೇ ಇದ್ದ. ಆಸ್ಟ್ರೇಲಿಯಕ್ಕೆ ಮನೆಗೆ ಕರೆದುಕೊಂಡು ಹೋಗಲು ಹಿಡಿಯಲು ಇನ್ನೊಂದು ವಿಮಾನವಿತ್ತು.'' ಇದು ದಿ ಎಕಾನಮಿಕ್ ಟೈಮ್ಸ್ ನಲ್ಲಿ 2024ರ ಜೂನ್ 29ರಂದು ವಾಷಿಂಗ್ಟನ್ ನಿಂದ ಮಾಡಿದ ಸುದ್ದಿಯೊಂದರ ತುಣುಕು. ಹೌದು, ಅಮೆರಿಕದ ಆಡಳಿತದ ವಿವಿಧ ರಹಸ್ಯ ದಾಖಲೆಗಳನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸುವ ಮೂಲಕ ಸಾಮ್ರಾಜ್ಯಶಾಹಿಯ ಕ್ರೂರ ಮುಖವನ್ನು ಬಹಿರಂಗಪಡಿಸಿದ ವಿಕಿಲೀಕ್ಸ್ ಮುಖ್ಯಸ್ಥ ಜೂಲಿಯನ್ ಅಸ್ಸಾಂಜೆ 12 ವರ್ಷಗಳ ನಂತರ ಕೊನೆಗೂ ಬಿಡುಗಡೆಗೊಂಡಿದ್ದಾರೆ. ಅವರ ಬಿಡುಗಡೆಯು ಅಭಿವ್ಯಕ್ತಿ ಹಕ್ಕಿಗೆ ಸಿಕ್ಕ ಗೆಲುವು ಎಂದರೆ ಅತಿಶಯೋಕ್ತಿಯಲ್ಲ.

ಸಾಮ್ರಾಜ್ಯಶಾಹಿಯ ಕ್ರೂರ ಮುಖವನ್ನು ಬಹಿರಂಗಪಡಿಸಿದ ವಿಕಿಲೀಕ್ಸ್ ಮುಖ್ಯಸ್ಥ

ಜೂಲಿಯನ್ ಅಸ್ಸಾಂಜೆ ಬಿಡುಗಡೆ: ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಜಯ!

ಸಿ.ಸಿದ್ದಯ್ಯ

ಅಮೆರಿಕದ ವಂಚನೆ ಮತ್ತು ದುಷ್ಟತನವನ್ನು ಶಕ್ತಿಯುತವಾಗಿ ಬಯಲಿಗೆಳೆದು ಸಂಚಲನ ಮೂಡಿಸಿದ್ದ ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸ್ಸಾಂಜೆ ಹದಿನಾಲ್ಕು ವರ್ಷಗಳ ನಂತರ ಗಡಿಪಾರು ಮತ್ತು ಬಂಧನದಿಂದ ಬಿಡುಗಡೆಗೊಂಡಿದ್ದಾರೆ. ಇದು ಸ್ವಾಗತಾರ್ಹ ಬೆಳವಣಿಗೆ. ಅಮೆರಿಕ ಸರ್ಕಾರದೊಂದಿಗಿನ ಮನವಿ ಒಪ್ಪಂದದ ಭಾಗವಾಗಿ ಬೇಹುಗಾರಿಕೆ ಆರೋಪದಲ್ಲಿ ಅಸ್ಸಾಂಜೆ ತಪ್ಪೊಪ್ಪಿಕೊಂಡಿದ್ದಾರೆ. ಅದಕ್ಕಾಗಿ ಅವರಿಗೆ ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು. ಆದರೆ ಬ್ರಿಟನ್ನಿನಲ್ಲಿ ಅವರು ಅದಕ್ಕಿಂತ ಹೆಚ್ಚಿನ ಅವಧಿಗೆ ಜೈಲಿನಲ್ಲಿದ್ದರು, ಆದ್ದರಿಂದ ಅವರು ಶಿಕ್ಷೆಯನ್ನು ಪೂರ್ಣಗೊಳಿಸಿದರು ಮತ್ತು ತಕ್ಷಣವೇ ಬಿಡುಗಡೆಗೊಂಡು ಮಾತೃಭೂಮಿ ಆಸ್ಟ್ರೇಲಿಯಾಕ್ಕೆ ಹೊರಟಿದ್ದರು. ಇರುವೆಯಿಂದಲೂ ಭೇದಿಸಲಾಗದ, ಗಾಳಿಯ ಸದ್ದನ್ನೂ ಪತ್ತೆ ಹಚ್ಚಬಲ್ಲ ಅಮೆರಿಕದ ಗುಪ್ತಚರ ವ್ಯವಸ್ಥೆಯಿಂದ ಲಕ್ಷಾಂತರ ರಹಸ್ಯ ಕಡತಗಳನ್ನು ಪತ್ರಕರ್ತರು ಹೇಗೆ ಪಡೆದುಕೊಳ್ಳಬಹುದು ಎಂಬುದನ್ನು ಅಸ್ಸಾಂಜೆ ಜಗತ್ತಿಗೆ ತೋರಿಸಿಕೊಟ್ಟರು.

ಅಮೆರಿಕದ ಆಡಳಿತದ ವಿವಿಧ ರಹಸ್ಯ ದಾಖಲೆಗಳನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸುವ ಮೂಲಕ ಸಾಮ್ರಾಜ್ಯಶಾಹಿಯ ಕ್ರೂರ ಮುಖವನ್ನು ಬಹಿರಂಗಪಡಿಸಿದ ಜೂಲಿಯನ್ ಅಸ್ಸಾಂಜೆ ಅವರ ಬಿಡುಗಡೆಯನ್ನು ಪ್ರಪಂಚದಾದ್ಯಂತದ ಪ್ರಜಾಪ್ರಭುತ್ವ ಪರ ಬೆಂಬಲಿಗರು ವ್ಯಾಪಕವಾಗಿ ಸ್ವಾಗತಿಸಿದ್ದಾರೆ. ಸುಮಾರು 6 ವರ್ಷಗಳ ಕಾಲ ಲಂಡನ್ ನಲ್ಲಿರುವ ಈಕ್ವೆಡಾರ್ ರಾಯಭಾರ ಕಚೇರಿಯಲ್ಲಿ ಆಶ್ರಯ ಮತ್ತು ಆರು ವರ್ಷಗಳ ಕಾಲ ಬ್ರಿಟನ್ ಜೈಲಿನಲ್ಲಿ ಕಳೆದ ಅಸ್ಸಾಂಜೆಯನ್ನು ಬಿಡುಗಡೆ ಮಾಡುವಂತೆ ವಿಶ್ವದಾದ್ಯಂತ ಹತ್ತಾರು ಸಾವಿರ ಪ್ರಗತಿಪರರು ಮತ್ತು ಎಡಪಂಥೀಯರು ನಿರಂತರವಾಗಿ ಧ್ವನಿ ಎತ್ತಿದ್ದರು. ಹೀಗಾಗಿ ಅವರ ಬಿಡುಗಡೆಯು ಅಭಿವ್ಯಕ್ತಿ ಹಕ್ಕಿಗೆ ಸಿಕ್ಕ ಗೆಲುವು ಎಂದರೆ ಅತಿಶಯೋಕ್ತಿಯಲ್ಲ.

"ವಿಕಿಲೀಕ್ಸ್" ಎಂಬ ವೆಬ್ಸೈಟ್ ಮೂಲಕ?

ಜೂಲಿಯನ್ ಅಸ್ಸಾಂಜೆ ತಾನು ಆರಂಭಿಸಿದ "ವಿಕಿಲೀಕ್ಸ್" ಎಂಬ ವೆಬ್ ಸೈಟ್ ಮೂಲಕ, ಅಮೆರಿಕದ ಯುದ್ಧ ಅಪರಾಧಗಳನ್ನು ಜಗತ್ತಿಗೆ ಬಹಿರಂಗಪಡಿಸುವ ಲಕ್ಷಾಂತರ ದಾಖಲೆಗಳನ್ನು ಬಿಡುಗಡೆ ಮಾಡಿದರು. ಇರಾಕ್ ಮತ್ತು ಅಫ್ಘಾನಿಸ್ತಾನದಲ್ಲಿ ಅಮೆರಿಕದ ನರಮೇಧ ಮತ್ತು ಸಾಮಾನ್ಯ ಜನರ ಮೇಲಿನ ದೌರ್ಜನ್ಯವನ್ನು ಸಾಕ್ಷ್ಯಗಳೊಂದಿಗೆ ಬಹಿರಂಗಪಡಿಸಿದರು. ಅಮೆರಿಕ ಆಡಳಿತ, ಮಿಲಿಟರಿ ಸಂಸ್ಥೆ ಪೆಂಟಗನ್, ಗುಪ್ತಚರ ಸಂಸ್ಥೆಗಳಾದ ಸಿಐಎ, ಎಫ್ ಬಿಐ ನಂತಹ ಹಲವು ಸಂಸ್ಥೆಗಳ ಸಾವಿರಾರು ಇಮೇಲ್ಗಳು ಮತ್ತು ಮಾಹಿತಿಗಳನ್ನು ವಿಕಿಲೀಕ್ಸ್ ಬಹಿರಂಗಪಡಿಸಿತು. ವಾಸ್ತವವಾಗಿ, ಅಸ್ಸಾಂಜೆ ಪತ್ರಿಕೋದ್ಯಮದ ಕರ್ತವ್ಯವನ್ನು ಅತ್ಯಂತ ಧೈರ್ಯದಿಂದ ನಿರ್ವಹಿಸಿದರು. 'ಮಹಾಶಕ್ತಿ' ತನ್ನ ಮೇಲೆ ದಾಳಿ ಮಾಡುತ್ತದೆ ಮತ್ತು ತನ್ನ ಪ್ರಾಣಕ್ಕೂ ಅಪಾಯವಿದೆ ಎಂದು ತಿಳಿದಿದ್ದರೂ, ಅವರು ಇದರಿಂದ ಹಿಂದೆ ಸರಿಯಲಿಲ್ಲ.

ಅಮೆರಿಕ ಆಡಳಿತವು ತನ್ನ ಸ್ವಂತ ಹಿತಾಸಕ್ತಿಗಾಗಿ ಜಗತ್ತಿನಾದ್ಯಂತ ಭಯೋತ್ಪಾದಕ ಕೃತ್ಯಗಳನ್ನು ನಡೆಸುವ ಅಭ್ಯಾಸವನ್ನು ಹೊಂದಿದೆ. ಸೈನ್ಯ/ಸಿಐಎ ಇವುಗಳ ಮೂಲಕ ಮಾತ್ರವಲ್ಲ; ಅಧಿಕೃತ ಮತ್ತು ಅಧಿಕೃತವಾಗಿಯೂ ಅನೇಕ ದೌರ್ಜನ್ಯಗಳು ಮತ್ತು ಹತ್ಯೆಗಳನ್ನು ಅಮೆರಿಕ ಮಾಡಿದೆ. ವಿವಿಧ ದೇಶಗಳಲ್ಲಿ ಅಮೆರಿಕದ ರಾಯಭಾರಿ ಕಚೇರಿಗಳ ತೆರೆಮರೆಯ ಚಟುವಟಿಕೆಗಳು ಮತ್ತು ಹೆಚ್ಚುತ್ತಿರುವ ಭ್ರಷ್ಟಾಚಾರವನ್ನು ಅಸ್ಸಾಂಜೆ



ಬೆಳಕಿಗೆ ತಂದರು. ಶ್ರೀಸಾಮಾನ್ಯನ ಹಣವನ್ನು ಕಸಿದುಕೊಳ್ಳುತ್ತಿರುವ ಜಾಗತಿಕ ಆಡಳಿತಗಾರರು ಮತ್ತು ಆ ಪಾಪದ ಹಣವನ್ನು ರಕ್ಷಿಸುತ್ತಿರುವ ಹಲವು ದೇಶಗಳ ಬ್ಯಾಂಕುಗಳ ವಿವರಗಳನ್ನು ಅವರು ಸಾರ್ವಜನಿಕಗೊಳಿಸಿದರು. ಇದನ್ನು ತಿಳಿದ ಅಮೆರಿಕನ್ನರು ಸೇರಿದಂತೆ ವಿಶ್ವದ ಜನರು ಆಘಾತಕ್ಕೊಳಗಾದರು. ಇದು ಅಮೇರಿಕಾದ ಆಡಳಿತಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿತ್ತು. ಆದ್ದರಿಂದ ಅಸ್ಸಾಂಜೆಯನ್ನು ಅತ್ಯಂತ ಕಠಿಣವಾಗಿ ಶಿಕ್ಷಿಸುವ ಮೂಲಕ, ತನ್ನ ರಹಸ್ಯಗಳನ್ನು ಬಹಿರಂಗಪಡಿಸಲು ಯಾರಾದರೂ ಯೋಚಿಸಲೂ ಸಹ ಭಯಪಡುವ ವಾತಾವರಣವನ್ನು ಸೃಷ್ಟಿಸಲು ಅಮೆರಿಕ ನಿರ್ಧರಿಸಿದೆ.

ಅಸ್ಸಾಂಜೆ ಬಹಿರಂಗಪಡಿಸಿದ ಅಮೆರಿಕದ ಕೆಲವು ಯುದ್ಧ ಅಪರಾಧಗಳು:

ಇರಾಕಿನಲ್ಲಿ 2006 ರಲ್ಲಿ, ತಾಲಿಬಾನ್, ಅಲ್ ಖೈದಾ ದಂತಹ ಭಯೋತ್ಪಾದಕ ಸಂಘಟನೆಗಳಿಗೆ

> ತನಿಖಾ ಪತ್ರಿಕೋದ್ಯಮವು ಅಸ್ಸಾಂಜೆ ಪ್ರಕರಣದೊಂದಿಗೆ ಕೊನೆಗೊಳ್ಳುವುದಿಲ್ಲ. ಅಥವಾ ಆಡಳಿತಗಾರರ ದುಷ್ಕೃತ್ಯಗಳನ್ನು ಪ್ರಾಮಾಣಿಕವಾಗಿ ಬಹಿರಂಗಪಡಿಸಲು ಬಯಸುವ ಪತ್ರಕರ್ತರನ್ನು ಭೇಟಿಯಾಡುವುದನ್ನು ಅವರು ನಿಲ್ಲಿಸುವುದಿಲ್ಲ. ತನಿಖಾ ಪತ್ರಿಕೋದ್ಯಮವು ದೇಶದ್ರೋಹವಲ್ಲ, ಅದು ಜನರ ಪರವಾಗಿ ನಿಂತಿದೆ. ಇರಾನ್, ಇರಾಕ್ ಮತ್ತು ಅಫ್ಘಾನಿಸ್ತಾನದಲ್ಲಿ ಅಮೆರಿಕದ ದೌರ್ಜನ್ಯವನ್ನು ವಿಕಿಲೀಕ್ಸ್ ಬಹಿರಂಗಪಡಿಸಿದೆ. ಮುಂದೆ ಏನಾಯಿತು ಎಂಬುದನ್ನು ಬಹಿರಂಗಪಡಿಸಲು ಪ್ರತಿಯೊಬ್ಬ ಪತ್ರಕರ್ತ ಅಸ್ಸಾಂಜೆ ಆಗಬೇಕಾಗಿದೆ.

ಸೌದಿ ಅರೇಬಿಯಾ ಆಡಳಿತ ಹಣಕಾಸಿನ ನೆರವು ನೀಡುತ್ತಿದೆ ಎಂಬುದನ್ನು ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಅರಿತಿದ್ದರು. ಆದರೆ ಅದನ್ನು ಅವರು ತಡೆಯಲಿಲ್ಲ. ಸೌದಿ ಸರ್ಕಾರವನ್ನು ಖಂಡಿಸಲೂ ಇಲ್ಲ. ಆದರೆ ಅಮೆರಿಕ ಮಾತ್ರ ತಾನು ಭಯೋತ್ಪಾದನೆಯ ವಿರುದ್ಧ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿಕೊಳ್ಳುತ್ತಿದೆ.

ಹಿಂದೂ ಮಹಾಸಾಗರದಲ್ಲಿರುವ ಡಿಯಾಗೊ ಗಾರ್ಸಿಯಾ ದ್ವೀಪದಲ್ಲಿ ಅಮೆರಿಕ ಮಿಲಿಟರಿ ನೆಲೆಗಳಿಗಾಗಿ ಸ್ಥಳೀಯ ಜನರನ್ನು ಹೊರಹಾಕಿದರು. ಆದರೆ ಜನರಿಗೆ ಅದರ ಬಗ್ಗೆ ತಪ್ಪು ಮಾಹಿತಿ ನೀಡಿದರು. ಅಮೆರಿಕದಲ್ಲಿಯೂ ಇತರೆ ದೇಶಗಳಲ್ಲಿಯೂ ಸಿಐಎ ರಂಗಪ್ರವೇಶ ಮಾಡಿ ಹಲವು ಹತ್ಯಾಕಾಂಡಗಳನ್ನು ನಡೆಸಿದ ಕುರಿತು ವಿಕಿಲೀಕ್ಸ್ ಪಟ್ಟಿ ಮಾಡಿದೆ. ಇರಾಕ್ ನಲ್ಲಿಯೂ ಅಫ್ಘಾನಿಸ್ತಾನದಲ್ಲಿಯೂ ಅಮೆರಿಕ ಮಿಲಿಟರಿಯಿಂದ ಹಲವಾರು ಯುದ್ಧಾಪರಾಧಗಳು ನಡೆದಿವೆ. ಇವುಗಳಲ್ಲಿ ಕೆಲವು ಪ್ರಮುಖ ದೌರ್ಜನ್ಯಗಳು ವಿಕಿಲೀಕ್ಸ್ನಿಂದ ಬಹಿರಂಗಗೊಂಡಿವೆ.

ಈ ಡೇಟಾವನ್ನು ಅಮೆರಿಕ ಮಿಲಿಟರಿ ಉದ್ಯೋಗಿ ಎಡ್ವರ್ಡ್ ಮ್ಯಾನಿಂಗ್ ಅವರು ಜೂಲಿಯನ್ ಅಸ್ಸಾಂಜೆಗೆ ನೀಡಿದ್ದಾರೆ. ಎಡ್ವರ್ಡ್ ಅವರನ್ನು ಬಂಧಿಸಿ ಏಕಾಂತ ಸೆರೆಮನೆಯಲ್ಲಿ ಚಿತ್ರಹಿಂಸೆ ನೀಡಲಾಯಿತು. ಅವರು ಎರಡು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದರು. ಯುನೈಟೆಡ್ ಸ್ಟೇಟ್ಸ್ನ ತೀವ್ರ ವಿರೋಧದಿಂದಾಗಿ 2017 ರಲ್ಲಿ, ಒಬಾಮಾ ತಮ್ಮ ಶಿಕ್ಷೆಯನ್ನು ಕಡಿಮೆ ಮಾಡಿದರು ಮತ್ತು ಎಡ್ವರ್ಡ್ ಬಿಡುಗಡೆಯಾದರು. ಆದರೆ ಅಸ್ಸಾಂಜೆ ವಿರುದ್ಧ ಸಾಕ್ಷ್ಯ ನೀಡಲು ನಿರಾಕರಿಸಿದ್ದಕ್ಕಾಗಿ ಅವರನ್ನು 2019 ರಲ್ಲಿ ಮತ್ತೆ ಬಂಧಿಸಲಾಯಿತು ಮತ್ತು 2020 ರಲ್ಲಿ ಬಿಡುಗಡೆ ಮಾಡಲಾಯಿತು.

ಲೈಂಗಿಕ ದೌರ್ಜನ್ಯದ ಆರೋಪ

ತನ್ನ ಪ್ರಾಣವನ್ನೇ ಪಣವಾಗಿಟ್ಟು ವಿಶ್ವದ ಮಾನವೀಯತೆಗಾಗಿ ಅಸ್ಸಾಂಜೆ ತೋರಿದ ಶೌರ್ಯ, ಬೆಳಕಿಗೆ ತಂದ ಸತ್ಯಗಳನ್ನು ಗೂಢಚಾರಿಕೆ ಎಂಬ ಹಣೆಪಟ್ಟಿ ಹಚ್ಚಿ ಹಲವು ಪ್ರಕರಣಗಳನ್ನು ದಾಖಲಿಸಲಾಯಿತು. ಪ್ರಪಂಚದಾದ್ಯಂತ ಅಮೆರಿಕ ತನ್ನ ಮಿತ್ರರಾಷ್ಟ್ರಗಳೊಂದಿಗೆ ಅದೇ ರೀತಿ ಮಾಡಿದೆ. ಹೇಗಾದರೂ ಜೂಲಿಯನ್ ಅಸ್ಸಾಂಜೆಯನ್ನು ಅಮೆರಿಕಕ್ಕೆ ವಿಚಾರಣೆಗೆ ಕರೆತರಲು ಪ್ರಯತ್ನಿಸಿತು. ಅದಕ್ಕಾಗಿ, ಸ್ವೀಡನ್ನಲ್ಲಿ ಇಬ್ಬರು ಮಹಿಳೆಯರನ್ನು ಮೋಹಿಸಿದ ನಂತರ ಅಸ್ಸಾಂಜೆ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಹೊರಿಸಲಾಯಿತು. ಸ್ವೀಡನ್‌ನಲ್ಲಿ ದಾಖಲಾದ ಲೈಂಗಿಕ ಅಪರಾಧಗಳಿಗಾಗಿ 2010 ರಲ್ಲಿ ಅವರನ್ನು ಮೊದಲ ಬಾರಿಗೆ ಬ್ರಿಟನ್‌ನಲ್ಲಿ ಬಂಧಿಸಲಾಯಿತು.

ಇದನ್ನು ಉಲ್ಲೇಖಿಸಿ ಅಸ್ಸಾಂಜೆ ಅವರನ್ನು ತನಿಖೆಗೆ ಕಳುಹಿಸುವಂತೆ ಸ್ವೀಡಿಷ್ ಸರ್ಕಾರ ಮನವಿ ಮಾಡಿತು. ಸ್ವೀಡಿಷ್ ಸರ್ಕಾರವು ಅಸ್ಸಾಂಜೆಗೆ ಬಂಧನ ವಾರಂಟ್ ಹೊರಡಿಸಿತು. ಆದರೆ ಅಸಾಂಜೆಯನ್ನು ಸ್ವೀಡನ್‌ನಿಂದ ಅಮೆರಿಕಕ್ಕೆ ಕಳುಹಿಸುವುದು ನಿಜವಾದ ಯೋಜನೆಯಾಗಿತ್ತು! ಅಸ್ಸಾಂಜೆ ಅವರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿತ್ತು. ನಂತರ, ವಿಕಿಲೀಕ್ಸ್ ಯಾರಿಗೂ ಹಣಕಾಸಿನ ನೆರವು ನೀಡದಂತೆ ನಿಷೇಧಿಸಲಾಯಿತು. ಸ್ವೀಡಿಷ್ ಬಂಧನ ವಾರಂಟ್ ಮೇಲೆ ಲಂಡನ್‌ನಲ್ಲಿ ಅಸ್ಸಾಂಜೆಗೆ ಜಾಮೀನು ನೀಡಲಾಯಿತು. ಆದರೆ ಅವರನ್ನು ಬಂಧಿಸಿ ಸ್ವೀಡನ್‌ನಿಗೆ ಕಳುಹಿಸುವುದು ಖಚಿತ ಎಂದು ತಿಳಿದ ನಂತರ ಅವರು ಲಂಡನ್ ನಲ್ಲಿರುವ ಈಕ್ವೆಡಾರ್ ದೇಶದ ರಾಯಭಾರ ಕಚೇರಿಯಲ್ಲಿ ಆಶ್ರಯ ಪಡೆಯುವುದನ್ನು ಬಿಟ್ಟು ಬೇರೆ ದಾರಿ ಇರಲಿಲ್ಲ. 2019ರ ವರೆಗೆ ಅಲ್ಲಿ ಆಶ್ರಯ ಪಡೆದಿದ್ದರು. ಆ ಸಮಯದಲ್ಲಿ ಈಕ್ವೆಡಾರ್‌ನಲ್ಲಿ ಎಡಪಂಥೀಯ ಸರ್ಕಾರ ಅಧಿಕಾರದಲ್ಲಿತ್ತು. ಆದ್ದರಿಂದ ಅಸ್ಸಾಂಜೆಗೆ ಆಶ್ರಯ ನೀಡಿದ್ದರಲ್ಲಿ ಅರ್ಥವಿದೆ. ಏತನ್ಮಧ್ಯೆ, ಲೈಂಗಿಕ ಆರೋಪ ಸಾಬೀತಾಗದ ಕಾರಣ ಸ್ವೀಡಿಷ್ ನ್ಯಾಯಾಲಯ ಅವರನ್ನು ಖುಲಾಸೆಗೊಳಿಸಿತು.

ಬ್ರಿಟನ್ ನಲ್ಲಿ ಮತ್ತೆ ಬಂಧನ

2019 ರಲ್ಲಿ, ಈಕ್ವೆಡಾರ್‌ನಲ್ಲಿ ದಂಗೆ ನಡೆಯಿತು ಮತ್ತು ಅಲ್ಲಿ ಎಡಪಂಥೀಯರು ಅಧಿಕಾರ ಕಳೆದುಕೊಂಡರು. ಹೊಸ ಸರ್ಕಾರವು ಅಸ್ಸಾಂಜೆ ಅವರನ್ನು ರಕ್ಷಿಸಲು ಮುಂದೆ ಬರಲಿಲ್ಲ. ಈಕ್ವೆಡಾರ್ ತನ್ನ ಆಶ್ರಯ ರಕ್ಷಣೆಯನ್ನು ಹಿಂತೆಗೆದುಕೊಂಡಿತು. ಆದ್ದರಿಂದ ಬ್ರಿಟಿಷ್ ಪೊಲೀಸರು ರಾಯಭಾರಿ ಕಚೇರಿಗೆ ಹೋಗಿ ಅವರನ್ನು ಬಂಧಿಸಿ, ಹೆಚ್ಚಿನ ಭದ್ರತೆಯ ಬೆಲ್ಮಾರ್ಷ್ ಜೈಲಿನಲ್ಲಿ ಎಂಟು ಅಡಿ ಉದ್ದ ಮತ್ತು ಎಂಟು ಅಡಿ ಅಗಲ ಇರುವ ಸಣ್ಣದೊಂದು ಸೆಲ್‌ನಲ್ಲಿ, ಹೆಚ್ಚಾಗಿ ಏಕಾಂತ ಸೆರೆಮನೆಯಲ್ಲಿ ಇರಿಸಲಾಗಿತ್ತು. ಕಳೆದ ಐದು ವರ್ಷಗಳಿಂದ ಆ ಸೆಲ್‌ನಲ್ಲಿ ಇದ್ದರು. ಕುಟುಂಬ ಸದಸ್ಯರನ್ನು ಹೊರತುಪಡಿಸಿ ತನ್ನ ಸಹ ಕೈದಿಗಳನ್ನು ಕೂಡಾ ಭೇಟಿಯಾಗಲು ಅವರಿಗೆ ಅನುಮತಿ ಇರಲಿಲ್ಲ. ಈಕ್ವೆಡಾರ್ ರಾಯಭಾರ ಕಚೇರಿಯಲ್ಲಿದ್ದಾಗ ಹೊರಗಿನ ಪ್ರಪಂಚದೊಂದಿಗಿನ ಸಂಬಂಧಗಳನ್ನು ನಿರ್ಬಂಧಿಸಲಾಗಿತ್ತು.

ಬ್ರಿಟಿಷ್ ನ್ಯಾಯಾಲಯಗಳು ಕೆಲವೊಮ್ಮೆ ಅವರನ್ನು ಅಮೆರಿಕಕ್ಕೆ ಕಳುಹಿಸಬೇಕು ಮತ್ತು ಕೆಲವೊಮ್ಮೆ ಬೇಡ ಎಂದು ತೀರ್ಪು ನೀಡುತ್ತಾ ಬಂದಿವೆ. ಅಂತಿಮವಾಗಿ, ಮೇ ತಿಂಗಳಲ್ಲಿ, ಬ್ರಿಟನ್ನಿನ ಹೈಕೋರ್ಟ್‌ಗೆ ಅಮೆರಿಕ ಆರೋಪಗಳನ್ನು ಅಸ್ಸಾಂಜೆ ಅವರು ಮೇಲ್ಮನವಿ ಸಲ್ಲಿಸಬಹುದು ಎಂದು ನ್ಯಾಯಾಲಯವು ತೀರ್ಪು ನೀಡಿತು. ಇದು ಅಮೆರಿಕ ಸರ್ಕಾರದ ಕೈಯಲ್ಲಿ ಅಸ್ಸಾಂಜೆಯ ದೋಷಾರೋಪಣೆಯನ್ನು ವಿಳಂಬಗೊಳಿಸಿತು. ಈ ಮಧ್ಯೆ, ಅಮೆರಿಕ ಸರ್ಕಾರ ಮತ್ತು ಅಸಾಂಜೆ

ಪುಟ 10 ಕ್ಕೆ



ಮೂರು ಹೊಸ ಕ್ರಿಮಿನಲ್ ಕಾನೂನುಗಳು ದಬ್ಬಾಳಿಕೆಯನ್ನು ಸಕ್ರಮಗೊಳಿಸಲು!

ಮೂರು ಕ್ರಿಮಿನಲ್ ಕಾನೂನುಗಳು ಜಾರಿಗೆ ಬಂದ ಕೆಲವೇ ಗಂಟೆಗಳಲ್ಲಿ ದೆಹಲಿಯಲ್ಲಿ ಬೀದಿ ಬದಿ ವ್ಯಾಪಾರಿಯೊಬ್ಬರ ವಿರುದ್ಧ ರೂ. ೫,೦೦೦ ದಂಡ ಮತ್ತು ಜೈಲು ಶಿಕ್ಷೆ ವಿಧಿಸಬಹುದಾದ ಮೊದಲ ಪ್ರಕರಣ ದಾಖಲಾಗಿದೆ. ಈ ಪ್ರಕರಣವು ಬಡವರು, ಜನಸಾಮಾನ್ಯನರು ಒಟ್ಟಾರೆ ದುಡಿಯುವ ವರ್ಗದ ಮೇಲೆ ಹೇಗೆಲ್ಲಾ ಪರಿಣಾಮ ಬೀರುತ್ತದೆ ಎಂಬುದನ್ನು ತೋರಿಸಿಕೊಟ್ಟಿದೆ. ಈ ಮೂರೂ ಕಾನೂನುಗಳು ಅಸಂವಿಧಾನಿಕವಾಗಿವೆ. ಭಾಷಾ ಹಕ್ಕುಗಳು, ರಾಜ್ಯ ಸರ್ಕಾರಗಳ ಹಕ್ಕು, ಒಕ್ಕೂಟ ನೀತಿಗಳು ಹಾಗೂ ಜನರ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ವಿರುದ್ಧವಾಗಿವೆ. ವಿವಿಧ ಕಾನೂನುಗಳು ಮಾನವ ಹಕ್ಕುಗಳು, ಪ್ರಜಾಪ್ರಭುತ್ವ ಹಕ್ಕುಗಳ ವಿರುದ್ಧ ಮತ್ತು ಆಳುವ ವರ್ಗದ ದಬ್ಬಾಳಿಕೆಯನ್ನು ಬೆಂಬಲಿಸುತ್ತವೆ. ನ್ಯಾಯಾಲಯಗಳ ಅಧಿಕಾರವನ್ನು ಕಡಿಮೆಗೊಳಿಸುತ್ತದೆ.

ಅಸ್ತಿತ್ವದಲ್ಲಿರುವ ಬ್ರಿಟಿಷ್ ಕಾನೂನುಗಳ ಬದಲಿಗೆ ಕೇಂದ್ರ ತಂದಿರುವ ಹೊಸ ಕ್ರಿಮಿನಲ್ ಕಾನೂನುಗಳು ಜುಲೈ ಒಂದರಿಂದ ದೇಶಾದ್ಯಂತ ಜಾರಿಗೆ ಬಂದಿವೆ. ಈ ಕಾನೂನುಗಳು ಜಾರಿಗೆ ಬಂದ ಕೆಲವೇ ಗಂಟೆಗಳಲ್ಲಿ ಹೊಸ ಕಾನೂನಿನಡಿಯಲ್ಲಿ ಮೊದಲ ಪ್ರಕರಣ ಬೀದಿ ಬದಿ ವ್ಯಾಪಾರಿ ಬಿಹಾರದ ಪಂಕಜ್ ಕುಮಾರ್ ವಿರುದ್ಧ ದೆಹಲಿಯಲ್ಲಿ ದಾಖಲಾಗಿದೆ. ಕಮಲಾ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ಪ್ರಕಾರ, ರಸ್ತೆ ಬದಿಯಲ್ಲಿ ತಳ್ಳುಗಾಡಿಯಲ್ಲಿ ತಂಬಾಕು ಮತ್ತು ನೀರು ಮಾರಾಟ ಮಾಡುತ್ತಿದ್ದು, ದಾರಿಹೋಕರಿಗೆ ತೊಂದರೆ ನೀಡುತ್ತಿದ್ದರು. ಪೊಲೀಸರು BNS ಸೆಕ್ಷನ್ 285 (ಸಾರ್ವಜನಿಕ ಮಾರ್ಗ ಅಥವಾ ನ್ಯಾವಿಗೇಷನ್ ಲೈನ್ ನಲ್ಲಿ ಅಪಾಯ ಅಥವಾ ಅಡಚಣೆಯನ್ನು ಸೃಷ್ಟಿಸುವುದು) ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿದ್ದಾರೆ. ಈ ಅಪರಾಧ ಸಾಬೀತಾದರೆ ರೂ. 5,000 ದಂಡ ಮತ್ತು ಜೈಲು ಶಿಕ್ಷೆ. ಸಾಮಾಜಿಕ ಜಾಲತಾಣಗಳಲ್ಲಿ ಗಲಾಟೆಯಿಂದಾಗಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಆದೇಶದ ಮೇರೆಗೆ ಎಫ್‌ಐಆರ್ ರದ್ದುಗೊಳಿಸಲಾಗಿದೆ. ಈ ಪ್ರಕರಣವು ಬಡವರು, ಜನಸಾಮಾನ್ಯರು ಒಟ್ಟಾರೆ ದುಡಿಯುವ ವರ್ಗದ ಮೇಲೆ ಈ ಹೊಸ ಕಾನೂನುಗಳು ಹೇಗೆಲ್ಲಾ ಪರಿಣಾಮ ಬೀರುತ್ತದೆ ಎಂಬುದನ್ನು ತೋರಿಸಿಕೊಟ್ಟಿದೆ.

ನ್ಯಾಯಾಂಗ ವ್ಯವಸ್ಥೆಯಲ್ಲಿ ವಿವಿಧ ಬದಲಾವಣೆಗಳಾಗಿವೆ

ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ವಿವಿಧ ಬದಲಾವಣೆಗಳಾಗಿವೆ. ಈ ಮೂಲಕ ಅಗತ್ಯ ಕಾನೂನುಗಳನ್ನು ಜಾರಿಗೊಳಿಸಲಾಗಿದೆ ಮತ್ತು ಅಸ್ತಿತ್ವದಲ್ಲಿರುವ ಕಾನೂನುಗಳಿಗೆ ತಿದ್ದುಪಡಿಗಳನ್ನು ಮಾಡಲಾಗಿದೆ. ಆದರೆ ಮೋದಿ ಸರ್ಕಾರವು ತನ್ನ ಎರಡನೇ ಅಧಿಕಾರದ ಕೊನೆಯ ಅವಧಿಯಲ್ಲಿ ಭಾರತೀಯ ದಂಡ ಸಂಹಿತೆ (IPC), ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ (CRPC) ಮತ್ತು ಭಾರತೀಯ ಸಾಕ್ಷ್ಯ ಕಾಯಿದೆ (IAA) ಗಳನ್ನು ಭಾರತೀಯ ದಂಡ ಸಂಹಿತೆ (BNS), ಭಾರತೀಯ ನಾಗರಿಕ ಸಂರಕ್ಷಣಾ ಸಂಹಿತೆ (BNSS) ಮತ್ತು ಭಾರತೀಯ ಸಾಕ್ಷಿ ಕಾಯಿದೆ (BSA) ಗಳಿಂದ ಬದಲಾಯಿಸಿತು. ಈ ಮೂರು ಹೊಸ ದಂಡ ಸಂಹಿತೆಗಳಿಗೆ ಸಂಸ್ಕೃತ ಹೆಸರುಗಳನ್ನು ಇಡಲಾಗಿದೆ.

ಆದರೆ, ಹೊಸ ಕಾನೂನಿನ ಬಗ್ಗೆ ವಿವಿಧ ಸಮುದಾಯಗಳಿಂದ ಆಕ್ಷೇಪಗಳು ವ್ಯಕ್ತವಾಗುತ್ತಿವೆ. ಚರ್ಚೆ ನಡೆಸದೆ ಅನುಮೋದನೆ ಪಡೆಯಲಾಗಿದೆ ಎಂದು ಹಲವರು ಆರೋಪಿಸಿದ್ದಾರೆ. ಅವುಗಳ ಅನುಷ್ಠಾನವನ್ನು ನಿಲ್ಲಿಸುವಂತೆ ಕೋರಿ ಅರ್ಜಿದಾರರಾದ ಅಂಜಲಿ ಪಟೇಲ್ ಮತ್ತು ಛಾಯಾ ಮಿಶ್ರಾ ಅವರು ಸುಪ್ರೀಂ ಕೋರ್ಟ್ ನಲ್ಲಿ ಈಗಾಗಲೇ ಅರ್ಜಿ ಸಲ್ಲಿಸಿದ್ದಾರೆ. ಕಳೆದ ವರ್ಷ ಡಿಸೆಂಬರ್ ನಲ್ಲಿ ಹೊಸ ಮಸೂದೆಗಳ ಅನುಮೋದನೆಯ ಸಮಯದಲ್ಲಿ 146 ಪ್ರತಿಪಕ್ಷ ಸಂಸದರನ್ನು ಲೋಕಸಭೆ ಮತ್ತು ರಾಜ್ಯಸಭೆಯಿಂದ ಏಕಕಾಲದಲ್ಲಿ ಅಮಾನತುಗೊಳಿಸಲಾಯಿತು ಮತ್ತು ಸಂಸತ್ತಿನ ಸದಸ್ಯರೊಂದಿಗೆ ಚರ್ಚೆ ನಡೆಸದೆ ಕೇಂದ್ರವು ಏಕಪಕ್ಷೀಯವಾಗಿ ಮಸೂದೆಗಳನ್ನು ಅನುಮೋದಿಸಿತು. ಈ ಹೊಸ ಕಾನೂನುಗಳ ಬಗ್ಗೆ ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿಲ್ಲ. ಅರ್ಜಿಯ ಪ್ರಕಾರ ಆರೋಪಿಗಳಿಗೆ ಜಾಮೀನು ಸಿಗುವ ಸಾಧ್ಯತೆಗಳು ಗಣನೀಯವಾಗಿ ಕಡಿಮೆಯಾಗಲಿದ್ದು, ಪೊಲೀಸರಿಗೆ ಅಗಾಧ ಅಧಿಕಾರ ನೀಡಲಾಗುವುದು. ಮತ್ತೊಂದೆಡೆ, ಪೀಪಲ್ಸ್ ಅಸೋಸಿಯೇಷನ್ ಫಾರ್ ಸಿವಿಲ್ ರೈಟ್ಸ್ (ಪಿಯುಸಿಎಲ್) ಈ ಹೊಸ ಕ್ರಿಮಿನಲ್ ಕಾನೂನುಗಳ ಅನುಷ್ಠಾನವನ್ನು ಸಂಸತ್ತಿನಲ್ಲಿ ಚರ್ಚೆಯಾಗುವವರೆಗೆ ಮುಂದೂಡುವಂತೆ ಕೋರಿ ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘಲ್ ಅವರಿಗೆ ಪತ್ರ ಬರೆದಿದೆ.

ಪ್ರಜಾಪ್ರಭುತ್ವದ ಮೇಲೆ ತೀವ್ರ ಪರಿಣಾಮ

ಕ್ರಿಮಿನಲ್ ವಕೀಲರು, ತನಿಖಾ ಸಂಸ್ಥೆಗಳು, ನ್ಯಾಯಾಧೀಶರು ಮತ್ತು ಸಾಮಾನ್ಯ ನಾಗರಿಕರೊಂದಿಗೆ ವ್ಯಾಪಕವಾದ ಸಮಾಲೋಚನೆ ಮತ್ತು ಅವರ ಅಭಿಪ್ರಾಯಗಳನ್ನು ಸಂಗ್ರಹಿಸದೆ ಈ ಕಾನೂನುಗಳನ್ನು ತರಾತುರಿಯಲ್ಲಿ ತರಲಾಗಿದೆ. ಭಾರತದ ಪ್ರಜಾಪ್ರಭುತ್ವದ ಮೇಲೆ ದೀರ್ಘಕಾಲೀನ ಪರಿಣಾಮ ಬೀರುವ ಈ ಕಾನೂನುಗಳ ಕುರಿತು ದೇಶದಾದ್ಯಂತ ದೊಡ್ಡ ಮಟ್ಟದಲ್ಲಿ ಚರ್ಚೆ ನಡೆಯಬೇಕು ಮತ್ತು ಅದರ ಅನುಷ್ಠಾನವನ್ನು ಅಲ್ಲಿಯವರೆಗೆ ಮುಂದೂಡಬೇಕು ಎಂದು ಪಿಯುಸಿಎಲ್ ಬಲವಾಗಿ ಒತ್ತಾಯಿಸಿದೆ. ಅವರು ವಲಸೆ ಕಾನೂನುಗಳಿಂದ ಹೊರಬರುತ್ತಿದ್ದೇವೆ ಎಂದು ಹೇಳುತ್ತಿರುವಾಗ, ಹಳೆಯ ಬ್ರಿಟಿಷ್ ಕಾನೂನುಗಳ ಹಲವು ಅಂಶಗಳನ್ನು ಸಹ ಹೊಸ ಕಾನೂನುಗಳಲ್ಲಿ ತರಲಾಗಿದೆ ಎಂದು ಪಿಯುಸಿಎಲ್ ಬಹಿರಂಗಪಡಿಸಿದೆ. ಕೋಡ್ ಗ್ಯಾಂಗ್, ಸಂಘಟಿತ ಅಪರಾಧ ಮತ್ತು ಗ್ಯಾಂಗ್ ಗಳಂತಹ ಪದಗಳನ್ನು ಒಳಗೊಂಡಿದೆ. ಆದರೆ, ಅವುಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿಲ್ಲ. ಇದರಿಂದ ಅಮಾಯಕರನ್ನೂ ಕೂಡ ಪ್ರಕರಣಗಳಲ್ಲಿ ಸಿಲುಕುವ ಸಾಧ್ಯತೆ ಇದೆ ಎನ್ನುತ್ತಾರೆ ಕಾನೂನು ತಜ್ಞರು.

ನ್ಯಾಯಾಂಗ ಮಧ್ಯಸ್ಥಿಕೆದಾರರು ಕೇವಲ 14 ದಿನಗಳವರೆಗೆ ನ್ಯಾಯಾಲಯದ ಕಸ್ಟಡಿಯಲ್ಲಿ ವಿರೋಧಿಯನ್ನು ಆದೇಶಿಸಬಹುದು ಎಂಬ ಹಳೆಯ ನಿಯಮವನ್ನು, ನಾಗರೀಕ ಸುರಕ್ಷಾ ಸಂಹಿತೆ ಪ್ರಕಾರ 90 ದಿನಗಳವರೆಗೆ ಆದೇಶಕ್ಕೆ ಬದಲಾಯಿಸಲಾಗಿದೆ. ಪೊಲೀಸರು ಆರೋಪಿಗಳನ್ನು ತಮ್ಮ ಕಸ್ಡಡಿಯಲ್ಲಿ 15 ದಿನಗಳ ಕಾಲ ಇಟ್ಟುಕೊಳ್ಳಬಹುದು. ಅಷ್ಟೇ ಅಲ್ಲ, ಅದರ ನಂತರವೂ 40 ರಿಂದ 60 ದಿನಗಳ ಹೆಚ್ಚುವರಿ ಕಸ್ಟಡಿಗೆ ಕೋರಬಹುದು. ಈ ಕಸ್ಟಡಿಯನ್ನು ಒಂದು ಹಂತದಲ್ಲಿ ಅಥವಾ ಹಲವಾರು ಹಂತಗಳಲ್ಲಿ ಕಾರ್ಯಗತಗೊಳಿಸಬಹುದು.

ಪುಟ 10 ಕ್ಕೆ

ಸಿಪಿಐ(ಎಂ) ನಿಂದ ತೀವ್ರ ವಿರೋಧ

ಜುಲೈ 1, 2024 ರಿಂದ ಹೊಸ ಕ್ರಿಮಿನಲ್ ಕಾನೂನುಗಳನ್ನು ಜಾರಿಗೆ ತರಲು ಮೋದಿ ಸರ್ಕಾರ ಪಟ್ಟು ಹಿಡಿದಿರುವುದಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿಯು ತೀವ್ರ ವಿರೋಧ ವ್ಯಕ್ತಪಡಿಸಿದೆ.

ತರಾತುರಿಯಲ್ಲಿ, ಚರ್ಚೆಯಿಲ್ಲದೆ, ನಿರಂಕುಶವಾಗಿ ಮತ್ತು ಪ್ರಜಾಪ್ರಭುತ್ವ ವಿರೋಧಿ ರೀತಿಯಲ್ಲಿ, ಸಂಸತ್ತಿನಿಂದ ಹೆಚ್ಚಿನ ಸಂಖ್ಯೆಯ ವಿರೋಧ ಪಕ್ಷದ ಸಂಸದರನ್ನು ಅಮಾನತುಗೊಳಿಸಿದಾಗ ಪಾಸು ಮಾಡಿಸಿಕೊಂಡ ಈ ಕಾನೂನುಗಳು ಸ್ವಭಾವತಃ ಕರಾಳ ಕಾನೂನುಗಳು ಎಂದು ಅದು ವರ್ಣಿಸಿದೆ.

ಸುಪ್ರೀಂ ಕೋರ್ಟ್ 'ದೇಶದ್ರೋಹ'ವನ್ನು ನಿರೂಪಿಸಿದ ಐಪಿಸಿಯ ಸೆಕ್ಷನ್ 124 ಎ ಅನ್ನು ಸಾಕಷ್ಟು ಸರಿಯಾಗಿಯೇ ತೆಗೆದು ಹಾಕಿದ್ದರೂ, ಇದನ್ನು ಹೊಸ ಭಾರತೀಯ ನ್ಯಾಯ ಸಂಹಿತೆಯಲ್ಲಿ ಸೆಕ್ಷನ್ 152 ಆಗಿ ಕಳ್ಳತನದಿಂದ ತೂರಲಾಗಿದೆ ಮತ್ತು ಇದರೊಂದಿಗೆ ಭಾರತದ ಸಾರ್ವಭೌಮತೆ ಮತ್ತು ಸಮಗ್ರತೆಯ ಉಲ್ಲೇಖಗಳಿವೆ. ಮೂಲ ಸೆಕ್ಷನ್ 124೦ ನಲ್ಲಿ ಇವು ಇರಲಿಲ್ಲ. ಇದು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಸ್ಪಷ್ಟ ಉಲ್ಲಂಘನೆಯಾಗಿದ್ದು, ಹೊಸ ಕಾನೂನಿನಿಂದ ಜನರನ್ನು 'ರಾಷ್ಟ್ರ ವಿರೋಧಿ'ಗಳೆಂದು ಆರೋಪಿಸುವುದು ಮತ್ತು ಶಿಕ್ಷೆಗೆ ಗುರಿಪಡಿಸುವುದು ಈಗ ಹೆಚ್ಚು ಸುಲಭವಾಗುತ್ತದೆ ಎಂದು ಅದು ಅಭಿಪ್ರಾಯಪಟ್ಟಿದೆ.

ಇವುಗಳಲ್ಲಿ ನಾಗರಿಕರಿಗೆ ಹಾನಿಯಾಗುವಂತಹ ಪೊಲೀಸ್ ಅಧಿಕಾರಗಳನ್ನು ಹೆಚ್ಚಿಸುವ ಅನೇಕ ನಿಬಂಧನೆಗಳಿವೆ. ಉದಾಹರಣೆಗೆ, ಹೊಸ ಕಾನೂನು ಹಿಂದಿನ ಕಾನೂನಿನಲ್ಲಿ ನಿಗದಿಪಡಿಸಿದ 15 ದಿನಗಳ ಮಿತಿಯನ್ನು ಮೀರಿ ಆರೋಪಿಯ ಪೊಲೀಸ್ ಕಸ್ಟಡಿಗೆ ಅವಕಾಶವನ್ನು ನೀಡುತ್ತದೆ. ಹೊಸ ನಿಬಂಧನೆಯ ಅರ್ಥ ನ್ಯಾಯಾಧೀಶರು ಒಬ್ಬ ಆರೋಪಿಯನ್ನು 90 ದಿನಗಳ ವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಬಹುದು. ಒಂದು ದಂಡನೀಯ ಅಪರಾಧದ ಸಂದರ್ಭದಲ್ಲಿ ಎಫ್‌ಐಆರ್ ಅನ್ನು ಕೂಡ 15 ದಿನಗಳ ವರೆಗೆ ಪೊಲೀಸ್ ಅಧಿಕಾರಿಯಿಂದ ವಿಚಾರಣೆಯ ನಂತರವೇ ಹಾಕಲಾಗುವುದು.

ಮತ್ತೊಂದು ಅತ್ಯಂತ ಅಪಾಯಕಾರಿ ಅಂಶವೆಂದರೆ ಯುಎಪಿಎ ಅಡಿಯಲ್ಲಿ ಆರೋಪಗಳ ತನಿಖೆಯನ್ನು ಹಿರಿಯ ಪೊಲೀಸ್ ಅಧಿಕಾರಿ ನಡೆಸುತ್ತಾರಾದರೂ, ಹೊಸ ಸೆಕ್ಷನ್ 152 ರ ಅಡಿಯಲ್ಲಿ ಆರೋಪಗಳನ್ನು ಪೊಲೀಸ್ ಠಾಣೆಯಲ್ಲಿ ಒಬ್ಬ ಐ.ಒ. ತನಿಖೆ ಮಾಡುತ್ತಾರೆ. ಯುಎಪಿಎ ಅಡಿಯಲ್ಲಿ, ಸರ್ಕಾರವು ಯಾರನ್ನಾದರೂ ವಿಚಾರಣೆಗೆ ಒಳಪಡಿಸಲು ಮಂಜೂರಾತಿ ನೀಡಬೇಕಾಗಿತ್ತು, ಹೊಸ ನ್ಯಾಯ ಸಂಹಿತೆಯ ಅಡಿಯಲ್ಲಿ, ಒಬ್ಬ ಸಾಮಾನ್ಯ ಪೊಲೀಸ್ ಅಧಿಕಾರಿ ಭಯೋತ್ಪಾದನೆಗಾಗಿ ಯಾರನ್ನಾದರೂ ವಿಚಾರಣೆಗೆ ಒಳಪಡಿಸಬಹುದು.

ಒಬ್ಬ ವ್ಯಕ್ತಿ ಎಸಗಿದ ಕೃತ್ಯ ಆ ಸಮಯದಲ್ಲಿ ಕ್ರಿಮಿನಲ್ ಆಗಿದ್ದ ಹೊರತು ಯಾರನ್ನೂ ಶಿಕ್ಷೆಗೆ ಗುರಿಪಡಿಸುವಂತಿಲ್ಲ' ಎಂಬುದು ಕಾನೂನಿನ ಮೂಲಭೂತ ತತ್ವವಾಗಿದ್ದರೂ, ಜುಲೈ 1 ರ ನಂತರ ಏನಾಗುತ್ತದೆ ಎಂದರೆ ಜುಲೈ 1 ರ ಮೊದಲು ಎಫ್‌ಐಆರ್ ಹಾಕಿದ್ದರೆ ಆ ಸಮಯದಲ್ಲಿ ಜಾರಿಯಲ್ಲಿದ್ದ ಕಾನೂನು ಅನ್ವಯವಾಗುತ್ತದೆ, ಆದರೆ ಜುಲೈ 1 ರ ನಂತರ ದಾಖಲಿಸಲಾದ ಎಫ್‌ಐಆರ್ ಗಳಿಗೆ ಹೊಸ ಅಂಶಗಳಿರುವ ಕಾನೂನು ಅನ್ವಯಿಸುತ್ತದೆ.

ಇದರರ್ಥ ಎರಡೂ ಕಾನೂನುಗಳು ಏಕಕಾಲದಲ್ಲಿ ಇರುತ್ತವೆ ಮತ್ತು ಯಾವ ವ್ಯವಸ್ಥೆಯನ್ನು ಅನ್ವಯಿಸಬೇಕು ಎಂಬುದರ ಕುರಿತು ವಿವಾದಗಳುಂಟಾಗುತ್ತವೆ. ಮೇಲ್ಮನವಿಗಳು ತುಂಬಾ ಸಂಕೀರ್ಣವಾಗುತ್ತವೆ. ಕಾನೂನು ಏನು ಹೇಳುತ್ತದೆ ಎಂಬುದರ ಕುರಿತು ಈ ಹೊಸ ಕಾನೂನುಗಳು ಅನಿಶ್ಚಿತತೆ ಮತ್ತು ಅಸ್ಪಷ್ಟತೆ ಎರಡನ್ನೂ ಉಂಟು ಮಾಡುತ್ತವೆ, ಇದು ಸ್ವೀಕಾರಾರ್ಹವಲ್ಲ. ಇದು ಲಕ್ಷಗಟ್ಟಲೆ ಕ್ರಿಮಿನಲ್ ಪ್ರಕರಣಗಳ ಬೃಹತ್ ಬಾಕಿಯನ್ನು ಹೆಚ್ಚಿಸುತ್ತದೆ.

ಹೀಗೆ ಈ ಕಾನೂನುಗಳ ಬಗ್ಗೆ ಹಲವಾರು ನೈಜ ಆತಂಕಗಳಿದ್ದು, ಹಿಂದಕ್ಕೆಳೆಯುವ ಮತ್ತು ಕರಾಳ ಅಂಶಗಳನ್ನು ಹೊಂದಿರುವುದರಿಂದಾಗಿ, ಅವುಗಳನ್ನು ಸದ್ಯಕ್ಕೆ ಅನುಷ್ಠಾನಗೊಳಿಸಬಾರದು ಎಂದು ಈ ಬಗ್ಗೆ ಗಂಭೀರ ಆತಂಕ ವ್ಯಕ್ತಡಿಸಿರುವ ವಕೀಲರ ಸಂಘಗಳು, ಕಾಳಜಿಯುಳ್ಳ ನಾಗರಿಕರು ಮತ್ತು ನಾಗರಿಕ ಸಮಾಜದ ಸಂಘಟನೆಗಳ ಆಗ್ರಹದೊಂದಿಗೆ ಪಕ್ಷ ದನಿಗೂಡಿಸುವುದಾಗಿ ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಮೂರು ಹೊಸ ಕ್ರಿಮಿನಲ್ ಕಾನೂನುಗಳು ದಬ್ಬಾಳಿಕೆಯನ್ನು ಸಕ್ರಮಗೊಳಿಸಲು...

ಪುಟ 9 ರಿಂದ

ಹೀಗಾಗಿ ಆರೋಪಿಗೆ ನ್ಯಾಯಾಲಯ ಜಾಮೀನು ನೀಡಿದರೂ ಪೊಲೀಸರು ಕಸ್ಟಡಿಗೆ ಪಡೆಯಬಹುದಾಗಿದೆ.

ವಿದ್ಯುನ್ಮಾನ ದಾಖಲೆಗಳು

ವಿದ್ಯುನ್ಮಾನ ದಾಖಲೆಗಳನ್ನು ಎವಿಡೆನ್ಸ್ ಆಕ್ಟ್ ದ್ವಿತೀಯ ಹಂತದ ಸಾಕ್ಷ್ಯ (ಸೆಕಂಡರಿ ಲೆವೆಲ್ ಎವಿಡೆನ್ಸ್) ಆಗಿ ಪರಿಗಣಿಸಿದರೆ, ಅದರ ಸ್ಥಾನದಲ್ಲಿ ಭಾರತೀಯ ಸಾಕ್ಷ್ಯ ಅಧಿನಿಯಮವನ್ನೇ ಪ್ರಾಥಮಿಕ ಹಂತದ ಸಾಕ್ಷ್ಯವಾಗಿ ಪರಿಗಣಿಸುತ್ತದೆ. ಹೀಗಾಗಿ, ಸ್ಮಾರ್ಟ್ ಫೋನ್ ಗಳು, ಲ್ಯಾಪ್ ಟಾಪ್ ಗಳಂತಹ ಸಾಧನಗಳ ಜೊತೆಗೆ, ಸೆಮಿಕಂಡಕ್ಟರ್ ಮೆಮೊರಿಯಲ್ಲಿ ಸಂಗ್ರಹವಾಗಿರುವ ಮಾಹಿತಿಯನ್ನು ಸಹ ಪುರಾವೆಯಾಗಿ ಪರಿಗಣಿಸಲಾಗುತ್ತದೆ. ಇದನ್ನು ಸಾಕ್ಷಿಯಾಗಿ ಪರಿಗಣಿಸಿದರೆ ಹೊಸ ಕಾನೂನಿನಂತೆ ಪೊಲೀಸರು ವಶಪಡಿಸಿಕೊಳ್ಳುವಾಗ ಅಥವಾ ತಪಾಸಣೆಯ ಸಮಯದಲ್ಲಿ, ತಮಗೆ ಬೇಕಾದ ಮಾಹಿತಿಯನ್ನು ಪೋಲೀಸರೇ ಸ್ವತಃ ಹಿಂದಿನಂತೆ "ಫೆಡಾ ಸೆಸ್" ನಂತಹ ಯಾವುದೇ ಸಾಫ್ಟ್ ವೇರ್ ನೊಂದಿಗೆ ಸೇರಿಸುವ ಅಪಾಯಕಾರಿ ಪರಿಸ್ಥಿತಿ. ಈ ಕಾನೂನುಗಳಲ್ಲಿ ಈ ವಿಷಯದಲ್ಲಿ ಯಾವುದೇ ವಿವರಣೆಯಿಲ್ಲ.

ದೇಶದ್ರೋಹ

2022 ರಲ್ಲಿ, ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ರಾಷ್ಟ್ರೀಯ ನಾಯಕರನ್ನು ಜೈಲಿಗಟ್ಟಲು ಬ್ರಿಟಿಷ್ ಸರ್ಕಾರ ಬಳಸಿದ್ದ 'ದೇಶದ್ರೋಹ' ಕಾಯ್ದೆಯ ಅನುಷ್ಠಾನವನ್ನು ಸುಪ್ರೀಂ ಕೋರ್ಟ್ ತಡೆಹಿಡಿಯಿತು. ಸುಪ್ರೀಂ ಕೋರ್ಟ್ 'ದೇಶದ್ರೋಹ'ವನ್ನು ನಿರೂಪಿಸಿದ ಐಪಿಸಿಯ ಸೆಕ್ಷನ್ 124ಎ ಅನ್ನು ಸಾಕಷ್ಟು ಸರಿಯಾಗಿಯೇ ತೆಗೆದು ಹಾಕಿದ್ದರೂ, ಇದನ್ನು ಹೊಸ ಭಾರತೀಯ ನ್ಯಾಯ ಸಂಹಿತೆಯಲ್ಲಿ ಸೆಕ್ಷನ್ 152 ಆಗಿ ಕಳ್ಳತನದಿಂದ ತೂರಲಾಗಿದೆ ಮತ್ತು ಇದರೊಂದಿಗೆ ಭಾರತದ ಸಾರ್ವಭೌಮತೆ ಮತ್ತು ಸಮಗ್ರತೆಯ ಉಲ್ಲೇಖಗಳಿವೆ. ಮೂಲ ಸೆಕ್ಷನ್ 124ಎ ನಲ್ಲಿ ಇವು ಇರಲಿಲ್ಲ. ಇದು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಸ್ಪಷ್ಟ ಉಲ್ಲಂಘನೆಯಾಗಿದ್ದು, ಹೊಸ ಕಾನೂನಿನಿಂದ ಜನರನ್ನು 'ರಾಷ್ಟ್ರ ವಿರೋಧಿ'ಗಳೆಂದು ಆರೋಪಿಸುವುದು ಮತ್ತು ಶಿಕ್ಷೆಗೆ ಗುರಿಪಡಿಸುವುದು ಈಗ ಹೆಚ್ಚು ಸುಲಭವಾಗುತ್ತದೆ. ಸರ್ಕಾರದ ನೀತಿಗಳನ್ನು ಟೀಕಿಸುವ ಜನರ ಹಕ್ಕನ್ನು ಕಸಿದುಕೊಳ್ಳಲು ಈ ಕಾನೂನನ್ನು ಬಳಸಲಾಗಿದೆ ಎಂಬ ಟೀಕೆಗಳು ಬಹಳ ಹಿಂದಿನಿಂದಲೂ ಇವೆ. 'ಯುಎಪಿಎ' ಪ್ರಕರಣದಲ್ಲಿ ಅನ್ಯಾಯವಾಗಿ ಮತ್ತು ಅಕ್ರಮವಾಗಿ ಬಂಧಿಸಲ್ಪಟ್ಟ ನೂರಾರು ಜನರು ಅಪರಾಧ ಸಾಬೀತಾಗದೆ ಶಿಕ್ಷೆ ಅನುಭವಿಸುತ್ತಿದ್ದಾರೆ. ಪ್ರಬೀರ್ ಪುರಕಾಯಸ್ತ, ಸಾಯಿಬಾಬಾ ಸೇರಿದಂತೆ ಬಹಳಷ್ಟು ದಿನ ಬಂಧನದಲ್ಲಿದ್ದ ಅನೇಕರನ್ನು ಅನ್ಯಾಯ ಎಂಬ ಆಧಾರದ ಮೇಲೆ ನ್ಯಾಯಾಲಯಗಳು ಬಿಡುಗಡೆಗೊಳಿಸಿದವು. ಇವೆಲ್ಲವೂ ಹಕ್ಕುಗಳ ದಮನದ ಭಾಗವಾಗಿದೆ.

ರಿಮಾಂಡ್ ಮಾಡಲು ಅಧಿಕಾರ

ಹಳೆಯ ಕಾನೂನಿನಲ್ಲಿ, ಕ್ರಿಮಿನಲ್ ಪ್ರಕರಣದಲ್ಲಿ ಪೊಲೀಸರು ಬಂಧಿಸಿದ ವ್ಯಕ್ತಿಯನ್ನು ರಿಮಾಂಡ್ ಮಾಡಲು ನ್ಯಾಯಾಂಗ ಮ್ಯಾಜಿಸ್ಟ್ರೇಟ್‌ಗೆ ಮಾತ್ರ ಅಧಿಕಾರವಿತ್ತು. ಆದರೆ ಪ್ರಸ್ತುತ ಹೊಸ ಕಾಯಿದೆಯ (BNSS) ಸೆಕ್ಷನ್ 187 ರ ಪ್ರಕಾರ ಆಡಳಿತಾತ್ಮಕ ಮ್ಯಾಜಿಸ್ಟ್ರೇಟ್ (ತಹಶೀಲ್ದಾರ್) ಬಂಧಿತ ವ್ಯಕ್ತಿಯನ್ನು ರಿಮಾಂಡ್ ಮಾಡಲು ಅಧಿಕಾರವನ್ನು ಸಹ ಹೊಂದಿದೆ. ನ್ಯಾಯಾಂಗದ ಕೆಲಸವನ್ನು ಸರ್ಕಾರದ ಕಾರ್ಯಾಂಗ ಶಾಖೆಗೆ ವರ್ಗಾಯಿಸಲಾಗಿದೆ. ಒಬ್ಬ ವ್ಯಕ್ತಿಯನ್ನು ಅಕ್ರಮವಾಗಿ ಬಂಧಿಸಲು ಸರ್ಕಾರ ಅಥವಾ ಪೊಲೀಸ್ ಅಥವಾ ಇತರ ಯಾವುದೇ ಇಲಾಖೆಯು ಈ ಸೆಕ್ಷನ್ ಅನ್ನು ದುರುಪಯೋಗಪಡಿಸಿಕೊಳ್ಳುವ ಅಪಾಯವಿದೆ. ಅಕ್ರಮ ಬಂಧನವನ್ನು ಕಾನೂನು ಪಾಲನೆಯಾಗಿ ಪರಿವರ್ತಿಸಲಾಗುವುದು. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಮೆಟ್ರೋಪಾಲಿಟನ್ ನ್ಯಾಯಾಲಯಗಳು ಮತ್ತು ಜಿಲ್ಲಾ ಸಹಾಯಕ ಸೆಷನ್ಸ್ ನ್ಯಾಯಾಲಯಗಳನ್ನು ಹೊಸ ಕಾಯ್ದೆಯಲ್ಲಿ ರದ್ದುಪಡಿಸಲಾಗಿದೆ. ಇದು ನ್ಯಾಯಾಲಯಗಳ ಅಧಿಕಾರ ಮತ್ತು ಘನತೆಗೆ ಧಕ್ಕೆ ತರುತ್ತದೆ.

ಜನರ ಚಳುವಳಿಗಳನ್ನು ಹತ್ತಿಕ್ಕಲು

ಹೊಸ ದಂಡ ಸಂಹಿತೆಯಲ್ಲಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯುವ ಧರಣಿ, ಪಿಕೆಟಿಂಗ್ ಮತ್ತು ಪ್ರತಿಭಟನೆಗಳ ಸಂದರ್ಭದಲ್ಲಿ ಪೊಲೀಸರೊಂದಿಗೆ ತಳ್ಳಾಟ ನಡೆಸುವುದನ್ನು ಎರಡು ವರ್ಷಗಳವರೆಗೆ ಜೈಲು ಶಿಕ್ಷೆಯನ್ನು ಒದಗಿಸುತ್ತದೆ. ಇಂತಹ ವಿವಿಧ ಕಾನೂನುಗಳು ಮಾನವ ಹಕ್ಕುಗಳು, ಪ್ರಜಾಪ್ರಭುತ್ವ ಹಕ್ಕುಗಳ ವಿರುದ್ಧ ಮತ್ತು ಆಳುವ ವರ್ಗದ ದಬ್ಬಾಳಿಕೆಯನ್ನು ಬೆಂಬಲಿಸುತ್ತವೆ. ಹೊಸ ಕಾಯಿದೆಯ ಸೆಕ್ಷನ್ 172 ಪೊಲೀಸ್ ಅಧಿಕಾರಿಯ ನಿರ್ದೇಶನವನ್ನು ಉಲ್ಲಂಘಿಸುವ ಯಾರನ್ನಾದರೂ ಬಂಧಿಸಲು, ಜೈಲಿನಲ್ಲಿಡಲು ಮತ್ತು ಹೊರಹಾಕಲು ಅನಿಯಮಿತ ಅಧಿಕಾರವನ್ನು ನೀಡುತ್ತದೆ. ಇದು ಪೊಲೀಸರ ದಬ್ಬಾಳಿಕೆ ಸ್ಥಿತಿಗೆ ದಾರಿ ಮಾಡಿಕೊಟ್ಟಿದೆ. ಈ ಮೂರೂ ಕಾನೂನುಗಳು ಅಸಂವಿಧಾನಿಕವಾಗಿವೆ.

ರಾಜ್ಯ ಸರ್ಕಾರದ ಹಕ್ಕುಗಳ ಕಸಿತ

ನ್ಯಾಯಾಲಯದಿಂದ ಜೈಲು ಶಿಕ್ಷೆಗೆ ಒಳಗಾದ ಕೈದಿಯ ಉತ್ತಮ ನಡವಳಿಕೆಯನ್ನು ಪರಿಗಣಿಸಿ ರಾಜ್ಯ ಸರ್ಕಾರಗಳು ಕ್ಷಮಾದಾನ ನೀಡಲು ಮತ್ತು ಶಿಕ್ಷೆಯನ್ನು ಕಡಿಮೆ ಮಾಡಲು ಹೊಸ ಕಾನೂನು ಅನುಮತಿಸುವುದಿಲ್ಲ. ಹೊಸ ಕಾಯಿದೆ 478ರ ಪ್ರಕಾರ ರಾಜ್ಯ ಸರ್ಕಾರದ ಅಧಿಕಾರವನ್ನು ಕಸಿದುಕೊಳ್ಳಲಾಗಿದ್ದು, ಕೇಂದ್ರ ಸರ್ಕಾರದ ಅನುಮತಿ ಪಡೆದು ಕೈದಿಗಳಿಗೆ ರಾಜ್ಯ ಸರ್ಕಾರ ಶಿಕ್ಷೆ ಕಡಿತಗೊಳಿಸಬೇಕು ಎಂದು ಹೇಳಿದೆ. ಇದು ರಾಜ್ಯ ಸರ್ಕಾರದ ಹಕ್ಕನ್ನು ಕಸಿದುಕೊಳ್ಳುತ್ತದೆ ಮತ್ತು ಫೆಡರಲ್ ತತ್ವಕ್ಕೆ ವಿರುದ್ಧವಾಗಿದೆ.

ಕಾನೂನುಬಾಹಿರ ವಿಭಾಗಗಳು

ಸರ್ಕಾರದ ವಿರುದ್ಧದ ಪಿತೂರಿಯ ಇಂಗ್ಲಿಷ್ ಯುಗದ ಸೆಕ್ಷನ್ (124–A IPC) ಅನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತು. ಆದರೆ ಹೊಸ ದಂಡ ಸಂಹಿತೆಯಲ್ಲಿ ಸೆಕ್ಷನ್ 150 ಎಂದು ಹೆಚ್ಚು ಹೇಯವಾದ ವಿಭಾಗವನ್ನು ಸೇರಿಸಲಾಗಿದೆ. ವಸಾಹತುಶಾಹಿ ಕಾನೂನನ್ನು ರದ್ದುಪಡಿಸುವುದಾಗಿ ಹೇಳುತ್ತಲೇ ಮೋದಿ ಸರಕಾರ ಇನ್ನಷ್ಟು ಕ್ರೂರ ಜನವಿರೋಧಿ ಕಾನೂನನ್ನು ತಂದಿದೆ. ಯಾವುದೇ ವ್ಯಕ್ತಿಯನ್ನು ಬಂಧಿಸಲು, ಜೈಲಿನಲ್ಲಿಡಲು ಅಥವಾ ಗಡಿಪಾರು ಮಾಡಲು ಪೊಲೀಸ್ ಅಧಿಕಾರಿಗೆ ಅಧಿಕಾರವಿದೆ.

ಧಾರ್ಮಿಕ ಮತಾಂಧರ ಪರವಾಗಿ...

ಆಯುಧಗಳೊಂದಿಗೆ ಅಭ್ಯಾಸ ಮಾಡುವುದು ಮತ್ತು ಮೆರವಣಿಗೆ ಮಾಡುವುದು ಹಳೆಯ ಕಾಯಿದೆ (144A CrPC) ಮೂಲಕ ನಿಷೇಧಿಸಲಾಗಿದೆ. ಈಗ ಹೊಸ ಕಾನೂನಿನಲ್ಲಿ ಆ ವಿಭಾಗವನ್ನು ಅಳಿಸಲಾಗಿದೆ. ಮತೀಯ ಶಕ್ತಿಗಳ ಪರವಾಗಿ ಈ ವಿಭಾಗವನ್ನು ತೆಗೆದುಹಾಕಲಾಗಿದೆ. ಹೊಸ BNSS ಸೆಕ್ಷನ್ 349 ರ ಅಡಿಯಲ್ಲಿ, ಪ್ರಕರಣದಲ್ಲಿ ಬಂಧಿಸದ ಯಾರಿಂದಲೂ ಸಹಿ, ಬೆರಳಚ್ಚು ಮತ್ತು ಧ್ವನಿ ಮಾದರಿಗಳನ್ನು ಕಡ್ಡಾಯವಾಗಿ ಪಡೆಯಬಹುದು. ಇದು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಪೂರ್ಣ ವಿರುದ್ಧವಾಗಿದೆ.

ತಪ್ಪುಗಳು ಹೆಚ್ಚಾಗುತ್ತವೆ

ಹೊಸ ಕಾನೂನು ಡಿಜಿಟಲ್ ರೂಪದಲ್ಲಿ ಸಲ್ಲಿಸಿದ ದಾಖಲೆಗಳನ್ನು ಅವುಗಳ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ಸಾಕ್ಷ್ಯವಾಗಿ ಒಪ್ಪಿಕೊಳ್ಳಲು ಅನುಮತಿಸುತ್ತದೆ. ಇದು ಕ್ರಿಮಿನಲ್ ಮತ್ತು ಸಿವಿಲ್ ವಿಚಾರಣೆಗಳಲ್ಲಿ ವಿವಿಧ ದುಷ್ಕೃತ್ಯಗಳಿಗೆ ಕಾರಣವಾಗುತ್ತದೆ. ಹೊಸ ಕಾನೂನು ಪ್ರಕರಣಗಳ ವಿಚಾರಣೆಯಲ್ಲಿ ಹೊಸ ತಂತ್ರಜ್ಞಾನವನ್ನು ಬಳಸಲು ಅನುಮತಿಸುತ್ತದೆ. ಸಾಕಷ್ಟು ಮಾರ್ಗಸೂಚಿಗಳು, ರಚನೆ ಮತ್ತು ತರಬೇತಿ ಇಲ್ಲದೆ ಬಳಸಿದಾಗ ಸರಿಯಾದ ನ್ಯಾಯವನ್ನು ಮಾಡಲಾಗುವುದಿಲ್ಲ. ಪೊಲೀಸರು, ವಕೀಲರು ಮತ್ತು ನ್ಯಾಯಾಧೀಶರಿಗೆ ಸಾಕಷ್ಟು ತರಬೇತಿ ನೀಡದೆ ಹೊಸ ಕಾನೂನುಗಳನ್ನು ಜಾರಿಗೊಳಿಸುವುದರಿಂದ ಪ್ರಕರಣದ ವಿಚಾರಣೆ ವಿಳಂಬವಾಗುತ್ತದೆ ಮತ್ತು ನ್ಯಾಯಾಂಗ ವ್ಯವಸ್ಥೆಗೆ ಹಾನಿಯಾಗುತ್ತದೆ. ಪ್ರಕರಣದ ತನಿಖೆಯ ಮೇಲೆ ಪರಿಣಾಮ ಬೀರಲಿದ್ದು, ನ್ಯಾಯಾಲಯದಲ್ಲಿ ಪ್ರಕರಣಗಳು ಸ್ಥಗಿತಗೊಳ್ಳಲಿವೆ. ಪ್ರಕರಣದ ತನಿಖೆ ವೇಳೆ ಹೊಸ ಕಾನೂನು, ಹಳೆ ಕಾನೂನಿನ ಬಗ್ಗೆ ಗೊಂದಲ ಉಂಟಾಗಿ ಪ್ರಕರಣದ ತನಿಖೆಯ ಮೇಲೆ ಪರಿಣಾಮ ಬೀರಿ ಜನರಿಗೆ ಪರಿಹಾರ ಸಿಗುವಲ್ಲಿ ವಿಳಂಬವಾಗುತ್ತದೆ. ಈ ಕಾನೂನುಗಳು ಜನರಿಗೆ ಉಪಯೋಗವಾಗುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನ್ಯಾಯದಾನ ವಿಳಂಬವಾಗುವ ಮತ್ತು ನರಳುವ ಪರಿಸ್ಥಿತಿಯನ್ನು ಕೇಂದ್ರ ಸರ್ಕಾರ ನಿರ್ಮಿಸುತ್ತಿದೆ.

ಹೀಗೆ ಈ ಕಾನೂನುಗಳ ಬಗ್ಗೆ ಹಲವಾರು ನೈಜ ಆತಂಕಗಳಿದ್ದು, ಹಿಂದಕ್ಕೆಳೆಯುವ ಮತ್ತು ಕರಾಳ ಅಂಶಗಳನ್ನು ಹೊಂದಿರುವುದರಿಂದಾಗಿ, ಅವುಗಳನ್ನು ಸದ್ಯಕ್ಕೆ ಅನುಷ್ಠಾನಗೊಳಿಸಬಾರದು ಎಂದು ಈ ಬಗ್ಗೆ ಗಂಭೀರ ಆತಂಕ ವ್ಯಕ್ತಡಿಸಿರುವ ವಕೀಲರ ಸಂಘಗಳು, ಕಾಳಜಿಯುಳ್ಳ ನಾಗರಿಕರು ಮತ್ತು ನಾಗರಿಕ ಸಮಾಜದ ಸಂಘಟನೆಗಳ ಆಗ್ರಹದೊಂದಿಗೆ ನಾವೆಲ್ಲರೂ ಕೈಜೋಡಿಸಬೇಕಾಗಿದೆ.

ಜೂಲಿಯನ್ ಅಸ್ಸಾಂಜೆ ಬಿಡುಗಡೆ: ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಜಯ........

ಪುಟ 8 ರಿಂದ

ನಡುವಿನ ಒಪ್ಪಂದದ ಆಧಾರದ ಮೇಲೆ ಬಿಡುಗಡೆಯ ಪರಿಸ್ಥಿತಿಯನ್ನು ರೂಪಿಸಲಾಯಿತು.

ಈ ಸುದೀರ್ಘ ಶಿಕ್ಷೆ ಮತ್ತು ಏಕಾಂತ ಬಂಧನವು ಅವರ ಆರೋಗ್ಯವನ್ನು ಗಂಭೀರವಾಗಿ ಹಾನಿಗೊಳಿಸಿತು. ಅವರ ಹೃದಯಕ್ಕೂ ತೊಂದರೆ ಇದೆ ಎನ್ನಲಾಗಿದೆ. ಈ ಸಂದರ್ಭಗಳಲ್ಲಿ, ಅವರು ಅಪರಾಧವನ್ನು ಒಪ್ಪಿಕೊಂಡರೆ ಅವರನ್ನು ಬಿಡುಗಡೆ ಮಾಡಲಾಗುವುದು ಎಂದು ಅಮೆರಿಕ ಷರತ್ತು ವಿಧಿಸಿತು. ಅನಿವಾರ್ಯ ಸಂದರ್ಭಗಳಲ್ಲಿ ಅಸಾಂಜೆ ಅದನ್ನು ಒಪ್ಪಿಕೊಂಡರು ಮತ್ತು ಸೈಪಾನ್ ದ್ವೀಪದ ನ್ಯಾಯಾಲಯದ ಮುಂದೆ ಹಾಜರಾಗಿ ಅಪರಾಧವನ್ನು ಒಪ್ಪಿಕೊಂಡರು. ಅಮೆರಿಕ ಆರೋಪಗಳನ್ನು ಪರಿಗಣನೆಗೆ ತೆಗೆದುಕೊಂಡರೆ ಅಸ್ಸಾಂಜೆಗೆ 175 ವರ್ಷಗಳ ಶಿಕ್ಷೆಯಾಗುತ್ತಿತ್ತು. ಒಪ್ಪಂದದ ಭಾಗವಾಗಿ, ಅಮೆರಿಕ ಅಸ್ಸಾಂಜೆ ಅವರಿಗೆ ಐದು ವರ್ಷಗಳ ಶಿಕ್ಷೆ ವಿಧಿಸಲಾಗುವುದು ಮತ್ತು ಬ್ರಿಟನ್ನಿನಲ್ಲಿ ಸೇವೆ ಸಲ್ಲಿಸಿದ ಸಮಯವನ್ನು ಗಣನೆಗೆ ತೆಗೆದುಕೊಂಡು ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂಬುದು ಒಪ್ಪಂದದ ಸಾರಾಂಶವಾಗಿದೆ. ಈ ಪ್ರಕ್ರಿಯೆ ಮುಗಿದ ಬಳಿಕ ಅವರು ತಮ್ಮ ಸ್ವಂತ ದೇಶ ಆಸ್ಟ್ರೇಲಿಯಾಕ್ಕೆ ತೆರಳಿದ್ದಾರೆ.

'ಫೈವ್ ಐಸ್' ಗುಪ್ತಚರ ವ್ಯವಸ್ಥೆ

ಅಮೆರಿಕದ ರಾಷ್ಟ್ರೀಯ ಭದ್ರತಾ ಏಜೆನ್ಸಿ ತನ್ನದೇ ಪ್ರಜೆಗಳು ಮತ್ತು ವಿಶ್ವ ನಾಯಕರ ಮೇಲೆ ಹೇಗೆ ಬೇಹುಗಾರಿಕೆ ನಡೆಸುತ್ತಿದೆ ಎಂಬುದನ್ನು ಸ್ನೋಡೆನ್ ಎಂಬುವರು ಬಹಿರಂಗಪಡಿಸಿದರು. ಅಮೇರಿಕಾ, ಕೆನಡಾ, ಬ್ರಿಟನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಈ ಐದು ದೇಶಗಳು ಜಂಟಿಯಾಗಿ ಆಸ್ಟ್ರೇಲಿಯಾದಲ್ಲಿ ಅತಿದೊಡ್ಡ ಅತ್ಯಾಧುನಿಕ ಗೂಢಚಾರಿಕೆ ವ್ಯವಸ್ಥೆಯನ್ನು ರಚಿಸಿವೆ. 'ಫೈವ್ ಐಸ್' (ಐದು ಕಣ್ಣುಗಳು) ಎಂಬ ಈ ವ್ಯವಸ್ಥೆಯು ಪ್ರಪಂಚದ ಎಲ್ಲಾ ದೇಶಗಳ ಮೇಲೆ ಕಣ್ಣಿಡುವ ಶಕ್ತಿಯನ್ನು ಹೊಂದಿದೆ. ಉದಾಹರಣೆಗೆ, ಚೀನಾದ ಅಧ್ಯಕ್ಷ ಕ್ಸಿ ಜಿನ್ಪಿಂಗ್ ಅಥವಾ ರಷ್ಯಾದ ಪುಟಿನ್ ಯಾವಾಗ ಮನೆಯಿಂದ ಹೊರಹೋಗುತ್ತಾರೆ ಎಂಬುದು ಅವರಿಗೆ ನಿಖರವಾಗಿ ತಿಳಿದಿರುವ ಮಟ್ಟಿಗೆ ಆಧುನಿಕ ಸಾಧನಗಳನ್ನು ಅಭಿವೃದ್ಧಿಪಡಿಸಲಾಗಿದೆ. 'ಫೈವ್ ಐಸ್' ಗುಪ್ತಚರ ವ್ಯವಸ್ಥೆಯು ಭಾರತ ಸೇರಿದಂತೆ ಎಲ್ಲಾ ರಾಷ್ಟ್ರಗಳ ಎಲ್ಲಾ ಮಿಲಿಟರಿ ಚಲನೆಗಳು, ಜಲಾಂತರ್ಗಾಮಿ ಚಲನವಲನಗಳನ್ನು ಪತ್ತೆಹಚ್ಚುತ್ತದೆ. ಇದನ್ನು ಹೊರ ಜಗತ್ತಿಗೆ ತೆರೆದಿಟ್ಟವರು ಸ್ನೋಡೆನ್. ಅಮೆರಿಕ ಸ್ನೋಡೆನ್ ಅವರನ್ನು ಬಂಧಿಸಲು ಯತ್ನಿಸಿದಾಗ ಅವರು ರಷ್ಯಾದಲ್ಲಿ ಆಶ್ರಯ ಪಡೆದರು. ಅವರು ಅಲ್ಲಿ ಸುರಕ್ಷಿತವಾಗಿದ್ದಾರೆ.

ಅಭಿವ್ಯಕ್ತಿ ಸ್ವಾತಂತ್ರ್ಯದ ಕಾವಲುಗಾರ ಎಂದು ಹೇಳಿಕೊಳ್ಳುವ ಯುನೈಟೆಡ್ ಸ್ಟೇಟ್ಸ್ ವಾಸ್ತವವಾಗಿ ಆ ಸ್ವಾತಂತ್ರ್ಯಕ್ಕೆ ಮಿತಿಗಳನ್ನು ಹಾಕಿದೆ. ದೇಶೀಯ ಅಥವಾ ವಿದೇಶಿ ಹಿತಾಸಕ್ತಿಗಳಿಗೆ ಧಕ್ಕೆಯಾಗದಿರುವವರೆಗೆ ಇದು ಪ್ರಜಾಪ್ರಭುತ್ವವಾಗಿದೆ. ಆ ಮಿತಿಯನ್ನು ಉಲ್ಲಂಘಿಸಿದರೆ, ಯುನೈಟೆಡ್ ಸ್ಟೇಟ್ಸ್ ತಾನು ಹಾಕಿದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ತತ್ವಗಳನ್ನು ತುಳಿಯಲು ಹಿಂಜರಿಯುವುದಿಲ್ಲ.

ಪ್ರತಿಯೊಬ್ಬ ಪತ್ರಕರ್ತ ಅಸ್ಸಾಂಜೆ ಆಗಬೇಕಾಗಿದೆ

ಅಸ್ಸಾಂಜೆ ಅವರ ಪತ್ನಿ ಸ್ಟೆಲ್ಲಾ ಅವರು ಮಾಹಿತಿ ಸ್ವಾತಂತ್ರ್ಯದ ಹಕ್ಕಿನಡಿಯಲ್ಲಿ ಅಮೆರಿಕದಿಂದ ತನ್ನ ಪತಿಯ ಪ್ರಕರಣದ ವಿವರಗಳನ್ನು ಪಡೆದು ಜಗತ್ತಿಗೆ ಬಹಿರಂಗಪಡಿಸುವಂತೆ ಎಲ್ಲಾ ಪತ್ರಕರ್ತರಲ್ಲಿ ಮನವಿ ಮಾಡಿದ್ದಾರೆ. ಕೇಸು ನಡೆಯುವವರೆಗೂ ಗಂಡನ ಬೆಂಬಲಕ್ಕೆ ನಿಂತ ಅಕೆಯ ಧೈರ್ಯವನ್ನು ಅಭಿನಂದಿಸಲೇಬೇಕು. ಪತಿ ತಪ್ಪೊಪ್ಪಿಕೊಂಡರೆ ಅವರು ಪತ್ರಿಕೋದ್ಯಮಕ್ಕೆ ಬದ್ಧರಾಗಿದ್ದಾರೆ ಎಂದರ್ಥ. ಈ ಪ್ರಕರಣದಲ್ಲಿ ಪತ್ರಿಕೋದ್ಯಮವನ್ನು ಅಪರಾಧವೆಂದು ಪರಿಗಣಿಸಿ, ಸುದ್ದಿ ಸಂಗ್ರಹಣೆ ಮತ್ತು ಪ್ರಕಟಣೆಯನ್ನು ಅಪರಾಧೀಕರಿಸಲಾಗಿದೆ ಎಂಬ ಸತ್ಯವನ್ನು ಮನಗಂಡು ಪ್ರಕರಣದ ಸತ್ಯಾಸತ್ಯತೆಗಳನ್ನು ಬಹಿರಂಗಪಡಿಸುವಂತೆ ಅವರು ನ್ಯಾಯಾಲಯಕ್ಕೆ ಮನವಿ ಮಾಡಿದರು. ತನಿಖಾ ಪತ್ರಿಕೋದ್ಯಮವು ಅಸ್ಸಾಂಜೆ ಪ್ರಕರಣದೊಂದಿಗೆ ಕೊನೆಗೊಳ್ಳುವುದಿಲ್ಲ ಅಥವಾ ಆಡಳಿತಗಾರರ ದುಷ್ಕೃತ್ಯಗಳನ್ನು ಪ್ರಾಮಾಣಿಕವಾಗಿ ಬಹಿರಂಗಪಡಿಸಲು ಬಯಸುವ ಪತ್ರಕರ್ತರನ್ನು ಬೇಟೆಯಾಡುವುದನ್ನು ಅವರು ನಿಲ್ಲಿಸುವುದಿಲ್ಲ. ಅದು ದೇಶದ್ರೋಹವಲ್ಲ, ಜನರ ಪರವಾಗಿದೆ. ಇರಾನ್, ಇರಾಕ್ ಮತ್ತು ಅಫ್ಘಾನಿಸ್ತಾನದಲ್ಲಿ ಅಮೆರಿಕದ ದೌರ್ಜನ್ಯವನ್ನು ವಿಕಿಲೀಕ್ಸ್ ಬಹಿರಂಗಪಡಿಸಿದೆ. ಮುಂದೆ ಏನಾಯಿತು ಎಂಬುದನ್ನು ಬಹಿರಂಗಪಡಿಸಲು ಪ್ರತಿಯೊಬ್ಬ ಪತ್ರಕರ್ತ ಅಸ್ಸಾಂಜೆ ಆಗಬೇಕಾಗಿದೆ.

(ಕೃಪೆ:ತೀಕದಿರ್, ಪ್ರಜಾಶಕ್ತಿ)

'ನಾಳಿನ ಕಾಮ್ರೇಡ್'ಗಳು



ರಂಗನಾಯಕಮ್ಮ ನವರು ಒಬ್ಬ ತೆಲುಗು ಭಾಷೆಯ ಮಾರ್ಕ್ಸ್‌ವಾದಿ ಲೇಖಕರು ಮತ್ತು ವಿಮರ್ಶಕರು. ಅವರು ಕಮ್ಯುನಿಸಂ ಮತ್ತು ಸ್ತ್ರೀವಾದದ ಪ್ರಮುಖ ಪ್ರತಿಪಾದಕರಾಗಿದ್ದಾರೆ. ಆಡುಮಾತಿಗೆ ಹತ್ತಿರವಾದ ಭಾಷೆಯನ್ನು ಬಳಸಿ ಲೇಖನಗಳನ್ನು ಬರೆದಿದ್ದಾರೆ. ಅವರು 1973 ರಲ್ಲಿ ಮಾರ್ಕ್ಸ್ವಾದದ ಸಂಪರ್ಕಕ್ಕೆ ಬಂದ ನಂತರ, ಅಂದಿನಿಂದ ಆ ದೃಷ್ಟಿಕೋನದಿಂದ ಬರೆಯಲು ಪ್ರಾರಂಭಿಸಿದರು. ರಂಗನಾಯಕಮ್ಮ ಅವರು ಬರೆದಿರುವ, ನವ ತೆಲಂಗಾಣ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ 'ನಾಳಿನ ಕಾಮ್ರೇಡ್,ಗಳು ಎಂಬ ಲೇಖನ ಇಲ್ಲಿದೆ. ಸರಕಿನ ದರ ಮತ್ತು ಲಾಭದ ಕುರಿತು ಈ ಲೇಖನದಲ್ಲಿ ಸರಳವಾಗಿ ವಿವರಿಸಿದ್ದಾರೆ. ಇದು ನಾಲ್ಕು ಭಾಗಗಳಾಗಿ ನಾಲ್ಕು ಸಂಚಿಕೆಗಳಲ್ಲಿ ಪ್ರಕಟವಾಗಲಿದೆ. ಕನ್ನಡಕ್ಕೆ ಸಿಚಿ ಅನುವಾದಿಸಿದ್ದಾರೆ

ಭಾಗ–1

ಉನ್ನತ ಪದವಿ ಓದಿದ ಸ್ನೇಹಿತರಿಬ್ಬರ ನಡುವಿನ ಸಂಭಾಷಣೆ ಇದು!

"ಏನು ಗೋಪಾಲ್, ನೀನು ಹಾಕೊಂಡಿರೋ ಅಂಗಿ ಹೊಸದರಂತೆ ಇದೆಯಲ್ಲಾ! ಯಾವಾಗ್ಲೂ ಇಲ್ಲದ್ದು ಈಗ ನಿನ್ನ ಮೈಮೇಲೆ! ಕೊಂಡ್ಕೊಂಡಾ? ಬೆಲೆ ಎಷ್ಟೋ? ಕಮ್ಮಿ ಬೆಲೆಗೆ ಸಿಕ್ತಾ? ಯಾವಾಗ?" ಎನ್ನುತ್ತಾ ರವಿ ಮಾತಿಗಿಳಿಯುತ್ತಾನೆ.

ಗೋಪಾಲ: ಏನಯ್ಯಾ ಈ ರೀತಿ ಕೇಳ್ತೀಯಾ! ಓದಿದ್ದೆಲ್ಲವನ್ನೂ ಯಾವ ಪೆಟ್ಟಿಗೆಯಲ್ಲಿ ಹಾಕ್ತೀಯಾ?

ರವಿ: ಏನು ಗೋಪಾಲ್, ಮತ್ತೇನು ನಿಂದು? ನಾನು ಏನಂದೆ ಈಗ? ನಿನ್ನ ಅಂಗಿ ಹೊಸದರಂತೆ ಇದೆ, ಅಗ್ಗವಾಗಿ ಸಿಕ್ತಾ– ಅಂದೆ, ಅಷ್ಟೆ ತಾನೆ? ಪುಸ್ತಕಗಳನ್ನು ಓದಿದ ಮಾತ್ರಕ್ಕೆ, ನಿನಗೆ ಅಂಗಿ ಕಡಿಮೆ ದರದಲ್ಲಿ ಸಿಕ್ಕಿದೆಯೋ ಇಲ್ಲವೋ ಅಂತ ಗೊತ್ತಾಗುತ್ತಾ?

ಗೋಪಾಲ್ ಮುಗುಳ್ನಕ್ಕು ಹೇಳಿದ: ನಿನಗೆ ಗೊತ್ತಿಲ್ವಾ? ಹತ್ತಾರು ಸಲ ಹೇಳಿದರೆ, 'ಕ್ಷಮಿಸು! ಕ್ಷಮಿಸು!' ಎನ್ನುತ್ತಾ ಜಯನಗರ ಲೈಬ್ರರಿಗೆ ಹೋದರೆ ಅಲ್ಲಿ ಸಿಗೋದಿಲ್ಲ ಅಂತ, ಕ್ರಿಯಾ ಪುಸ್ತಕದ ಅಂಗಡಿಗೆ ಹೋಗಿ, 'ಕ್ಯಾಪಿಟಲ್' ಖರೀದಿಸಿ, ಬಸ್ಸಿನಲ್ಲೇ ಓದುವುದನ್ನು ಶುರುಮಾಡ್ತೇನೆ ಅಂತೀಯ! ಮತ್ತೆ, ಏಷ್ಟು ಕಲಿತಿದ್ದೀಯಾ? 'ಸರಕಿನ ಬೆಲೆ' ಹಗ್ಗವಾಗಿದ್ದರೆ ಅದರ ಮೌಲ್ಯ ಅಷ್ಟೇನೆ ಎಂದು ಅರ್ಥ ಆಗಲಿಲ್ವಾ?

ರವಿ: ಅಯ್ಯ ಬಾಬು! ಆ ಪುಸ್ತಕ ಎಷ್ಟು ಪುಟಗಳದು ಗೊತ್ತಾ? ನಾಲ್ಕೋ ಐದೋ ನೂರು ಪುಟಗಳನ್ನು ದಾಟಿ ಹೋಗುತ್ತದೆ. ನಾನು ಓದಲು ಪ್ರಾರಂಭಿಸಿದ್ದು ಯಾವಾಗ? ಇನ್ನೂ ಒಂದು ವಾರ ಕೂಡಾ ಆಗಲಿಲ್ಲ. ಇಷ್ಟರಲ್ಲೇ ಅವೆಲ್ಲವೂ ಎಲ್ಲಿ ಕಾಣುತ್ತವೆ ಹೇಳು? ನಿಜ ಹೇಳು. ಆ ಪುಸ್ತಕದಲ್ಲಿ ಅಂತಹ ವಿಷಯಗಳೂ ಕೂಡಾ ಇವೆಯಾ? ಇದ್ದರೆ ನಾನಿನ್ನೂ ಓದಿಲ್ಲವೇ? ಆದರೆ, ಆ ಪುಸ್ತಕದಲ್ಲಿ ಆರಂಭದಲ್ಲಿ ಒಂದು ಪದ ಸಿಕ್ಕಿದೆ. ಆ ಮಾರ್ಕ್ಸ್ 'ಹಣ'ವನ್ನು, 'ಜನರಲ್ ಈಕ್ವಿವಲೆಂಟ್'' (General Equivalent– ಸಾಮಾನ್ಯ ಸಮಾನ) ಎಂದಿದ್ದಾರೆ. ಅದು ಮೊದಲಿಗೆ ಅರ್ಥವಾಗಲಿಲ್ಲ. ಆದರೆ, ನಿಜವಾಗಿಯೂ ಅಷ್ಟೇನಾ? ಸಮಾಜದಲ್ಲಿ, ಯಾವುದೇ ವಸ್ತುವನ್ನು ಮಾರುವುದಾಗಲಿ, ಕೊಳ್ಳುವುದಾಗಲಿ, ಅದು 'ಹಣ'ಕ್ಕೆ ಬದಲಾಯಿಸಿಕೊಳ್ಳಬೇಕೆ? ಒಂದು ವಸ್ತುವನ್ನು ಕೊಟ್ಟು, ಇನ್ನೊಂದು ವಸ್ತುವನ್ನು ತೆಗೆದುಕೊಳ್ಳುವ ಪದ್ಧತಿ ಯಾವಾಗ ಹೋಗಿದೆ? ನನ್ನ ಅಜ್ಜಿಯ ತಲೆಮಾರು ಇನ್ನೂ ಆಶ್ಚರ್ಯಕರವಾಗಿದೆ! ಅವರ ಚಿಕ್ಕ ವಯಸ್ಸಿನಲ್ಲಿ, ಕರಿಬೇವು ಸೊಪ್ಪು ಕೊಟ್ಟರೆ, ಅದಕ್ಕೆ ಬದಲಾಗಿ ಬದನೆಕಾಯಿ ಕೊಡುತಿದ್ದರಂತೆ! ಸ್ವಲ್ಪ ಹಾಲು ಕೊಟ್ಟರೆ, ಬುಟ್ಟಿ ತುಂಬಾ ಗೊಂಗುರ ಸೊಪ್ಪು ಕೊಡುತ್ತಿದ್ದರಂತೆ! ಜೊಗಸೆ ಅಕ್ಕಿ ಕೊಟ್ರೆ, ಬುಟ್ಟಿ ತುಂಬಾ ಗೆಣಸು ಕೊಡ್ತಿದ್ರಂತೆ! ಈಗ?

ಗೋಪಾಲ: "ಈಗ!?" ಅಂತ ಆಶ್ಚರ್ಯಪಡುತ್ತಾ ನಿಮ್ಮ ಅಜ್ಜಿ? ಆದರೆ, ಅಜ್ಜಿ ಕೂಡಾ ನೀನು ಓದುವ ಆ ಪುಸ್ತಕವನ್ನೇ ಓದಿದರೆ ತಿಳಿಯುತ್ತೆ. ಒಂದು ವಸ್ತುವನ್ನು ಕೊಟ್ಟು, ಮತ್ತೊಂದು ವಸ್ತುವನ್ನು ಪಡೆದರೆ ವಿನಿಮಯ. ಆದರೂ, ವಸ್ತುವಿಗೆ ಮತ್ತು ಹಣಕ್ಕೆ ನಡೆಯುವ ವಿನಿಮಯವಾದರೆ ಅದರಲ್ಲಿ ಏನು ವ್ಯತ್ಯಾಸವಿದೆ? ಅದು ಮತ್ತೊಂದು ಕಡೆ ಹೋಗಿದೆಯಾ? ಹಣದ ಹಿಂದೆ ಇರೋದು ಏನು, ಅದು ಕೂಡಾ ಒಂದು ವಸ್ತುವೇ ಎಂದು.

ರವಿ: ಅಂ, ಅಂ, ಗೊತ್ತಾಯ್ತು ಬಿಡು ಗೋಪಾಲ್. ಗೊತ್ತಾಯ್ತು. ಹಣದ ಹಿಂದೆ ಇರುವ 'ಚಿನ್ನ' ಕೂಡಾ ಒಂದು ವಸ್ತುವೇ. ಅದೂ ಕೂಡ, ಮನುಷ್ಯರು ಮಾಡುವ ವಸ್ತುವೇ ತಾನೆ? ಹೌದು, ಬದನೆಕಾಯಿಗಳನ್ನು ಕೊಟ್ಟು ಬೀಟ್ರೂಟ್ ಗಳನ್ನು ತೆಗೆದುಕೊಂಡರೆ, ಅವುಗಳನ್ನು ಬೆಳೆಯುವವರ ಶ್ರಮವು ಸಮಾನವಾಗಿ ಇದ್ದಂತೆ, ವಸ್ತುವಿಗೂ– ಹಣಕ್ಕೂ ವಿನಿಮಯ ನಡೆದರೂ ಕೂಡಾ ಅಷ್ಟೇ ಅಲ್ಲವೇ? ಬದನೆಕಾಯಿಗಳನ್ನು ಕೊಟ್ಟರೆ ಬೀಟ್ ರೂಟ್ ಬರದಿರಬಹುದು, ಸೌತೆಕಾಯಿ ಬರದಿರಬಹುದು. 'ಹಣ'ದಿಂದಾದರೆ, ಆ ಸಮಸ್ಯೆ ಇರೋದಿಲ್ಲ ಬಿಡು. ಬದನೆಕಾಯಿ ಬೆಳೆಯುವ ರೈತರು, ಅವುಗಳನ್ನು ಮಾರಿ, ಹಣ ಪಡೆದುಕೊಂಡರೆ, ಆ ಹಣದಲ್ಲಿ ಬ್ರೀಟ್ ರೂಟ್ ಕೊಳ್ಳಬಹುದು. ಹಣದಿಂದ ಏನನ್ನು ಬೇಕಾದರೂ ಖರೀದಿಸಬಹುದು. ಹಣದಿಂದ ನಡೆಯುವುದೂ ಕೂಡ ವಿನಿಮಯವೆ. ಮರೆತುಹೋಗಲಿಲ್ಲ ಆದರೆ, ಯಾಕೋ ತಟ್ಟನೆ ನೆನಪಿಗೆ ಬರಲಿಲ್ಲ. ಅದಲ್ಲ, ಹಿಂದೆ ನಿನ್ನಿಂದ ಏನನ್ನೋ ವಿವರವಾಗಿ ಕೇಳಿ ತಿಳಿಯಬೇಕೆಂದುಕೊಂಡಿದ್ದೆ. ಒಂದು ಮಾತು ಹೇಳಯ್ಯ. ಕೈಗಾರಿಕೆಗಳ ಮಾಲೀಕರು ಸರಕುಗಳನ್ನು ತಯ್ಯಾರು ಮಾಡಿದರೆ, ಉಪಕರಣಗಳ ವೆಚ್ಚಗಳು, ಕೆಲಸಗಾರರಿಗೆ ಕೊಡುವ ಸಂಬಳದ ವೆಚ್ಚ, ಎಲ್ಲವನ್ನೂ ಸೇರಿಸಿ ಅವರು ತಮ್ಮ ಸರಕುಗಳಿಗೆ ದರ ನಿಗದಿಪಡಿಸುತ್ತಾರೆ ಅನ್ನುತ್ತೀಯ. ಆದರೆ, 'ಲಾಭ' ಎನ್ನುವ ಇನ್ನೊಂದನ್ನೂ ಕೂಡಾ ಸೇರಿಸುತ್ತಾರೆ ಎಂದೆ. ಅದು ನನಗೆ ಅರ್ಥವಾಗಲಿಲ್ಲ ಅಂತ ಅಂದುಕೊ. ಆದರೂ... ಗೋಪಾಲ್ ಚೆನ್ನಾಗಿ ಓದಿಕೊಂಡಿದ್ದಾನೆ, ಮತ್ತೆ ಕೇಳಿದರೆ ಗೊತ್ತಾಗುತ್ತೇನೊ ಅಂದುಕೊಂಡೆ ನಿಜವಾಗಿಯೂ. ಈಗ ನೀನು ಸ್ವಲ್ಪಹೊತ್ತು ಕುಳಿತುಕೊಳ್ತೀಯಾ? ಹೋಗಿ ನಾನು ಸಂಜೆ ಬರಬಹುದೇ?

"ಅಬ್ಬಾ! ಎಷ್ಟು ಸಮಯ ಮಾತನಾಡಿದ್ದೇವೆ? ನಿಜವಾಗಿಯೂ ನಿನಗಿನ್ನೂ ಇದು ಅರ್ಥವಾಗಲಿಲ್ಲವೇ? ಯಾವುದು, ಮತ್ತೆ ಹೇಳು!" ಎನ್ನುತ್ತಾ ಗೋಪಾಲ್ ತನ್ನ ಗೆಳೆಯನ ಕಡೆ ಪ್ರೀತಿಯಿಂದ ನೋಡುತ್ತಾ ಹೇಳಿದ.

ರವಿ: ಎಲ್ಲವನ್ನು ಹೇಳಿದ್ದೇನೆ. ಅದನ್ನೇ ಮತ್ತೆ ಹೇಳ್ತೇನೆ, ಕೇಳು. ಅದಲ್ಲ, ಕೈಗಾರಿಕೆಗಳವರು, ಅದೇ, ಕಂಪನಿಯವರು–ಅನ್ನುವವರು, ಅವರು ತಯಾರಿಸಿದ ಸರಕುಗಳಿಗೆ 'ದರಗಳನ್ನು' ನಿಗದಿಪಡಿಸುವಾಗ, ಮೊದಲು ಉತ್ಪಾದನಾ ಸಾಧನಗಳನ್ನು ಖರೀದಿಸುವ ವೆಚ್ಚ, ಅವುಗಳನ್ನು ಬಳಸಿ ಹೊಸ ಶ್ರಮದ ಮೂಲಕ ಕೆಲಸ ಮಾಡುವವರಿಗೆ ಸಂಬಳದ ಖರ್ಚು, ಈ ಎರಡೂ ಖರ್ಚುಗಳ ಜೊತೆಗೆ ಇನ್ನೊಂದು ಪೈಸೆಯೂ ಖರ್ಚಾಗುವುದಿಲ್ಲವಾದರೂ, 'ಲಾಭ' ಎನ್ನುವ ಹೆಸರಿನಲ್ಲಿ ಕೂಡಾ ಬರಬೇಕು' ಅದನ್ನು ಕೂಡಾ ದರದಲ್ಲಿ ಸೇರಿಸುತ್ತಾರೆ ಎಂದಿದ್ದೆ. ಅದನ್ನೇ ಮತ್ತೆ ಸ್ವಲ್ಪ ವಿವರವಾಗಿ ಹೇಳು.

ಗೋಪಾಲ: ಅರ್ಥ ಆಗಲಿಲ್ಲವೇ? ಅದು ಎಲ್ಲವನ್ನು ಒಳಗೊಂಡ ಬೆಲೆಯಂತೆ. ಇನ್ನು, ನಂತರ ಸರಕು ಮಾರಾಟ.

ರವಿ: ಅಂ! ಅಷ್ಟು ಬೆಲೆಗೆ ಸರಕು ಮಾರಾಟವಾಗುತ್ತದೆಯೇ? ಅಷ್ಟು ಬೆಲೆಗೆ ಯಾರು ತಾನೇ ಖರೀದಿ ಮಾಡ್ತಾರೆ? ಕೊಳ್ಳುವವರು ಏನಾದರೂ ಹುಚ್ಚರೇ?

ಗೋಪಾಲ: ಕೊಳ್ಳುವವರು ಹುಚ್ಚರಲ್ಲ ಆದರೆ, ಮಾರುವವರು ಮಾತ್ರ ತುಂಬಾ ಒಳ್ಳೆಯವರೇನಲ್ಲ. ನೀನು ಆ ಪುಸ್ತಕವನ್ನು ಕೈಯಲ್ಲಿ ಹಿಡಿದ ನಂತರವೂ ಕೂಡಾ 'ಲಾಭ'ದ ಮಾತು ಕೇಳಿದರೆ ನೀನಿನ್ನೂ ಏನನ್ನೂ ತಿಳಿದೇ ಇಲ್ಲ ಎಂಬ ಮುಖಭಾವದಲ್ಲೇ ಇದ್ದೀಯಲ್ಲ ರವಿ!

ರವಿ: ಹಾಗೇನಿಲ್ಲ. ನನ್ನನ್ನು ಉಪನ್ಯಾಸಕರೆಲ್ಲರೂ ಮೆಚ್ಚುತ್ತಾರೆ. ನೀನು ಎಂದಾದ್ರೂ ನನ್ನನ್ನು ಮೆಚ್ಚಿಕೊಂಡಿದ್ದೀಯಾ ಹೇಳು? ನಾನ್ಯಾವುದೋ ನೂರಾರು ಪುಟಗಳ ಪುಸ್ತಕವನ್ನು, ಕೆಲವು ವಾರದಲ್ಲಿ ಪೂರ್ತಿ ಮಾಡಲಿಲ್ಲ ಎಂದು ನನ್ನನ್ನು ದೂಷಿಸುತ್ತಿದ್ದೀಯಾ? ನಿನಗಿದು ನ್ಯಾಯವೇ?

ಗೋಪಾಲ: ನಾನೇನು ನಿನ್ನನ್ನು ಬೈಯ್ದೆನಾ? ಅದು ಬೈಗುಳ ರೀತಿ ಇದೆಯಾ! ವಿಮರ್ಶೆ ಮಾಡಿದೆ ಅಷ್ಟೆ. ಅದು ಅಗತ್ಯವೂ ಕೂಡ. ಸರಿ ಹೇಳು. ನಿನ್ನ ಪ್ರಶ್ನೆ ಏನು? ಓ, ಅದಾ? 'ಲಾಭ'ವೂ ಕೂಡಾ ಸೇರಿರುವ ದರದಲ್ಲಿ ಇರುವ ಸರಕನ್ನು ಯಾರಾದರೂ ಕೊಳ್ಳುತ್ತಾರೆಯೇ ಅಂದೆ. ನಿನ್ನೆ ನಾನೇ ಕೊಂಡುಕೊಳ್ಳಲಿಲ್ಲವೇ? ಕೊಂಡುಕೊಂಡೆ ತಾನೆ, ಅದೂ 'ಲಾಭ' ಕುರಿತು ಓದಿದವರೇ! ಈ ಶರ್ಟ್ ಅನ್ನು 400 ದರಕ್ಕೆ ಖರೀದಿಸಿದೆ. ಇದರಲ್ಲಿ ಲಾಭ ಎಷ್ಟಿದೆಯೊ ಊಹಿಸಿದರೆ, ಕನಿಷ್ಠ 100 ರೂಪಾಯಿಯಾದರೂ ಇರುತ್ತದೆ. ಅದಕ್ಕಾಗಿ ಒಂದು ಪೈಸೆಯಾದರೂ ಖರ್ಚು ಮಾಡದೆ! ಇದೆಲ್ಲ ಗೊತ್ತು. ತಿಳಿದುಕೊಂಡು ನೀನೇನು ಮಾಡುವೆ? ಗೊತ್ತಿದ್ದರೂ ಕೊಳ್ಳಬೇಕು, ಗೊತ್ತಿಲ್ಲದಿದ್ದರೂ ಕೊಳ್ಳಬೇಕು! 'ಲಾಭ' ಎಂದರೆ, ದೊಡ್ಡ ಕಳ್ಳತನ ಆಗುವುದಕ್ಕಿಂತ ಹೆಚ್ಚಾಗಿ ಇನ್ನೇನಿದೆ?

ರವಿ: ಬೆಲೆಯಲ್ಲಿ ಲಾಭ, ಅಷ್ಟೇ ಇದೆಯೊ, ಎಷ್ಟಿದೆಯೊ, ಹೇಗೆ ಹೇಳಬಹುದು? ನಾವು ಸುಮ್ಮನೆ ಊಹಿಸಿದರೆ ಸರಿಯಾಗುತ್ತಾ? ನೀನೇನು ಅದರ ಲೆಕ್ಕಗಳನ್ನು ನೋಡಿದ್ದೀಯಾ? ಲೆಕ್ಕ ನೋಡುವ ಅಗತ್ಯ ಇದೆ ಅಲ್ಲವೇ?

ಗೋಪಾಲ: ಲೆಕ್ಕಗಳು ಯಾತಕ್ಕಾಗಿ? ಓದೋದಕ್ಕೆ ಅದರಲ್ಲಿ ಏನಾದ್ರೂ ಬರೆದಿದೆಯಾ?

ರವಿ: ಬರೆಯಬೇಕೇ? ಅದೇನು ಮಾತು ಅಂತ ಆಡ್ತೀಯಾ? ಸಾಧನಗಳ ವೆಚ್ಚ, ಸಂಬಳದ ವೆಚ್ಚ, ಇವೆರಡಿದ್ದರೆ ಸಾಕು. 'ಬೆಲೆ'ಯಿಂದ ಆ ಎರಡನ್ನು ಕಳೆದರೆ, ಉಳಿದದ್ದು ಲಾಭವೇ ಅಲ್ಲವೇ? ಅದು ಗೊತ್ತಿಲ್ಲವೇ?

ಗೋಪಾಲ: ಅಬ್ಬಾ! ಒಳ್ಳೆ ಲೆಕ್ಕಗಳು ವಾರೆವ್ಹಾ! ಅಂಕಗಳು ಬರುತ್ತದೆಯಾ?

ರವಿ: ಅಂ, ನಮ್ಮ ಕಾಲೇಜಿನಲ್ಲಿ ಮೊದಲ ಅಂಕಗಳನ್ನು ಪಡೆಯುವ ವಿಧ್ಯಾರ್ಥಿಗಳಲ್ಲಿ ನಾನೂ ಕೂಡಾ ಒಬ್ಬ. ನೀನು ನನ್ನನ್ನು ನಂಬೋದಿಲ್ಲ ಬಿಡು.

ಗೋಪಾಲ: ನೀನು ಅಂಕಗಳಲ್ಲಿ ಫಸ್ಟ್ ಕ್ಲಾಸ್ ಅಂತ ನೀನು ಹೇಳದಿದ್ದರೂ ನಂಬುತ್ತೇನೆ. ಆದರೆ, ವಿದ್ಯಾರ್ಥಿಗಳಾದ ನಾವು ಕಲಿಯಬೇಕಿರುವುದು, ಅಂಕ ಗಳಿಸಲಿಕ್ಕಾಗಿಯೋ, ಶಿಕ್ಷಕರ ಮೆಚ್ಚುಗೆ ಪಡೆಯಲೋ ಅಲ್ಲ ರವಿ!

ರವಿ: ಅಂ, ಇನ್ನೂ ಮುಂದಕ್ಕೆ ಏನೂ ಹೇಳ್ಬೇಡ. ನನಗೆ ಗೊತ್ತು ಬಿಡು. ವಿದ್ಯಾರ್ಥಿಯಾಗಿ, ಆ ಪುಸ್ತಕವನ್ನು ಕಂಠಪಾಠ ಮಾಡೋಣ ಅಂತೀಯ. ಸರಿ ಬಾಬು.

ಗೋಪಾಲ: ವಿದ್ಯಾರ್ಥಿಗಳು ಮಾತ್ರವಲ್ಲ ರವಿ, ಕಾರ್ಮಿಕ ವರ್ಗದ ಜನರೆಲ್ಲರೂ ಆ ಪುಸ್ತಕವನ್ನು ಕಂಠಪಾಠ ಮಾಡಿಕೊಳ್ಳಬೇಕು.

ರವಿ: ಕಂಠಪಾಠ ಮಾಡಿಕೊಳ್ಳಲು ಏನು ಮಾಡೋಣ?

ಗೋಪಾಲ: ಅದನ್ನು ಕೇಳುವ ಅಗತ್ಯವಿಲ್ಲ, ಏನು ಮಾಡಬೇಕೆಂದು ಯಾರೋ ಒಬ್ಬರು ಹೇಳುವ ಅಗತ್ಯವಿಲ್ಲ, ಅದನ್ನು ಓದಿದರೆ ನಿನಗೇ ತಿಳಿಯುತ್ತದೆ.

ರವಿ: ಓದಿದರಷ್ಟೇ ಸಾಕೇ? ನಂತರ ಏನಾದರೂ ಮಾಡಲು ಕೆಲಸ ಇದೆಯೇ! ಇದ್ಯಾವ ಪುಸ್ತಕ ಬಾಬು? ಅದರಲ್ಲಿ ಏನಾದ್ರೂ ಭೂತ ಇದೆ ಅಂತೀಯಾ?

ಗೋಪಾಲ: ಖಂಡಿತವಾಗಿಯೂ ಅದರಲ್ಲಿ ಭೂತ ಇದೆ! 'ಲಾಭ'ಎನ್ನುವ ಭೂತ! ಅದನ್ನು ಕೊಲ್ಲುವಂತಾಗಬೇಕು!

ರವಿ: ಅಮ್ಮೋ! ಆ ಕೆಲಸ ಯಾರು ಮಾಡ್ತಾರೆ?

ಗೋಪಾಲ: ಮತ್ಯಾರು? ನಾವೂ ಕೂಡ! ನೀನೂ ಕೂಡಾ! ನಾನೂ ಕೂಡ!

ರವಿ: ಇದೇನು? ನಾವು ಕೆಲಸ ಮಾಡ್ಕೊಂದು ಇರುತ್ತೇವಲ್ಲವೇ?

ಗೋಪಾಲ: ಈಗ ಉದ್ಯೋಗ ಇಲ್ಲವಲ್ಲ ಎನ್ನುತ್ತೇವೆ. ಉದ್ಯೋಗ ದೊರೆತು ಸಂಬಳವೂ ಸಿಕ್ಕರೆ, 'ಅಮ್ಮಯ್ಯ' ಎಂದು ಖುಷಿಪಡುತ್ತೇವೆ. ಆದರೆ, ನಾವು ಮಾಡುವುದು ನಮ್ಮ 'ಸಂಬಳ'ಕ್ಕಾಗಿ ಮಾತ್ರವಲ್ಲ, ಉದ್ಯಮಿಗಳ 'ಲಾಭ'ಕ್ಕಾಗಿ ಕೂಡಾ ಮಾಡಬೇಕು. ಕೆಲಸದ ದಿನ ಹತ್ತು ಗಂಟೆಯಾದರೆ, ಸಂಬಳಕ್ಕೊಸ್ಕರ 5, 6 ಗಂಟೆಗಳು, ಉಳಿದ ಕೆಲಸ

ಪುಟ 14 ಕ್ಕೆ

ಜುಲೈ 10 ರಂದು ದೇಶಾದ್ಯಂತ ಕಾರ್ಮಿಕರ ಬೇಡಿಕೆ ದಿನಾಚರಣೆ ಕಾರ್ಮಿಕ ವರ್ಗವನ್ನು ಒಗ್ಗೂಡಿಸಿ ಹೋರಾಟಕ್ಕೆ ಸಿದ್ಧರಾಗಲು ಸಿಐಟಿಯು ಕರೆ

17–18 ಜೂನ್ 2024 ರಂದು ದೆಹಲಿಯಲ್ಲಿ ನಡೆದ ಸಿಐಟಿಯು ನ ಕಾರ್ಯದರ್ಶಿ ಮಂಡಳಿಯ ಸಭೆಯು 18 ನೇ ಲೋಕಸಭೆ ಚುನಾವಣೆಯ ನಂತರ ದೇಶದಲ್ಲಿನ ಹೊಸ ಪರಿಸ್ಥಿತಿಯನ್ನು ಚರ್ಚಿಸಿತು. 2014/2019 ರ ಚುನಾವಣೆಗಳಲ್ಲಿ ಬಿಜೆಪಿ ಪಡೆದಿದ್ದ ಪೂರ್ಣ ಬಹುಮತವನ್ನು ಕಳೆದುಕೊಂಡಿದ್ದು, ಅದರ ಮಿತ್ರಪಕ್ಷಗಳಾದ ಮುಖ್ಯವಾಗಿ ಟಿಡಿಪಿ ಮತ್ತು ಜೆಡಿ(ಯು) ಬೆಂಬಲದೊಂದಿಗೆ ಎನ್‌ಡಿಎ ಸರ್ಕಾರವನ್ನು ರಚಿಸುವಂತಾಗಿದೆ.

ಕಳೆದ ಹತ್ತು ವರ್ಷಗಳ ಬಿಜೆಪಿ ಆಡಳಿತದಲ್ಲಿ ದುಡಿಯುವ ಜನರ ನಿರಂತರ ಪ್ರಚಾರಗಳು ಮತ್ತು ಹೋರಾಟಗಳು ಚುನಾವಣಾ ಪ್ರಚಾರದ ವೇಳೆಯಲ್ಲಿ ಜೀವನೋಪಾಯದ ಪ್ರಶ್ನೆಗಳಾದ ನಿರುದ್ಯೋಗ, ಬೆಲೆ ಏರಿಕೆ, ಕೆಲಸದ ಪರಿಸ್ಥಿತಿಗಳು, ಪಿಂಚಣಿ ಇತ್ಯಾದಿ ಪ್ರಶ್ನೆಗಳನ್ನು ಎತ್ತಲು ಸ್ವಲ್ಪ ಮಟ್ಟಿಗೆ ಸಹಾಯ ಮಾಡಿದೆ

ಬಿಜೆಪಿಯ ಈ ಹಿನ್ನಡೆಯ ಹೊರತಾಗಿಯೂ, ನವ ಉದಾರವಾದಿ ಚೌಕಟ್ಟಿನಿಂದ ಎನ್‌ಡಿಎ ಸರ್ಕಾರದ ನೀತಿ ದಿಕ್ಕಿನಲ್ಲಿ ಯಾವುದೇ ಬದಲಾವಣೆಯನ್ನು ನಾವು ನಿರೀಕ್ಷಿಸಲಾಗುವುದಿಲ್ಲ ಎಂದು ಸಿಐಟಿಯು ವಿಶ್ಲೇಷಿಸಿದೆ. ಕಾರ್ಮಿಕ ಸಂಹಿತೆಗಳ ಅನುಷ್ಠಾನದ ಅಧಿಸೂಚನೆಯಲ್ಲಿ ಇದು ಈಗಾಗಲೇ ಸ್ಪಷ್ಟವಾಗಿದೆ, ಉದ್ಯೋಗದಾತರು ಕಾರ್ಮಿಕರ EPF ಬಾಕಿಗಳನ್ನು ಪಾವತಿಸುವಲ್ಲಿ ತಪ್ಪಿದರೆ ವಿಧಿಸುವ ದಂಡವನ್ನು ತೀವ್ರವಾಗಿ ಕಡಿತಗೊಳಿಸುವುದು, ರಾಷ್ಟ್ರೀಯ ಹಣಗಳಿಕೆಯ ಪೈಪ್‌ಲೈನ್ (NMP) ಮೂಲಕ ಖಾಸಗೀಕರಣ ಇತ್ಯಾದಿಗಳಲ್ಲಿ ಇದನ್ನು ಕಾಣಬಹುದು.

ಈ ನೀತಿಗಳ ದಾಳಿಯ ವಿರುದ್ಧ ಜನರನ್ನು ಸಿದ್ಧಗೊಳಿಸಲು ಮತ್ತು ಪ್ರಬಲ ಪ್ರತಿರೋಧವನ್ನು ನಿರ್ಮಿಸಲು ತಕ್ಷಣವೇ ಪ್ರಚಾರಾಂದೋಲನ ಕೈಗೊಳ್ಳಲು ಸಿಐಟಿಯು ಕಾರ್ಯದರ್ಶಿಮಂಡಳಿ ಸರ್ವಾನುಮತದಿಂದ ನಿರ್ಧರಿಸಿದೆ. ತಳಮಟ್ಟದ ಪ್ರಚಾರಾಂದೋಲನ ಮತ್ತು ಅಣಿನೆರಿಕೆಯಿಂದ ಆರಂಭಿಸುವ ಈ ಪ್ರಚಾರಾಂದೋಲನದಲ್ಲಿ ಹಂತ ಹಂತವಾಗಿ ಈ ಬೇಡಿಕೆಗಳ ಸುತ್ತ 10ನೇ ಜುಲೈ 2024 ರಂದು ದೇಶದಾದ್ಯಂತ ಎಲ್ಲಾ ರಾಜ್ಯಗಳಲ್ಲಿ ತಹಸಿಲ್/ಜಿಲ್ಲಾ ಮಟ್ಟದ ಧರಣಿ/ಆಂದೋಲನವನ್ನು ಆಯೋಜಿಸಲಾಗುವುದು ಎಂದು ಅದು ಹೇಳಿದೆ.

1. ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕು
2. ಎನ್‌ಎಂಪಿಯನ್ನು ರದ್ದುಮಾಡಬೇಕು ಮತ್ತು ಖಾಸಗೀಕರಣದ ಇತರ ರೂಪಗಳನ್ನು ನಿಲ್ಲಿಸಬೇಕು.
3. ಎಲ್ಲಾ ಕಾರ್ಮಿಕರಿಗೆ ತಿಂಗಳಿಗೆ ಕನಿಷ್ಠ ಕೂಲಿ 26,000 ರೂ.
4. ಗುತ್ತಿಗೆದಾರರನ್ನು ಬದಲಾಯಿಸಿದಾಗಲೂ ಗುತ್ತಿಗೆ ಕಾರ್ಮಿಕರನ್ನು ಮುಂದುವರೆಸುವ ಮೂಲಕ ಗುತ್ತಿಗೆ ಕಾರ್ಮಿಕರಿಗೆ ಕೆಲಸದ ಭದ್ರತೆಯನ್ನು ಖಾತ್ರಿಪಡಿಸಬೇಕು; ಖಾಯಂ ಕಾರ್ಮಿಕರು ಮಾಡುವ ಕೆಲಸವನ್ನೇ ಮಾಡುತ್ತಿರುವ ಕಾಂಟ್ರಾಕ್ಟ್ ಕಾರ್ಮಿಕರಿಗೆ ಸಮಾನ ವೇತನ ಮತ್ತು ಸೌಲಭ್ಯಗಳು; ಅಗ್ನಿವೀರ್, ಆಯುಧವೀರ್, ಕೊಯ್ಲುವೀರ್ ಮುಂತಾದ ನಿಗದಿತ ಅವಧಿಯ ಉದ್ಯೋಗಗಳನ್ನು ರದ್ದು ಮಾಡಬೇಕು.
5. ಕಾರ್ಮಿಕರ ಭವಿಷ್ಯನಿಧಿ, ಪೆನ್ಷನ್ ಯೋಜನೆ ಮತ್ತು ವಿಮಾಯೋಜನೆಯ ಬಾಕಿಗಳನ್ನು ಪಾವತಿಸಲು ತಪ್ಪುವ ಉದ್ಯೋಗದಾತರ ಮೇಲಿನ ದಂಡ ಶುಲ್ಕವನ್ನು ಕಡಿಮೆ ಮಾಡುವ ಅಧಿಸೂಚನೆಗಳನ್ನು ರದ್ದುಗೊಳಿಸಬೇಕು.
6. ಹೊಸ ಪೆನ್ಶನ್ ಯೋಜನೆಯನ್ನು ರದ್ದುಮಾಡಿ, ಹಳೆಯ ಪೆನ್ಶನ್ ಯೋಜನೆಯನ್ನು ಮತ್ತೆ ತರಬೇಕು ಪುನಃಸ್ಥಾಪನೆ ಒಪಿಎಸ್, ಇಪಿಎಸ್ ಪಿಂಚಣಿದಾರರಿಗೆ ಕನಿಷ್ಠ 9000 ರೂ. ಅಥವಾ ಅದಕ್ಕಿಂತ ಹೆಚ್ಚಿನ ಪಿಂಚಣಿಯನ್ನು ಖಚಿತಪಡಿಸಬೇಕು.
7. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರು, ಆಶಾಗಳು ಮತ್ತು ಮಧ್ಯಾಹ್ನದ ಊಟದ ಕಾರ್ಯಕರ್ತರು ಮತ್ತು ಇತರ – ಯೋಜನಾ ಕಾರ್ಮಿಕರನ್ನು ಕಾರ್ಮಿಕರೆಂದು ಗುರುತಿಸಬೇಕು ಮತ್ತು ಅವರೆಲ್ಲರಿಗೂ ಪಿಂಚಣಿ ಸೇರಿದಂತೆ ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತೆ ಪ್ರಯೋಜನಗಳನ್ನು ಖಾತರಿಪಡಿಸಬೇಕು.
8. ಯಾವುದೇ ಇತರ ಪ್ರಮುಖ ಸ್ಥಳೀಯ ಬೇಡಿಕೆಗಳನ್ನು ರಾಜ್ಯ ಸಮಿತಿಗಳು ಪರಿಗಣಿಸಬಹುದು.

ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಒಕ್ಕೂಟ (AIFAWAH) ಹಿಂದಿನ ಎಲ್ಲಾ ವರ್ಷಗಳಂತೆ 10ನೇ ಜುಲೈ 2024 ರಂದು ಬೇಡಿಕೆಗಳ ದಿನವನ್ನು ಆಚರಿಸಲಿದೆ.

ಈ ಕಾರ್ಯಕ್ರಮವನ್ನು ಬೃಹತ್ ಪ್ರಮಾಣದಲ್ಲಿ ಯಶಸ್ವಿಗೊಳಿಸಬೇಕು ಎಂದು ಸಿಐಟಿಯು ಕಾರ್ಯದರ್ಶಿ ಮಂಡಳಿ ದುಡಿಯುವ ಜನತೆಗೆ ಕರೆ ನೀಡಿದೆ.

C2+50% ಸೂತ್ರ ಮತ್ತು A2+FL+50% ಸೂತ್ರದ ಅಡಿಯಲ್ಲಿ ಎಂಎಸ್‌ಪಿಗೆ ಸಂಬಂಧಪಟ್ಟಂತೆ ಸಿಎಸಿಪಿ ಶ್ವೇತಪತ್ರವನ್ನು ಪ್ರಕಟಿಸಬೇಕು–ಎಐಕೆಸ್ ಆಗ್ರಹ

ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗ (ಸಿಎಸಿಪಿ) ಸಿ2+50% ಸೂತ್ರ ಮತ್ತು ಎ2+ಎಫ್.ಎಲ್. 50% ಸೂತ್ರದ ಅಡಿಯಲ್ಲಿ ರೈತರಿಗೆ ಬೆಲೆಯಲ್ಲಿನ ವ್ಯತ್ಯಾಸವನ್ನು ತಿಳಿಸಲು ಶ್ವೇತಪತ್ರವನ್ನು ಹೊರತರಬೇಕು ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಒತ್ತಾಯಿಸಿದೆ ಮತ್ತು ಅದನ್ನು 2025–26ರ ಹಿಂಗಾರು ಬೆಲೆಗಳನ್ನು ನಿಗದಿಪಡಿಸುವ ಮೊದಲು ಶೀಘ್ರವಾಗಿ ಮಾಡಬೇಕೆಂದು ಒತ್ತಾಯಿಸಿದೆ. ಸಮಾಲೋಚನೆಗೆಂದು ಸಿಎಸಿಪಿ 2025–26 ಮಾರುಕಟ್ಟೆ ಋತುವಿಗಾಗಿ ಹಿಂಗಾರು ಬೆಲೆ ಕುರಿತಂತೆ ಸಮಾಲೋಚನೆಗಾಗಿ ರೈತ ಸಂಘಗಳೊಂದಿಗೆ ಸಿಎಸಿಪಿ ಜೂನ್ 27ರಂದು ಆಯೋಜಿಸಿದ್ದ ಸಭೆಯಲ್ಲಿ ಸಿಎಸಿಪಿ ಅಧ್ಯಕ್ಷರಾದ ಪ್ರೊಫೆಸರ್ ವಿಜಯ್ ಪಾಲ್ ಶರ್ಮಾ ಅವರಿಗೆ ಎಐಕೆಎಸ್ ಈ ಸಂಬಂಧ ಒಂದು ಪತ್ರವನ್ನು ಸಲ್ಲಿಸಿದೆ.

ಬಿಜೆಪಿ ನೇತೃತ್ವದ ಎನ್‌ಡಿಎ 2014 ರಲ್ಲಿ ಎಂ.ಎಸ್.ಸ್ವಾಮಿನಾಥನ್ ಆಯೋಗದ C2+50% ಶಿಫಾರಸನ್ನು ಜಾರಿಗೆ ತರುವುದಾಗಿ ಭರವಸೆ ನೀಡಿತ್ತು. ಆದರೆ 10 ವರ್ಷಗಳ ನಂತರವೂ, ಸಿಎಪಿಸಿ J2+ ಎಫ್ ಎಲ್ +50% ಸೂತ್ರದ ಆಧಾರದ ಮೇಲೆಯೇ ಕನಿಷ್ಟ ಬೆಂಬಲ ಬೆಲೆ(ಎಂಎಸ್‌ಪಿ)ಯನ್ನು ನಿಗದಿಪಡಿಸುತ್ತಿದೆ. ಇದು ಸಿ2+50% ಸೂತ್ರಕ್ಕಿಂತ ಬಹಳ ಕೆಳಗಿದೆ. ಕಳೆದ ವಾರ, ಮಾಹಿತಿ ಮತ್ತು ಪ್ರಸಾರ ಸಚಿವರು ಮುಂಗಾರು ಬೆಳೆಗಳಿಗೆ ಎಂಎಸ್‌ಪಿ ಅನುಮೋದಿಸಿದ್ದು ಉತ್ಪಾದನಾ ವೆಚ್ಚಕ್ಕಿಂತ 1.5 ಪಟ್ಟು ಹೆಚ್ಚು ಎಂದು ಘೋಷಿಸಿದ್ದರು, ಇದು ಸರಿಯಲ್ಲ ಎಂದು ಎಲ್ಲಾ ರೈತ ಸಂಘಟನೆಗಳು ತಮ್ಮ ತೀವ್ರ ಅಸಮಾಧಾನ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸಿವೆ.

ಈ ದರದ ಆಧಾರದ ಮೇಲೆ ಖರೀದಿಯನ್ನು ಖಚಿತಪಡಿಸಿಕೊಳ್ಳಲು ದೇಶಾದ್ಯಂತ ಯಾವುದೇ ಖಚಿತ ಸಂಗ್ರಹಣೆ ವ್ಯವಸ್ಥೆ ಇಲ್ಲದಿರುವುದರಿಂದ ಸಿಎಸಿಪಿ ಘೋಷಿಸಿದ ಎಂಎಸ್‌ಪಿಯಿಂದ ಪ್ರಸ್ತುತ ಶೇ.10 ಕ್ಕಿಂತ ಕಡಿಮೆ ರೈತರು ಪ್ರಯೋಜನ ಪಡೆಯುತ್ತಾರೆ ಎಂಬ ಅಂಶ ಶ್ವೇತಪತ್ರದಲ್ಲಿ ಒಳಗೊಂಡಿರಬೇಕು ಎಂದು ಎಐಕೆಎಸ್ ಒತ್ತಾಯಿಸಿದೆ.

ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಮಾರುಕಟ್ಟೆಯಿಂದ ಭಾರಿ ಲಾಭ ಗಳಿಸುವ ಏಕಸ್ವಾಮ್ಯ ವ್ಯಾಪಾರ ಮತ್ತು ಕೃಷಿ ವ್ಯಾಪಾರ ಕಾರ್ಪೊರೇಟ್‌ಗಳಿಂದ ಸರಿಯಾದ ಪಾಲನ್ನು ಸಂಗ್ರಹಿಸುವ ಮೂಲಕ ಮತ್ತು ಮುಂಬರುವ ಕೇಂದ್ರ ಬಜೆಟ್‌ನಲ್ಲಿ ಹಂಚಿಕೆ ಮಾಡುವ ಮೂಲಕ ಬೆಲೆ ಸ್ಥಿರೀಕರಣ ನಿಧಿಯನ್ನು ರೂಪಿಸಬೇಕು ಎಂದು ಎನ್‌ಡಿಎ ಸರಕಾರಕ್ಕೆ ಸಿಎಸಿಪಿ ಸಲಹೆ ನೀಡಬೇಕು. ಸಿಎಸಿಪಿ ಕೃಷಿ ಸರಕುಗಳಿಂದ ಮಾಡಿದ ಬ್ರ್ಯಾಂಡ್ ಮಾರುಕಟ್ಟೆಯ ಮೌಲ್ಯವರ್ಧಿತ ಉತ್ಪನ್ನಗಳ ಒಟ್ಟು ಮೌಲ್ಯದ ಕನಿಷ್ಠ ಶೇ.30 ರಷ್ಟು ರೈತರೊಂದಿಗೆ ಹಂಚಿಕೊಳ್ಳುವಂತೆ ಬೆಲೆಗಳನ್ನು ನಿಗದಿಪಡಿಸುವ ತತ್ವವನ್ನು ಪರಿಗಣಿಸಬೇಕು. ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಲಾಗುವಾಡುಗಳ ಉದ್ದಿಮೆಗಳು ಸೇರಿದಂತೆ ಕೃಷಿಯಲ್ಲಿ ಏಕಸ್ವಾಮ್ಯ ಬಂಡವಾಳ ಮತ್ತು ಬಹುರಾಷ್ಟ್ರೀಯ ನಿಗಮಗಳಿಗೆ ಪ್ರವೇಶ ಬೇಡ ಎಂದು ಸಿಎಸಿಪಿ ಸಲಹೆ ಮಾಡಬೇಕು.

ಎನ್‌ಡಿಎ ಆಡಳಿತದಲ್ಲಿ ಕಳೆದ ಹತ್ತು ವರ್ಷಗಳಲ್ಲಿ, ಹಣದುಬ್ಬರ ಮತ್ತು ಬೆಲೆ ಏರಿಕೆಯನ್ನು ಪರಿಗಣಿಸಿ, ಉತ್ಪಾದನಾ ವೆಚ್ಚವು ಐದು ಪಟ್ಟು ಹೆಚ್ಚಾಗಿದೆ ಮತ್ತು ಜೀವನ ವೆಚ್ಚವೂ ಅನಿಯಂತ್ರಿತವಾಗಿದೆ, ಹೀಗಾಗಿ ಕೃಷಿಯು ದೊಡ್ಡ ನಷ್ಟದಲ್ಲಿದೆ, ಕೃಷಿ ಕುಟುಂಬಗಳು ತೀವ್ರ ಸಾಲವನ್ನು ಎದುರಿಸುತ್ತಿವೆ ಎಂದು ಎಐಕೆಎಸ್ ಸಿಎಸಿಪಿಗೆ ನೆನಪಿಸಿತು. ಇದೇ ಅವಧಿಯಲ್ಲಿ ಪ್ರತಿದಿನ 31 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೃಷಿಯಲ್ಲಿನ ಲಾಗುವಾಡುಗಳ ಮೇಲಿನ ಜಿಎಸ್‌ಟಿಯನ್ನು ರದ್ದುಪಡಿಸಬೇಕು, ವಿದ್ಯುತ್ ಖಾಸಗೀಕರಣ ಮಾಡಬಾರದು, ಎಲ್ಲಾ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಖಾತರಿಪಡಿಸಬೇಕು ಮತ್ತು ಕಾರ್ಮಿಕರ ಗೌರವಯುತ ಜೀವನಕ್ಕಾಗಿ ಕನಿಷ್ಠ ಕೂಲಿಯನ್ನು ಖಾತ್ರಿಪಡಿಸಬೇಕು, ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಬೇಕು ಮತ್ತು ಉತ್ಪಾಧನೆಯನ್ನು ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಬೇಕು. ಕೃಷಿಯನ್ನು ಉಳಿಸಲು ಮತ್ತು ರೈತರನ್ನು ಉಳಿಸಲು ಮನರೇಗದೊಂದಿಗೆ ಬೇಸಾಯದ ಸಮಗ್ರ ಸಂಯೋಜನೆ, ಸಣ್ಣ ರೈತರು ಮತ್ತು ಕೃಷಿ ಕಾರ್ಮಿಕರ ಸಾಮೂಹಿಕ ಮತ್ತು ಸಹಕಾರಿ ಸಂಘಗಳಿಗೆ ಉತ್ತೇಜನ ನೀಡಬೇಕು, ಬಿಡಿ ತೋಟಗಳಿಗೆ ಸಾರ್ವಜನಿಕ ವಲಯದಿಂದ ಬಡ್ಡಿರಹಿತ ಸಾಲ ಮತ್ತು ವಿಮಾ ರಕ್ಷಣೆಯನ್ನು ಒದಗಿಸಬೇಕು ಎಂದು ಎಐಕೆಎಸ್ ಆಗ್ರಹಿಸಿದೆ.

ಪಿ.ಕೃಷ್ಣಪ್ರಸಾದ್, ಹಣಕಾಸು ಕಾರ್ಯದರ್ಶಿ ಮತ್ತು ಕೇಂದ್ರ ಕಿಸಾನ್ ಮಂಡಳಿಯ ಸದಸ್ಯ ಪುಷ್ಪೇಂದ್ರ ತ್ಯಾಗಿ ಸಭೆಯಲ್ಲಿ ಭಾಗವಹಿಸಿ ಪತ್ರದಲ್ಲಿನ ಬೇಡಿಕೆಗಳನ್ನು ಎತ್ತಿದರು ಎಂದು ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಎಐಕೆಎಸ್‌ನ ಅಧ್ಯಕ್ಷ ಅಶೋಕ ಧವಳೆ ಮತ್ತು ಪ್ರಧಾನ ಕಾರ್ಯದರ್ಶಿ ವಿಜೂ ಕೃಷ್ಣನ್ ತಿಳಿಸಿದ್ದಾರೆ.

ಶಿಕ್ಷಣ ಸಚಿವರು ರಾಜೀನಾಮೆ ನೀಡಬೇಕು ಮತ್ತು ಕೇಂದ್ರೀಕರಣವನ್ನು ಹಿಂತೆಗೆದುಕೊಳ್ಳಬೇಕು –ಸಿಪಿಐ(ಎಂ) ಆಗ್ರಹ

ಕೇಂದ್ರೀಕೃತ ಅಖಿಲ ಭಾರತ ಪರೀಕ್ಷಾ ಪ್ರಕ್ರಿಯೆಗಳನ್ನು ಆವರಿಸಿರುವ ದುಷ್ಟ ಬೆಳವಣಿಗೆಗಳ ಬಗ್ಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತೀವ್ರ ಆತಂಕವನ್ನು ವ್ಯಕ್ತಪಡಿಸಿದೆ. ಅದು NEET-UG ಆಗಿರಲಿ, UGC-NET ಆಗಿರಲಿ ಮತ್ತು ಈಗ NEET-PG ಈ ಎಲ್ಲ ಪರೀಕ್ಷೆಗಳಲ್ಲಿ ಏನಾಗಬಹುದು ಎಂಬುದನ್ನು ಮುಂಗಂಡು ಅವುಗಳನ್ನು ಅನಿರ್ದಿಷ್ಟವಾಗಿ ಮುಂದೂಡಲಾಗಿದೆ. ಈ ಅಕ್ರಮಗಳ ಒಟ್ಟಾರೆ ಪರಿಣಾಮವೆಂದರೆ ಈ ಪ್ರಕ್ರಿಯೆಗಳ ಸಂಪೂರ್ಣ ಕುಸಿತ. ಇದು ದೇಶದ ಉನ್ನತ ಶಿಕ್ಷಣದ ಪ್ರಮುಖ ಕ್ಷೇತ್ರಗಳನ್ನು ತಟ್ಟುತ್ತದೆ.

ಇದರಲ್ಲಿ ಭ್ರಷ್ಟಾಚಾರವಂತೂ ಮೇಲ್ನೋಟದಲ್ಲೇ ಖಚಿತವಾಗಿದೆ. ಆದರೆ ಅದಷ್ಟೇ ಅಲ್ಲ. ಇದು ರಾಷ್ಟ್ರೀಯ ಶಿಕ್ಷಣ ನೀತಿಯ ಅತ್ಯಗತ್ಯ ಅಂಶಗಳಾದ ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರೀಕರಣ, ವ್ಯಾಪಾರೀಕರಣ ಮತ್ತು ಕೋಮುವಾದೀಕರಣದಿಂದ ಹೊರಹೊಮ್ಮಿದೆ. ಹೊಸ ಸರ್ಕಾರ ಈ ಹಗರಣಗಳ ತನಿಖೆಗೆ ಸಿಬಿಐ ಸೇವೆಗಳನ್ನು ಕರೆಸಿರುವುದು, ಅದು ವ್ಯಾಪಮ್ ಹಗರಣದಂತೆಯೇ ಇದನ್ನೂ ಮರೆಗೆ ತಳ್ಳುವ ಧೋರಣೆಯನ್ನು ಅನುಸರಿಸಲಿದೆ ಎಂಬುದನ್ನು ಖಚಿತಪಡಿಸುತ್ತದೆ. ಇವುಗಳು ಉನ್ನತ ಶಿಕ್ಷಣದಲ್ಲಿ ಸರ್ಕಾರದ ನೀತಿ ಧೋರಣೆಗಳು ಸಂಪೂರ್ಣ ಕುಸಿದಿವೆ ಎಂಬುದನ್ನು ಬಿಂಬಿಸುತ್ತವೆ, ಇದಕ್ಕಾಗಿ ಇಡೀ ಸರ್ಕಾರವೇ ಹೊಣೆ, ನಿರ್ಧಿಷ್ಟವಾಗಿ ಶಿಕ್ಷಣ ಸಚಿವರು. ಅವರು ರಾಜೀನಾಮೆ ನೀಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಭಾರತದಂತಹ ದೊಡ್ಡ ಮತ್ತು ವೈವಿಧ್ಯಮಯ ದೇಶದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಆಡಳಿತದ ಕೇಂದ್ರೀಕರಣವನ್ನು ಹಿಂತೆಗೆದುಕೊಳ್ಳಬೇಕು, ಇದರಲ್ಲಿ ಕೇಂದ್ರೀಕೃತ NEET ಪರೀಕ್ಷೆಗಳನ್ನು ರದ್ದುಗೊಳಿಸುವುದು ಮೊದಲ ಹೆಜ್ಜೆಯಾಗಬೇಕು ಎಂದು ಪೊಲಿಟ್ ಬ್ಯೂರೋ ಹೇಳಿದೆ, ಪ್ರತಿ ರಾಜ್ಯವು ವೃತ್ತಿಪರ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶವನ್ನು ನಿಯಂತ್ರಿಸುವ ಪ್ರವೇಶ ಪರೀಕ್ಷೆಗಳನ್ನು ನಡೆಸಲು ತಮ್ಮದೇ ಆದ ಪ್ರತ್ಯೇಕ ಕಾರ್ಯವಿಧಾನಗಳನ್ನು ಅನುಸರಿಸಲು ಬಿಡಬೇಕು ಎಂದು ಅದು ಆಗ್ರಹಿಸಿದೆ.

ಕೃತಕ ಬುದ್ಧಿಮತ್ತೆ ಮತ್ತು ನಿರುದ್ಯೋಗ



ಬಂಡವಾಳಶಾಹಿ ವಿಭಾಗದೊಳಗೆ ಕೃತಕ ಬುದ್ಧಿಮತ್ತೆಯನ್ನು ದೊಡ್ಡ ಪ್ರಮಾಣದಲ್ಲಿ ಅಳವಡಿಸಿದರೆ ಅದು ಮಹಾನಗರಗಳಲ್ಲೂ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಅಂಚಿನಲ್ಲಿರುವ ಪ್ರದೇಶಗಳಲ್ಲೂ ಬೃಹತ್ ನಿರುದ್ಯೋಗವನ್ನು ಉಂಟುಮಾಡುತ್ತದೆ. ಈ ನಿರುದ್ಯೋಗದ ವಿರುದ್ಧ ಹಾಲಿವುಡ್‌ನ ಲೇಖಕರು ಮತ್ತು ಧ್ವನಿ ಕಲಾವಿದರು ಹೋರಾಟಕ್ಕಿಳಿದರು. ಆದರೆ ಇದರಿಂದ ಘೋರ ಭವಿಷ್ಯವನ್ನು ಎದುರಿಸಬೇಕಾದವರು ಅವರು ಮಾತ್ರವೇ ಅಲ್ಲ. ಸಾಮಾನ್ಯ ಕಾರ್ಮಿಕರೂ ಇದರ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಇಂತಹ ಭೀಕರ ಭವಿಷ್ಯ ಸಾಕಾರಗೊಳ್ಳುವುದನ್ನು ತಡೆಯಲು ಸೂಕ್ತವಾದ ಬೇಡಿಕೆಗಳನ್ನು ಎತ್ತುವ ಕಾರ್ಮಿಕ ಹೋರಾಟಗಳನ್ನು ಪ್ರಾರಂಭಿಸುವುದು ಮುಖ್ಯವಾಗಿದೆ.

ಚಿತ್ರಕೃಪೆ: ದಿ ಗಾರ್ಡಿಯನ್



ಪ್ರಭಾತ್ ಪಟ್ನಾಯಕ್

ಹಾಲಿವುಡ್ ಬರಹಗಾರರು ಕೃತಕ ಬುದ್ಧಿಮತ್ತೆ(AI-ಎಐ)ಯನ್ನು ಬದಲಿಸುವುದರ ವಿರುದ್ಧ ಮುಷ್ಕರಕ್ಕೆ ಇಳಿದು ಎತ್ತಿದ ಮೂಲಭೂತ ಸಮಸ್ಯೆಯು ಆ ಒಂದು ಸಂಘರ್ಷ ಪರಿಹಾರಗೊಂಡ ನಂತರ ಹೇಗೋ ಹಿನ್ನೆಲೆಗೆ ಸರಿಯಿತು; ಆದರೆ ಇದು ಮೂಲಭೂತ ಸಮಸ್ಯೆಯಾಗಿಯೇ ಉಳಿದಿದೆ. ಕೃತಕ ಬುದ್ಧಿಮತ್ತೆಯ ಪರಿಚಯದೊಂದಿಗೆ ಸಂಬಂಧಿಸಿದ ವಿವಿಧ ಸಮಸ್ಯೆಗಳ ಬಗ್ಗೆ ಹೆಚ್ಚು ಬರೆಯಲಾಗಿದೆ; ಆದರೆ ಇಲ್ಲಿ ನಾವು ಪರಿಶೀಲಿಸುವುದು ಅದು ಸೃಷ್ಟಿಸುವ ಬೃಹತ್ ನಿರುದ್ಯೋಗಕ್ಕೆ ಸಂಬಂಧಿಸಿದೆ.

ಈ ಸಮಸ್ಯೆಯು ಪ್ರತ್ಯೇಕವಾಗಿ ಬಂಡವಾಳಶಾಹಿ ಪರಿಸ್ಥಿತಿಗಳಲ್ಲಿ ಎ.ಐ.ಯ ಅನ್ವಯಕ್ಕೆ ಮಾತ್ರ ಸಂಬಂಧಿಸಿದೆ ಎಂದು ಗಮನಿಸಬೇಕು; ಆದರೆ, ಬಂಡವಾಳಶಾಹಿಯು ಪ್ರಪಂಚದ ಹೆಚ್ಚಿನ ಭಾಗಗಳಲ್ಲಿ ವಾಸ್ತವವಾಗಿರುವುದರಿಂದ ದುಡಿಯುವ ಜನರಿಗೆ ಎ.ಐ..ಯ ಬೆದರಿಕೆಯು ಅತ್ಯಂತ ಗಂಭೀರವಾಗಿದೆ. ಎ.ಐ.ಗೆ ವಿರೋಧಕ್ಕೆ ಬೇರೇನೇ ನೈತಿಕ ಮತ್ತು ಇತರ ಕಾರಣಗಳಿದ್ದರೂ ಸಮಾಜವಾದಿ ಸಮಾಜದಂತಹ ಕೆಲಸ–ಹಂಚಿಕೆ, ಉತ್ಪನ್ನ–ಹಂಚಿಕೆಯ ನೀತಿಯನ್ನು ಅನುಸರಿಸುವ ಯಾವುದೇ ಸಮಾಜದಲ್ಲಿ, ಮಾನವ ಕೆಲಸದ ಹೊರೆಯನ್ನು ಕಡಿಮೆ ಮಾಡುವ ಎ.ಐ ಯ ಪರಿಚಯ ಉದ್ಯೋಗವನ್ನು ನಾಶಪಡಿಸುತ್ತದೆ ಎಂಬ ಆಧಾರದ ಮೇಲಷ್ಟೇ ಅದಕ್ಕೆ ಆಕ್ಷೇಪ ಎತ್ತಲಾಗುವುದಿಲ್ಲ. ಆದರೆ ಬಂಡವಾಳಶಾಹಿ ಸಮಾಜದ ಕಾರ್ಯವಿಧಾನವು ಕೆಲಸ–ಹಂಚಿಕೆ, ಉತ್ಪನ್ನ–ಹಂಚಿಕೆಯ ನೀತಿಯಿಂದ ಬಹಳ ದೂರವಿದೆ.

ಬಂಡವಾಳಶಾಹಿ ಮತ್ತು ಸಮಾಜವಾದೀ ಸಮಾಜಗಳ ನಡುವಿನ ವ್ಯತ್ಯಾಸ

ಬಂಡವಾಳಶಾಹಿ ಸಮಾಜ ಮತ್ತು ಸಮಾಜವಾದದ ನಡುವಿನ ವ್ಯತ್ಯಾಸವನ್ನು ಒಂದು ಸರಳ ಉದಾಹರಣೆಯೊಂದಿಗೆ ವಿವರಿಸಬಹುದು. ಎ.ಐ. ಸಹಾಯದಿಂದ, ಅಷ್ಟೇ ಏಕೆ, ಯಾವುದೇ ಶ್ರಮ–ಉಳಿತಾಯ ಆವಿಷ್ಕಾರದೊಂದಿಗೆ, 100 ಕಾರ್ಮಿಕರ ಶ್ರಮದ ಉತ್ಪಾದನೆಯನ್ನು ಹೊಸ ಪರಿಸ್ಥಿತಿಯಲ್ಲಿ, ಅದರ ಅರ್ಧದಷ್ಟು ಅಂದರೆ 50 ಕಾರ್ಮಿಕರ ಶ್ರಮದಿಂದ ಉತ್ಪಾದಿಸಬಹುದು ಎಂದಿಟ್ಟುಕೊಳ್ಳೋಣ. ಸಮಾಜವಾದಿ ಸಮಾಜದಲ್ಲಿ, ಪ್ರತಿ ಕೆಲಸಗಾರರು ಮೊದಲು ಕೆಲಸ ಮಾಡುತ್ತಿದ್ದ ಅರ್ಧದಷ್ಟು ಸಮಯ ಕೆಲಸ ಮಾಡುತ್ತಾರೆ, ಆದ್ದರಿಂದ ಅವರ ವಿರಾಮದ ಅವಧಿ ದ್ವಿಗುಣಗೊಂಡರೂ, ಅದೇ ವೇತನವನ್ನು ಪಡೆಯುತ್ತಾರೆ, ಅಂದರೆ ಹಿಂದಿನಷ್ಟೇ ಸರಕು ಮತ್ತು ಸೇವೆಗಳು ಅವರಿಗೆ ಲಭ್ಯವಾಗುತ್ತದೆ ಅಥವ ಹಿಂದಿನದ್ದೇ ವೇತನಕ್ಕೆ ಹಿಂದುದ್ದಕ್ಕಿಂತ ಹೆಚ್ಚು. ಸರಕುಗಳಳುಮತ್ತು ಸೇವೆಗಳು ಲಭ್ಯವಾಗುತ್ತವೆ.

ಪರ್ಯಾಯವಾಗಿ, 100 ಕಾರ್ಮಿಕರ ಸಂಪೂರ್ಣ ಕಾರ್ಯಪಡೆಯು ಮೊದಲಿನಂತೆಯೇ ಕೆಲಸ ಮಾಡುತ್ತದೆ ಆದರೆ ದುಪ್ಪಟ್ಟು ಉತ್ಪಾದಿಸುತ್ತದೆ, ಅದು ಮೊದಲಿಗಿಂತ ಹೆಚ್ಚಿನ ವಿರಾಮವನ್ನು ಹೊಂದುವುದಿಲ್ಲ, ಆದರೆ ಹಿಂದಿನದಕ್ಕೆ ಹೋಲಿಸಿದರೆ ದುಪ್ಪಟ್ಟು ದರದಲ್ಲಿ ವೇತನವನ್ನು ಪಡೆಯುತ್ತದೆ. ಸಮಾಜವಾದಿ ಸಮಾಜದಲ್ಲಿ, ಬೇರೆ ರೀತಿಯಲ್ಲಿ ಹೇಳುವುದಾದರೆ, ಉತ್ಪಾದನೆಯ ಪ್ರತಿ ಯೂನಿಟ್‌ಗೆ ಕಾರ್ಮಿಕರ ಶ್ರಮವನ್ನು ಅರ್ಧದಷ್ಟು ಇಳಿಸುವ ಆವಿಷ್ಕಾರ, ಹಿಂದಿನದ್ದೇ ಸರಕು ಮತ್ತು ಸೇವೆಗಳಿಗೆ ಲಭ್ಯವಾಗುತ್ಯತದೆ, ಹೆಚ್ಚಿನ ವಿರಾಮವನ್ನು ಪಡೆಯುತ್ತದೆ ಅಥವಾ ಸೇವೆಮತ್ತುಸರಕುಗಳ ಲಭ್ಯತೆಯನ್ನು ಹೆಚ್ಚಿಸುತ್ತದೆ. ಈ ಮೂಲಕ ಈ ರೀತಿಯಲ್ಲಿ ಕಾರ್ಮಿಕರ ಜೀವನ ಪರಿಸ್ಥಿತಿ ಉತ್ತಮಗೊಳ್ಳುತ್ತದೆ.

ಆದರೆ ಬಂಡವಾಳಶಾಹಿ ಸಮಾಜದಲ್ಲಿ, ಅಂತಹ ಯಾವುದೇ ಶ್ರಮ–ಉಳಿತಾಯದ ಆವಿಷ್ಕಾರವು ತಕ್ಷಣವೇ ಉದ್ಯೋಗದಲ್ಲಿ ಕಡಿತವನ್ನು ಉಂಟುಮಾಡುತ್ತದೆ: ನಮ್ಮ ಉದಾಹರಣೆಯಲ್ಲಿ ಹೊಸ ಪ್ರಕ್ರಿಯೆಯ ಪರಿಚಯದ ಮೂಲಕ ವೆಚ್ಚವನ್ನು ಕಡಿತಗೊಳಿಸಲು ಮತ್ತು ಲಾಭವನ್ನು ಹೆಚ್ಚಿಸಲು 50 ಕೆಲಸಗಾರರನ್ನು ತಕ್ಷಣವೇ ಹೊರಹಾಕಲಾಗುತ್ತದೆ; ಇದು ನಿರುದ್ಯೋಗವನ್ನು ಅಪಾರ ಮಟ್ಟಿಗೆ ಹೆಚ್ಚಿಸಿ ಮೀಸಲು ಶ್ರಮಿಕ ಪಡೆಯನ್ನು ಹೆಚ್ಚಿಸುತ್ತದೆ. ಇದು ಕಾರ್ಮಿಕರ ಚೌಕಾಶಿ ಸಾಮರ್ಥ್ಯವನ್ನು ಕಡಿಮೆ ಮಾಡುತ್ತದೆ, ಇದರಿಂದ ಕೂಲಿ ದರವೂ ಇಳಿಯಬಹುದೇ ಹೊರತು ಖಂಡಿತವಾಗಿಯೂ ಹೆಚ್ಚಾಗುವುದಿಲ್ಲ. ಆದ್ದರಿಂದ ಬಂಡವಾಳಶಾಹಿಯ ಅಡಿಯಲ್ಲಿ ಶ್ರಮ–ಉಳಿತಾಯ ಮಾಡುವ ಆವಿಷ್ಕಾರ, ನಿರುದ್ಯೋಗವನ್ನು ಹೆಚ್ಚಿಸುವ ಮೂಲಕ ಮತ್ತು ನಿಜ ವೇತನವನ್ನು ಕಡಿಮೆ ಮಾಡುವ ಮೂಲಕ ಕಾರ್ಮಿಕರ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆ. ಹೀಗೆ, ಸಮಾಜವಾದದ ಅಡಿಯಲ್ಲಿ ಮಾನವ ಸಂತೋಷವನ್ನು ಸುಧಾರಿಸುವ ಸಾಮರ್ಥ್ಯವನ್ನು ಹೊಂದಿರುವ ಆವಿಷ್ಕಾರ, ಬಂಡವಾಳಶಾಹಿಯ ಅಡಿಯಲ್ಲಿ ಕಾರ್ಮಿಕರ ಪರಿಸ್ಥಿತಿಯನ್ನು ನಿಜವಾಗಿಯೂ ಹದಗೆಡಿಸುತ್ತದೆ. ಹೀಗೆ ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆಯಲ್ಲಿ ಎ.ಐ. ಪರಿಚಯವು ಕಾರ್ಮಿಕರಿಗೆ ಅಪಾರ ಹಾನಿಯನ್ನು ಉಂಟುಮಾಡುತ್ತದೆ.

ರಿಕಾರ್ಡೋವಾದ ಮತ್ತು ಕಾರ್ಮಿಕ ಸಂಘಗಳ ವಾದ

ಈ ರೀತಿಯಲ್ಲಿ ವಾದಿಸುವುದು ಮೊದಲ ನೋಟದಲ್ಲಿ ಲುಡ್ಡೈಟ್‌ಗಳ ತಪ್ಪಾದ ವಾದವನ್ನು ಅನುಸರಿಸಿದಂತೆ ಕಾಣುತ್ತದೆ. ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ಬ್ರಿಟನ್‌ನಲ್ಲಿ ಜವಳಿ ಕೆಲಸಗಾರರ ಗುಂಪು ಈ ವಾದವನ್ನು ಅನುಸರಿಸಿ ಕಾರ್ಮಿಕರಲ್ಲಿ ನಿರುದ್ಯೋಗವನ್ನು ಉಂಟುಮಾಡುವುದು ಯಂತ್ರಗಳೇ ಎಂದು ನಂಬಿದ್ದರಿಂದ ಯಂತ್ರಗಳನ್ನು ಒಡೆಯುವ ಕೆಲಸಕ್ಕೆ ಇಳಿದರು. ಲುಡ್ಡೈಟ್ ವಾದವು ಯಂತ್ರೋಪಕರಣಗಳು ನಿರುದ್ಯೋಗವನ್ನು ಉಂಟುಮಾಡುತ್ತವೆ ಎಂದು ನೋಡುವುದರಲ್ಲಿ ತಪ್ಪಿರಲಿಲ್ಲ; ಆದರೆ ಅವರು ಈ ವಿದ್ಯಮಾನ ಬಂಡವಾಳಶಾಹಿಯ ಕಾರಣದಿಂದ ಉದ್ಭವಿಸುತ್ತದೆ ಎಂದು ಕಾಣಲಿಲ್ಲ. ಅವರು ಈ ಸಾಮಾಜಿಕ ವಿದ್ಯಮಾನ ತಂತ್ರಜ್ಞಾನದಿಂದಾಗಿ, ಅದರಲ್ಲಿ ಅಂತರ್ಗತವಾಗಿರುವ ವಿದ್ಯಮಾನ ಎಂದು ತಪ್ಪಾಗಿ ಗ್ರಹಿಸಿದರು; ಈ ವಿದ್ಯಮಾನದ ಕಾರಣಗಳನ್ನು ಗುರುತಿಸಲಾರದ ಅವರ ತಪ್ಪುಗಳೇನೂ ಇದ್ದರೂ, ಈ ವಿದ್ಯಮಾನವನ್ನು ಗುರುತಿಸುವಲ್ಲಿ ಅವರು ತಪ್ಪು ಮಾಡಿರಲಿಲ್ಲ. ವಾಸ್ತವವಾಗಿ, ಯಂತ್ರೋಪಕರಣಗಳು ಉದ್ಯೋಗಕ್ಕೆ ಪ್ರಯೋಜನಕಾರಿ ಎಂದು ನೋಡಿದ ಅರ್ಥಶಾಸ್ತ್ರಜ್ಞರು ಸೈದ್ಧಾಂತಿಕವಾಗಿ ತಪ್ಪು ಮಾಡಿದ್ದರು.

ಈ ಅರ್ಥಶಾಸ್ತ್ರಜ್ಞರಲ್ಲಿ ಪ್ರಮುಖರು ಡೇವಿಡ್ ರಿಕಾರ್ಡೋ. ವೇತನವು ಯಾವಾಗಲೂ ಜೀವನಾಧಾರ ಮಟ್ಟದಲ್ಲಿ ಉಳಿಯುತ್ತದೆ ಎಂದು ಅವರು ವಾದಿಸಿದರು, ಯಂತ್ರೋಪಕರಣಗಳು ಕಾರ್ಮಿಕರನ್ನು ಹೊರದಬ್ಬಿ ಹೆಚ್ಚುವರಿ ನಿರುದ್ಯೋಗವನ್ನು ತಕ್ಷಣವೇ ಉಂಟುಮಾಡಿ ಲಾಭದ ಮಿತಿಗಳನ್ನು ಮತ್ತು ಆದರಿಂದಾಗಿ ಲಾಭದ ದರವನ್ನು ಹೆಚ್ಚಿಸುತ್ತದೆ. ಬಂಡವಾಳಶಾಹಿ ಅರ್ಥವ್ಯವಸ್ಥೇಯಲ್ಲಿ ಒಟ್ಟಾರೆ ಬೇಡಿಕೆಯ ಕೊರತೆ ಎಂದಿಗೂ ಇರಲಾರದು ಎಂಬ 'ಸೇ ನಿಯಮದಲ್ಲಿ ನಂಬಿಕೆಯಿದ್ದ ರಿಕಾರ್ಡೋ, ನಂತರ ಎಲ್ಲಾ ವೇತನಗಳನ್ನು ಬಳಸಲಾಗುತ್ತದೆ ಮತ್ತು ಎಲ್ಲಾ ಬಳಸದ ಲಾಭವನ್ನು ಉಳಿಸಲಾಗುತ್ತದೆ ಮತ್ತು ಹೂಡಿಕೆ ಮಾಡಲಾಗುತ್ತದೆಯಾದ್ದರಿಂದ, ಲಾಭದ ದರದಲ್ಲಿನ ಹೆಚ್ಚಳವು ಹೂಡಿಕೆ ದರವನ್ನು ಹೆಚ್ಚಿಸುತ್ತದೆ ಎಂದು ವಾದಿಸಿದರು. ಇದು ಬಂಡವಾಳದ ದಾಸ್ತಾನಿನ ಪ್ರತಿ ಯೂನಿಟ್ ಹೂಡಿಕೆ, ಅಂದರೆ, ಬಂಡವಾಳದ ದಾಸ್ತಾನಿನ ದರ ಮತ್ತು ಅದರಿಂದ ಉತ್ಪಾದನೆ ಮತ್ತು ಉದ್ಯೋಗದ ಬೆಳವಣಿಗೆಯ ದರ ಹೆಚ್ಚುತ್ತದೆ ಎಂದು ವಾದಿಸಿದರು.

ಇದರರ್ಥ ಯಂತ್ರೋಪಕರಣಗಳ ಪರಿಚಯವು ತಕ್ಷಣವೇ ನಿರುದ್ಯೋಗವನ್ನು ಉಂಟುಮಾಡಿದರೂ, ಅದು ಉದ್ಯೋಗದ ಬೆಳವಣಿಗೆಯ ದರವನ್ನು ಕೂಡ ಹೆಚ್ಚಿಸುತ್ತದೆ, ಇದರಿಂದಾಗಿ ಸ್ವಲ್ಪ ಸಮಯದ ನಂತರ ಉಂಟಾದ ತಾತ್ಕಾಲಿಕ ಹೆಚ್ಚುವರಿ ನಿರುದ್ಯೋಗವನ್ನು ನಿವಾರಿಸಲಾಗುತ್ತದೆ, ಅದನ್ನು ಪರಿಚಯಿಸುವ ಮೊದಲು ಇದ್ದುದಕ್ಕಿಂತ ಹೆಚ್ಚಿನ ಉದ್ಯೋಗವನ್ನು ಉಂಟಾಗುತ್ತದೆ. ಅಂದರೆ, ಯಂತ್ರೋಕರಣದ ಪರಿಚಯ ತಾತ್ಕಾಲಿವಾಗಿ ನಿರುದ್ಯೋಗವನ್ನು ಉಲ್ಬಣಗೊಳಿಸಿದರೂ, ದೀರ್ಘಾವಧಿಯಲ್ಲಿ ಹೆಚ್ಚಿನ ಉದ್ಯೋಗಗಳನ್ನು ಉಂಟು ಮಾಡುತ್ತದೆ ಎಂಬುದು ಇಂತಹ ಅರ್ಥಶಾಸ್ತ್ರಜ್ಞರ ವಾದ.

ಇಂದಿಗೂ ರಿಕಾರ್ಡೋ ಅವರ ವಾದವನ್ನು ಯಂತ್ರೋಪಕರಣಗಳ ಪರಿಚಯವು ಉದ್ಯೋಗಕ್ಕೆ ಹಾನಿಕಾರಕವಾಗಿದೆ ಎಂಬ ಟ್ರೇಡ್ ಯೂನಿಯನ್‌ಗಳ ವಾದಕ್ಕೆ ಪ್ರತಿಯಾಗಿ ಮಂಡಿಸಲಾಗುತ್ತಿದೆ. ಈ ವಾದವು ಎರಡು ಸ್ಪಷ್ಟ ಕಾರಣಗಳಿಂದಾಗಿ ತಪ್ಪಾಗಿದೆ. ಮೊದಲನೆಯದು ಇದು ಒಂದು ಬಾರಿಯ ಯಂತ್ರೋಪಕರಣಗಳ ಪರಿಚಯವನ್ನು ಮಾತ್ರ ಸೂಚಿಸುತ್ತದೆ; ಆದರೆ, ಯಂತ್ರೋಪಕರಣಗಳ (ಅಥವಾ ಶ್ರಮಿಕ–ಉಳಿತಾಯ ಆವಿಷ್ಕಾರಗಳ) ಪರಿಚಯವು ನಿರಂತರ ಪ್ರಕ್ರಿಯೆಯಾಗಿದೆ, ಆದ್ದರಿಂದ ಈ ರೀತಿಯ ಪ್ರತಿಯೊಂದು ಪರಿಚಯದಿಂದ ಉಂಟಾಗುವ ನಿರುದ್ಯೋಗದ ಸೃಷ್ಟಿ

ಪುಟ 14 ಕ್ಕೆ



ಚಿತ್ರ ಕೃಪೆ: ದಿ ಹಾಲಿವುಡ್ ರಿಪೋರ್ಟರ್

ತುರ್ತು ಪರಿಸ್ಥಿತಿ ಘೋಷಿಸಿದ ಇಂದಿರಾ...... ಪುಟ 6 ರಿಂದ

ಅಲ್ಪಸಂಖ್ಯಾತರು, ದಲಿತರು ಮತ್ತು ಬುಡಕಟ್ಟು ಜನಾಂಗದವರ ಮೇಲೆ ಹಲ್ಲೆ ಮತ್ತು ಚಿತ್ರಹಿಂಸೆಗಳು ನಿತ್ಯವೂ ನಡೆಯುತ್ತಿವೆ. ಬುಲ್ಡೋಜರ್ ರಾಜ್, ಎನ್‌ಕೌಂಟರ್ ಬಿಜೆಪಿ ಸರ್ಕಾರ ಎನ್ನುವುದು ಇಂದು ಪರ್ಯಾಯ ಪದಗಳಾಗಿ ಮಾರ್ಪಟ್ಟಿವೆ. ಗೋಸಂರಕ್ಷಣಾ ಪಡೆಗಳು ಸೇರಿದಂತೆ ವಿವಿಧ ಹಿಂದೂ ಶಕ್ತಿಗಳು ಯಾರು ಏನನ್ನು ತಿನ್ನಬೇಕು ಮತ್ತು ಏನನ್ನು ಧರಿಸಬೇಕು ಎಂಬುದನ್ನು ನಿರ್ಧರಿಸುತ್ತಿದ್ದಾರೆ. ಗೋ ರಕ್ಷಣೆ ಅಥವಾ ಲವ್ ಜಿಹಾದ್ ಹೆಸರಿನಲ್ಲಿ ಗುಂಪು ದಾಳಿಗಳು ನಡೆಯುತ್ತಿವೆ.

ಭಿನ್ನಾಭಿಪ್ರಾಯವನ್ನು ಹತ್ತಿಕ್ಕಲಾಗಿದೆ

ಕಾರ್ಪೊರೇಟ್‌ಗಳ ಪರವಾಗಿ ಸರ್ಕಾರ ಕರಾಳ ಕೃಷಿ ಕಾಯಿದೆಗಳನ್ನು ಜಾರಿಗೆ ತಂದಾಗ ಐತಿಹಾಸಿಕ ರೈತ ಚಳುವಳಿ ಪ್ರಾರಂಭವಾಯಿತು. ಆ ಆಂದೋಲನವನ್ನು ಹತ್ತಿಕ್ಕಲು ಮೋದಿ ಸರಕಾರ ಸೇನೆ ಮತ್ತು ಪೊಲೀಸರೊಂದಿಗೆ ದೇಶಕ್ಕೆ ಅನ್ನ ನೀಡುವ ರೈತರ ವಿರುದ್ಧ ಯುದ್ಧಕ್ಕೆ ಇಳಿದು ಕ್ರೂರ ಹಿಂಸೆ ನೀಡಿತು. ದೆಹಲಿಯ ಶಾಹೀನ್ ಬಾಗ್, ಜೆಎನ್‌ಯು ಮತ್ತು ದೇಶದ ಇತರ ಭಾಗಗಳಲ್ಲಿ ನಡೆದ ಸಿಎಎ–ಎನ್‌ಆರ್‌ಸಿ ವಿರೋಧಿ ಚಳುವಳಿಗಳನ್ನು ಹತ್ತಿಕ್ಕಲು ಸರ್ಕಾರ ಮತ್ತು ಹಿಂದುತ್ವ ಶಕ್ತಿಗಳು ಇದೇ ರೀತಿಯ ದಾಳಿಗಳನ್ನು ನಡೆಸಿದರು. ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ದೇಶದ ವಿವಿಧ ಭಾಗಗಳ ಅನೇಕ ಪ್ರಮುಖರು ಇನ್ನೂ ಜೈಲುಗಳಲ್ಲಿ ಕೊಳೆಯುತ್ತಿದ್ದಾರೆ. ಸ್ಟಾನ್ ಸ್ವಾಮಿ ಜೈಲು ಕಸ್ಟಡಿಯಲ್ಲಿ ನಿಧನರಾದರು. ವೈಜ್ಞಾನಿಕ ಧೋರಣೆಯನ್ನು ಅನುಸರಿಸಿದ ದಾಭೋಲ್ಕರ್, ಪನ್ಸಾರೆ, ಕಲ್ಬುರ್ಗಿ, ಗೌರಿ ಲಂಕೇಶ್ ಅವರನ್ನು ಹಿಂದುತ್ವ ಶಕ್ತಿಗಳು ಹತ್ಯೆಗೈದವು.

ಅಘೋಷಿತ ತುರ್ತು ಪರಿಸ್ಥಿತಿ

ಮೋದಿಯವರ ಆಡಳಿತದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸದಿದ್ದರೂ ದೇಶವು ಅಘೋಷಿತ ತುರ್ತು ಪರಿಸ್ಥಿತಿಯಲ್ಲಿದೆ. ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾದ ಮಾಧ್ಯಮವನ್ನು ಇಂದು "ಗೋಡಿ ಮಾಧ್ಯಮ" (ಮಡಿಲಲ್ಲಿ ಕುಳಿತ ಮಾಧ್ಯಮ) ಎಂದು ಕರೆಯಲಾಗುತ್ತದೆ. ಇಡಿ, ಸಿಬಿಐ ಮತ್ತು ಆದಾಯ ತೆರಿಗೆ ನಿಯಂತ್ರಣಗಳನ್ನು ಆರಂಭದಲ್ಲಿ ಟೀಕಿಸಿದ ಮುಖ್ಯವಾಹಿನಿಯ ಮಾಧ್ಯಮವು ಗೋಡಿ ಮಾಧ್ಯಮವಾಗಿ ಬದಲಾಗಿದೆ. ಸ್ವತಂತ್ರ ಪತ್ರಕರ್ತರು, ಪೋರ್ಟಲ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳನ್ನು ನಿಯಂತ್ರಿಸಲು ಸರ್ಕಾರವು ಬಲವಾದ ಪ್ರಯತ್ನಗಳನ್ನು ಮಾಡಿದೆ. ಮೋದಿ ಸರ್ಕಾರವನ್ನು ಟೀಕಿಸಿದ್ದಕ್ಕಾಗಿ ನ್ಯೂಸ್ ಕ್ಲಿಕ್, ದಿ ವೈರ್ ಮೇಲೆ ದಾಳಿ ನಡೆಸಿ ಅವುಗಳನ್ನು ಮುಚ್ಚುವ ಗುರಿ ಹೊಂದಲಾಗಿದೆ. ಎನ್‌ಡಿಟಿವಿ ಮೇಲೆ ದಾಳಿ ನಡೆಸಲಾಯಿತು ಮತ್ತು ಅದನ್ನು ಮೋದಿ ಸ್ನೇಹಿತ ಅದಾನಿ ತಮ್ಮ ಒಡೆತನಕ್ಕೆ ಪಡೆದಿದ್ದಾರೆ. ಮೋದಿ ಸರ್ಕಾರವನ್ನು ಟೀಕಿಸಿದ್ದಕ್ಕಾಗಿ ಸಿದ್ದಿಕ್ ಕಪ್ಪನ್, ಮೊಹಮ್ಮದ್ ಜುಬೇರ್ ಮತ್ತು ಪ್ರಬೀರ್ ಪುರ್ಕಾಯಸ್ಥ ಸೇರಿದಂತೆ ಹಲವಾರು ಪತ್ರಕರ್ತರನ್ನು ಜೈಲಿಗೆ ಹಾಕಲಾಯಿತು.

ಸಾಂಸ್ಕೃತಿಕ ಲೋಕದ ಮೇಲೂ ಸಹಾ ಅಘೋಷಿತ ತುರ್ತುಪರಿಸ್ಥಿತಿಯ ಕರಿನೆರಳು ಬೀಳುತ್ತಿದೆ. ಸರ್ಕಾರದ ನೀತಿ, ಮೋದಿ–ಷಾ ಮತ್ತು ಅವರ ಹಿಂದುತ್ವ ಸಿದ್ಧಾಂತದ ವಿರುದ್ಧ ಅಭಿಪ್ರಾಯ ವ್ಯಕ್ತಪಡಿಸಿದರೆ ಸಾಕು, ಧಾರ್ಮಿಕ ಭಾವನೆಗಳನ್ನು ನೋಯಿಸುವ ನೆಪದಲ್ಲಿ ಚಲನಚಿತ್ರಗಳು, ನಾಟಕ ಪ್ರದರ್ಶನಗಳು ಮತ್ತು ನೃತ್ಯ ಸಂಗೀತ ಕಾರ್ಯಕ್ರಮಗಳ ಮೇಲೆ ಹಿಂದುತ್ವ ಶಕ್ತಿಗಳು ದಾಳಿ ಮಾಡಿ ನಿಲ್ಲಿಸುತ್ತವೆ. ದೆಹಲಿಯ ಸಾಮೂಹಿಕ ಅತ್ಯಾಚಾರದ ಕುರಿತು ಬಿಬಿಸಿ ಸಾಕ್ಷ್ಯಚಿತ್ರವನ್ನು ನಮ್ಮ ದೇಶದಲ್ಲಿ ನಿಷೇಧಿಸಲಾಗಿದೆ. ಧಾರ್ಮಿಕ ಮೂಲಭೂತವಾದ, LGBTQ ಗಳ ಕುರಿತಾದ ಚಲನಚಿತ್ರ "ಅನ್–ಫ್ರೀಡಮ್" ಸೆನ್ಸಾರ್ ಮಂಡಳಿಯ ಮೂಲಕ ನಿರ್ಬಂಧಿಸಿದೆ. ಅನೇಕ ಮಂದಿ ಕಲಾವಿದರು, ಯೂಟ್ಯೂಬರ್‌ಗಳು, ನೇಹಾ ಸಿಂಗ್ ರಾಥೋಡ್ ಅವರಂತಹ ಸ್ಟ್ಯಾಂಡ್–ಅಪ್ ಕಾಮಿಡಿಯನ್ ಗಳು ಪ್ರತಿದಿನ ಟ್ರೋಲ್ ಗೆ ಗುರಿಯಾಗುತ್ತಿದ್ದಾರೆ. ಅವರಿಗೆ ಕೊಲೆ ಬೆದರಿಕೆಗಳು ಬರುತ್ತಿವೆ.

ಆದರೆ ಪ್ರಸ್ತುತ ಮೋದಿ 3.0 ಹಿಂದಿನಂತೆ ಆಗುವುದಿಲ್ಲ. ಪ್ರತಿಪಕ್ಷಗಳ ಸಂಖ್ಯೆ ಎಂದಿಗಿಂತಲೂ ಹೆಚ್ಚಾಗಿದೆ. ಜನರ ತೀರ್ಪು ಮೋದಿಯವರಿಗೆ ಅನುಕೂಲಕರವಾಗಿಲ್ಲ. ಸಮ್ಮಿಶ್ರ ಸರ್ಕಾರದ ಪ್ರಧಾನಿಯಾಗಿ ನರೇಂದ್ರ ಮೋದಿಯವರು ದೇಶವನ್ನು ಹಳೆಯ ರೀತಿಯಲ್ಲಿ ನಡೆಸಲು ಸಾಧ್ಯವಿಲ್ಲ. ಆದರೂ ಬಿಜೆಪಿ ಅಧಿಕಾರದಲ್ಲಿದೆ. ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಂವಿಧಾನ ಸುರಕ್ಷಿತವಾಗಿಲ್ಲ. ಅದಕ್ಕಾಗಿಯೇ ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ದೇಶದ ಸಂವಿಧಾನವನ್ನು ರಕ್ಷಿಸುವ ಹೋರಾಟವನ್ನು ಬಲಪಡಿಸಬೇಕು.

–ಪಲಾಶ್ ದಾಸ್

ಕೃಪೆ: 'ಗಣಶಕ್ತಿ' (ಕನ್ನಡಕ್ಕೆ:ಸಿಜಿ)

ಕೃತಕ ಬುದ್ಧಿಮತ್ತೆ ಮತ್ತು ನಿರುದ್ಯೋಗ......... ಪುಟ 13 ರಿಂದ

ಕೂಡ ಒಂದು ನಿರಂತರ ಪ್ರಕ್ರಿಯೆಯಾಗಿದೆ; ಆದ್ದರಿಂದ ಯಾವುದೇ ನಿರ್ದಿಷ್ಟ ಅವಧಿಯಲ್ಲಿ, ಯಂತ್ರೋಪಕರಣಗಳ ನಿರಂತರ ಪರಿಚಯದ ಮೊದಲು ಇದ್ದಕ್ಕಿಂತ ನಿಜವಾದ ಉದ್ಯೋಗ ಕಡಿಮೆ ಇರುತ್ತದೆ. ಹೆಚ್ಚಿನ ಉದ್ಯೋಗದ ಸೃಷ್ಟಿಯಾಗುವ ಸಮಯ ಪ್ರಾರಂಭವಾಗುವ ಆ ದಿನ ಅರ್ಥಪೂರ್ಣ ಅವಧಿಯಲ್ಲಿ ಎಂದೂ ಬರಲಿಕ್ಕಿಲ್ಲ.

ಆದಾಗ್ಯೂ ಹೆಚ್ಚು ಮುಖ್ಯವಾದ ಅಂಶವು ಈ ಕೆಳಗಿನವುಗಳಿಗೆ ಸಂಬಂಧಿಸಿದೆ. ಬಂಡವಳಿಗರು ಮಾರುಕಟ್ಟೆ ವಿಸ್ತರಿಸುವ ನಿರೀಕ್ಷೆಯಿದ್ದಾಗ ಮಾತ್ರ ಹೂಡಿಕೆ ಮಾಡುತ್ತಾರೆ. ಶ್ರಮ–ಉಳಿತಾಯದಿಂದ ಉಂಟಾಗುವ ಕಡಿಮೆ ಯೂನಿಟ್ ಶ್ರಮ ವೆಚ್ಚದಿಂದಾಗಿ ಲಾಭದ ಮಿತಿ ಮತ್ತು ಲಾಭದ ದರವು ಹೆಚ್ಚಾದಾಗ ಅಲ್ಲ. ಈಗ, ಯಂತ್ರೋಪಕರಣಗಳನ್ನು ಪರಿಚಯಿಸುವ ಅವಧಿಯನ್ನು ಪರಿಗಣಿಸಿ. ರಿಕಾರ್ಡೊರವರೇ ಒಪ್ಪಿಕೊಂಡಂತೆ, ಇದರಿಂದಾಗಿ ಉದ್ಯೋಗವು ತಕ್ಷಣವೇ ಕುಸಿಯುತ್ತದೆ, ಜೀವನಾಧಾರ ಮಟ್ಟದಲ್ಲಿ ನಿಜ ವೇತನವನ್ನು ನಿಗದಿಪಡಿಸಿರುವುದರಿಂದ ಒಟ್ಟು ಕೂಲಿ ಮೊತ್ತ ಮತ್ತು ಕಾರ್ಮಿಕರ ಬಳಕೆ ಪ್ರಮಾಣವೂ ಉಳಿಯುತ್ತದೆ. ಬಂಡವಾಳಶಾಹಿಗಳು ತಮ್ಮ ಲಾಭದ ಒಂದು ಸಣ್ಣ ಪ್ರಮಾಣವನ್ನು ಮಾತ್ರ ಬಳಸುತ್ತಾರೆ (ಸರಳತೆಗಾಗಿ, ಅವರು ತಮ್ಮ ಸಂಪೂರ್ಣ ಲಾಭವನ್ನು ಉಳಿಸುತ್ತಾರೆ ಎಂದು ಭಾವಿಸೋಣ). ಆದ್ದರಿಂದ ಆ ಅವಧಿಯಲ್ಲಿ ಅರ್ಥವ್ಯವಸ್ಥೆಯಲ್ಲಿಒಟ್ಟುಬಳಕೆಕಡಿಮೆಯಾಗುತ್ತದೆ; ಮತ್ತು ಹೂಡಿಕೆ ಹೆಚ್ಚಾಗಲು ಯಾವುದೇ ಐಹಿಕ ಕಾರಣವಿಲ್ಲ. ಆದ್ದರಿಂದ ಒಟ್ಟಾರೆ ಬೇಡಿಕೆ ಮತ್ತು ಉತ್ಪಾದನೆಯು ಆ ಅವಧಿಯಲ್ಲಿ ಕುಸಿದಿರುತ್ತದೆ. ಅಂತಹ ಸಂದರ್ಭದಲ್ಲಿ, ರಿಕಾರ್ಡೊ ವಾದಿಸಿದಂತೆ ಹೂಡಿಕೆಯ ಸಮಯಾವಧಿ ಮೊದಲಿಗಿಂತ ಹೆಚ್ಚಿರುವ ಬದಲು ಕಡಿಮೆಯಿರುತ್ತದೆ. ಆದ್ದರಿಂದ ಉದ್ಯೋಗದ ಸಮಯಾವಧಿಯೂ ಕಡಿಮೆ ಇರುತ್ತದೆ.

ಯಂತ್ರೋಪಕರಣಗಳ ಪರಿಚಯವು ಉದ್ಯೋಗಕ್ಕೆ ಹಾನಿಕಾರಕವಾಗಿದೆ ಎಂಬ ಕಾರ್ಮಿಕರ ಹಳೆಯ ವಾದವು ಅಲ್ಪಾವಧಿಯಲ್ಲಿ ಮತ್ತು ದೀರ್ಘಾವಧಿಯಲ್ಲಿಯೂ ಮಾನ್ಯವಾಗಿ ಉಳಿದಿದೆ. ಆಧರೂ ರಿಕಾರ್ಡೊ ವಿರುದ್ಧ ನಮ್ಮ ವಾದವು ಸೂಚಿಸುವಂತೆ ಯಂತ್ರೋಪಕರಣಗಳ ಪರಿಚಯದಿಂದಾಗಿ ಯುರೋಪ್‌ನಲ್ಲಿ ನಿರುದ್ಯೋಗದಲ್ಲಿ ಸ್ಥಿರವಾದ ಹೆಚ್ಚಳವನ್ನು ನಾವು ಕಾಣುವುದಿಲ್ಲ ಏಕೆ? ಇದಕ್ಕೆ ಎರಡು ಸ್ಪಷ್ಟ ಕಾರಣಗಳಿವೆ: ಒಂದು ಯುರೋಪ್‌ನಿಂದ ಬಿಳಿಯರ ವಸಾಹತುಗಳ ಸಮಶೀತೋಷ್ಣ ಪ್ರದೇಶಗಳಿಗೆ ಬೃಹತ್ ವಲಸೆ, ಅಲ್ಲಿ ವಲಸಿಗರು ಸ್ಥಳೀಯ ನಿವಾಸಿಗಳನ್ನು ಹೊರಹಾಕಿದರು ಮತ್ತು ಅವರ ಭೂಮಿಯನ್ನು ಸ್ವಾಧೀನಪಡಿಸಿಕೊಂಡರು. ಇದು ಯುರೋಪಿಯನ್ ಆರ್ಥಿಕತೆಗಳಲ್ಲಿ ನಿರುದ್ಯೋಗದ ಮಟ್ಟವನ್ನು ಕಡಿಮೆ ಮಾಡಿತು ಮತ್ತು ವೇತನ ದರಗಳು ಈ ವಲಸೆ ಇಲ್ಲದಿದ್ದರೆ ಇರಬಹುದಾದ್ದಕ್ಕಿಂತ ಹೆಚ್ಚಾದವು. ಡಬ್ಲ್ಯೂ ಆರ್ಥರ್ ಲೆವಿಸ್ ಪ್ರಕಾರ, "ದೀರ್ಘ ಹತ್ತೊಂಬತ್ತನೇ ಶತಮಾನದಲ್ಲಿ" ಅಂದರೆ ಸಂಪೂರ್ಣ ಹತ್ತೊಂಬತ್ತನೇ ಶತಮಾನದಲ್ಲಿ ಮತ್ತು ಮೊದಲ ವಿಶ್ವ ಯುದ್ಧದ ಹಿಂದಿನ ಅವಧಿಯಲ್ಲಿ, 5 ಕೋಟಿ ಯುರೋಪಿಯನ್ನರು ಕೆನಡಾ, ಯುಎಸ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾಕ್ಕೆ ವಲಸೆ ಹೋದರು.

ಯುರೋಪ್‌ನಲ್ಲಿ ನಿರುದ್ಯೋಗವು ತೀವ್ರವಾಗದಿರಲು ಎರಡನೆಯ ಕಾರಣವೆಂದರೆ ಉಷ್ಣವಲಯದ ವಸಾಹತುಗಳು ಮತ್ತು ಭಾರತ ಮತ್ತು ಚೀನಾದಂತಹ ಅರೆ–ವಸಾಹತುಗಳಲ್ಲಿನ ಬಂಡವಾಳಶಾಹಿ ಪೂರ್ವ ಮಾರುಕಟ್ಟೆಗಳಿಗೆ ಯುರೋಪಿಯನ್ ಸರಕುಗಳ ಹಠಾತ್ ದಾಳಿ. ಅಲ್ಲಿ ಅವು ಸ್ಥಳೀಯ ಕುಶಲಕರ್ಮಿಗಳನ್ನು ಹೊರದಬ್ಬಿದವು. ಇದರಿಂದ ಯುರೋಪಿನಲ್ಲಿನ ನಿರುದ್ಯೋಗವುಈಪ್ರದೇಶಗಳಿಗೆರಫ್ತಾದಂತಾಯಿತು. ಅಂದರೆ ಅಲ್ಲಿ "ವಿಕೈಗಾರೀಕರಣ" (ಅಂದರೆ, ಕೈಗಾರಿಕೆಗಳ ನಾಶಕ್ಕೆ) ಕ್ಕೆ ಕಾರಣವಾಯಿತು ಮತ್ತು ಆದ್ದರಿಂದ ಈ ಬಂಡವಾಳಶಾಹಿ ಪೂರ್ವ ಆರ್ಥಿಕ ವ್ಯವಸ್ಥೆಗಳಲ್ಲಿ ನಿರುದ್ಯೋಗ ಮತ್ತು ಯುರೋಪಿನೊಳಗೆ ಉದ್ಯೋಗ ನಿರ್ಮಾಣದ ಒಂದೇ ಸಮಯದಲ್ಲಿ ನಡೆಯಿತು.

ಮೆಟ್ರೋಪಾಲಿಟನ್ (ಮುಂದುವರೆದ ಪಾಶ್ಚಿಮಾತ್ಯ ದೇಶಗಳ) ಬಂಡವಾಳಶಾಹಿಗೆ ಸಾಮ್ರಾಜ್ಯಶಾಹಿ ಒದಗಿಸಿದ ಈ ನಿರ್ದಿಷ್ಟ ಸುರಕ್ಷತಾ ಕವಾಟಗಳು ದಬ್ಬಾಳಿಕೆಯದ್ದಾಗಿದ್ದುದರಿಂದ ಅಸಹ್ಯಕರವಾಗಿದ್ದವು ಮಾತ್ರವಲ್ಲ, ಈಗ ಇಂತಹ ಸುರಕ್ಷಿತ ಕವಾಟಗಳು ಬಂಡವಾಳಶಾಹಿಯ ಅಂಚಿನಲ್ಲಿರುವ ದೇಶಗಳಿಗೇ ಮಾತ್ರವಲ್ಲ, ಮಹಾನಗರ ಬಂಡವಾಳಶಾಹಿಗೂ ಲಭ್ಯವಿಲ್ಲ, ಪ್ರಭುತ್ವ ವೆಚ್ಚವು ಬಂಡವಾಳಶಾಹಿ ವಿಭಾಗಕ್ಕೆ ಬೇಡಿಕೆಯನ್ನು ಸೃಷ್ಟಿಸಬಹುದು ಮತ್ತು ಆ ಮೂಲಕ ಮಹಾನಗರದೊಳಗೆ ಆಂತರಿಕ ಉದ್ಯೋಗವನ್ನು ಹೆಚ್ಚಿಸಬಹುದು ಎಂದು ಕೇನ್ಸ್ ಭಾವಿಸಿದರು. ಆದರೆ, ನವ ಉದಾರವಾದಿ ಬಂಡವಾಳಶಾಹಿಯ ಅಡಿಯಲ್ಲಿ ಇದು ಸಾಧ್ಯವಿಲ್ಲ ಎಂಬುದು ಪ್ರಸ್ತುತ ದೀರ್ಘಕಾಲದ ಬಿಕ್ಕಟ್ಟಿನಿಂದ ಸ್ಪಷ್ಟವಾಗಿದೆ. ಈ ಪರಿಸ್ಥಿತಿಗಳಲ್ಲಿ, ಬಂಡವಾಳಶಾಹಿ ವಿಭಾಗದೊಳಗೆ ಎ.ಐ.ಯನ್ನು ದೊಡ್ಡ ಪ್ರಮಾಣದಲ್ಲಿ ಅಳವಡಿಸಿದರೆ ಅದು ಮಹಾನಗರಗಳಲ್ಲೂ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಅಂಚಿನಲ್ಲಿರುವ ಪ್ರದೇಶಗಳಲ್ಲೂ ಬೃಹತ್ ನಿರುದ್ಯೋಗವನ್ನು ಉಂಟುಮಾಡುತ್ತದೆ. ಈ ನಿರುದ್ಯೋಗದ ವಿರುದ್ಧ ಈಗ ಹಾಲಿವುಡ್‌ನ ಲೇಖಕರು ಮತ್ತು ಧ್ವನಿ ಕಲಾವಿದರು ಹೋರಾಟಕ್ಕಿಳಿದರು. ಆದರೆ ಇದರಿಂದ ಘೋರ ಭವಿಷ್ಯವನ್ನು ಎದುರಿಸಬೇಕಾದವರು ಅವರು ಮಾತ್ರವೇ ಅಲ್ಲ. ಸಾಮಾನ್ಯ ಕಾರ್ಮಿಕರೂ ಇದರ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಇಂತಹ ಭೀಕರ ಭವಿಷ್ಯ ಸಾಕಾರಗೊಳ್ಳುವುದನ್ನು ತಡೆಯಲು ಸೂಕ್ತವಾದ ಬೇಡಿಕೆಗಳನ್ನು ಎತ್ತುವ ಕಾರ್ಮಿಕ ಹೋರಾಟಗಳನ್ನು ಪ್ರಾರಂಭಿಸುವುದು ಮುಖ್ಯವಾಗಿದೆ.

'ನಾಳಿನ ಕಾಮ್ರೇಡ್'ಗಳು......

ಪುಟ 11 ರಿಂದ

ಲಾಭಕ್ಕಾಗಿ! ಅದು ಗೊತ್ತಿದ್ದರೂ, ಹಾಗೆಯೇ ಮಾಡಬೇಕು!

ರವಿ: ಆ ರೀತಿ ಇದೆಯಾ? ಆದರೆ ಮಾಡೋಣ.

ಗೋಪಾಲ: ಆದರೆ ಆ ಗಂಟೆಯಲ್ಲಿಯೇ ಹೋಗುತ್ತೀಯ. ಇನ್ನು, ಉದ್ಯೋಗ ಬೇಗ ಸಿಗುವುದಿಲ್ಲ. ನಿರುದ್ಯೋಗವೇ! ಈ ನಡುವೆ ಉದ್ಯೋಗಕ್ಕಿಂತ ನಿರುದ್ಯೋಗ ದೊಡ್ಡ ಕೆಲಸ ಎಂದು ಯಾರೋ ಹೇಳಿದರು!

ರವಿ: ಇದೇನು! ನೀನೇನೋ ತಮಾಷೆ ಮಾಡುತ್ತಿದ್ದೀಯ ಅಂದುಕೊಂಡರೆ, ಇದೇನು? ಒಂದು ಹೇಳು. ಉದ್ಯಮವು, ಸರಕುಗಳ ಬೆಲೆಯಲ್ಲಿ ಲಾಭವನ್ನು ಸೇರಿಸದೆ, ಬೆಲೆಯನ್ನು ನಿಗದಿಪಡಿಸಬೇಕಲ್ಲವೇ? ಬೆಲೆ ಯಾವಾಗಲೂ ಹಾಗೆ ಇರುತ್ತದಲ್ಲವೇ?

ಗೋಪಾಲ: ಅದು ಬೆಲೆಯಾಗಿದ್ದರೆ, ಒಂದೇ ಒಂದು ಬೆಲೆ ಇದ್ದರೆ, ಅದು ಬಂಡವಾಳಶಾಹಿ ಉತ್ಪನ್ನ ವಿಧಾನವೇ. ಬೆಲೆ ಆ ರೀತಿ ಇರುತ್ತದೆಯೇ? ಆ ರೀತಿ ಇರುವುದಿಲ್ಲ. ನಿಜವಾಗಿ, 'ಬಂಡವಾಳ' ಎನ್ನುವ ಪದ ಕುರಿತು ಎಷ್ಟು ಶ್ರೇಷ್ಠ ಎನ್ನುತ್ತಾರೆ ಗೊತ್ತಾ? 'ಹಣ'ವು, ತನ್ನೊಂದಿಗೆ ಹೆಚ್ಚು ಹಣವನ್ನು ತರುವ ಕಾರ್ಯದಲ್ಲಿ ಇದ್ದರೆ, ಆಗ ಅದು 'ಹೂಡಿಕೆ'! ಅದರ ಮಾಲೀಕರು ಹೂಡಿಕೆದಾರರು! ಆತನನ್ನು 'ಬೂರ್ಜ್ವಾ' ಎಂದೂ ಕೂಡ ಕರೆಯುತ್ತಾರೆ! ಇಂಗ್ಲಿಷಿನಲ್ಲಿ 'ಕ್ಯಾಪಿಟಲಿಸ್ಟ್'! ಗುಡ್ಡೆ ಪೈಸೆಗಳು, ಹಲವು ರೂಪಾಯಿಗಳನ್ನು ತೆಗೆದುಕೊಂಡು ಬರಬಹುದು. ಅದು ಹೂಡಿಕೆಯ ಕಾರ್ಯ.

ರವಿ: ಹಣವು ತನ್ನೊಡನೆ ಹೇಗೆ ಹೆಚ್ಚು ಹಣ ತೆಗೆದುಕೊಂಡು ಬರುತ್ತದೆ? ಹಣವನ್ನು ಹೆಚ್ಚಿಸುವ ಯಾವುದಾದರೂ ಮಹಿಮೆ ಇದೆಯೇ?


ಗೋಪಾಲ: 'ಲಾಭ' ಎನ್ನುವುದು ಒಂದು ಮಹಿಮೆಯೇ ಅಲ್ಲವೇ?"

(ಮುಂದುವರಿಯುತ್ತದೆ)

ಮಂಗಳೂರ ಸಮಾಚಾರ ಕನ್ನಡ ಸಮಾಚಾರ

ಆರಂಭದಲ್ಲಿ ಮಂಗಳೂರ ಸಮಾಚಾರ, ಆಮೇಲೆ ಕನ್ನಡ ಸಮಾಚಾರವು (ಜುಲೈ 1843–ಫೆಬ್ರುವರಿ 1845) ಎಂಬ ಹೆಸರಿನಲ್ಲಿ, ಮೊದಲು ಬಳ್ಳಾರಿಯಿಂದ ಅನಂತರ ಮಂಗಳೂರಿನಿಂದ ಪ್ರಕಟವಾದ ಕನ್ನಡದ ಮೊದಲ ಪತ್ರಿಕೆಯ ಸಂಪಾದಕರು ಹೆರ್ಮನ್ ಫ್ರೆಡ್ರಿಕ್ ಮ್ಯೋಗ್ಲಿಂಗ್. ಕನ್ನಡ ಪತ್ರಿಕೋದ್ಯಮದಲ್ಲಿ ಈ ಸಾಹಸ ನಡೆದದ್ದು 182 ವರ್ಷಗಳ ಹಿಂದೆ. ಈ ಸಾಹಸವನ್ನು ಸ್ಮರಿಸಿ ಜುಲೈ 1 ರಂದು ಪತ್ರಿಕಾ ದಿನಾಚರಣೆಯನ್ನು ಆಚರಿಸಲಾಗುತ್ತದೆ. ತಿಂಗಳಿಗೆ ಎರಡು ಸಂಚಿಕೆಗಳಂತೆ 1843 ಜುಲೈಯಿಂದ 1845 ಫೆಬ್ರವರಿ ಅವಧಿಯಲ್ಲಿ ಪ್ರಕಟವಾದ ಒಟ್ಟು ಸಂಚಿಕೆಗಳು 40. ಪುಟಗಳು ಆರು ಅಥವಾ ಏಳು. ಈ ನಲುವತ್ತು ಸಂಚಿಕೆಗಳ "ಮಂಗಳೂರ ಸಮಾಚಾರ ಕಂನಡ ಸಮಾಚಾರವು" ಸಂಪುಟವನ್ನು ಸಂಪಾದಿಸಿದವರು ಡಾ.ಸಾಯಿಗೀತಾ ಮತ್ತು ಬೆನೆಟ್ ಜಿ. ಅಮ್ಮನ್ನ. ಪ್ರಕಟನೆ ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ. ನಾನು ಮೊದಲಿಗೆ ಹೇಳಬೇಕಾದ ಮಾತು, ಇದೊಂದು ಅತ್ಯಂತ ಉಪಯುಕ್ತವಾದ ಆಕರ ಗ್ರಂಥ. ಅತ್ಯಂತ ತಾಳ್ಮೆಯಿಂದ ಶ್ರಮವಹಿಸಿ ಈ ಸಂಪುಟವನ್ನು ತಯಾರಿಸಿಕೊಟ್ಟ ಈ ಇಬ್ಬರನ್ನು ಭಾಷೆ, ಸಾಹಿತ್ಯ, ಮಾಧ್ಯಮ, ರಾಜಕೀಯ, ಭೌಗೋಳಿಕ, ಆರ್ಥಿಕ, ಆಡಳಿತ ಮತ್ತು ಇತಿಹಾಸ ಹೀಗೆ ವಿವಿಧ ಶಿಸ್ತುಗಳ ವಿದ್ಯಾರ್ಥಿಗಳು ಮತ್ತು ಸಂಶೋಧಕರ ಪರವಾಗಿ ಅಭಿನಂದಿಸುತ್ತೇನೆ.

ಪತ್ರಿಕೆಯ ಸಂಚಿಕೆಗಳನ್ನು


ಮಂಗಳೂರ ಸಮಾಚಾರ

ಸಂಪಾದಿಸಿರುವುದರ ಜೊತೆಗೆ ಆರಂಭದಲ್ಲಿ ಸಂಪಾದಕರು ಬರೆದಿರುವ ಪ್ರವೇಶಿಕೆರೂಪದ ಅಧ್ಯಯನಪೂರ್ಣ ಪ್ರಸ್ತಾವನೆ ಈ ಸಂಪುಟದ ಶೈಕ್ಷಣಿಕ ಮಹತ್ವವನ್ನು ಹೆಚ್ಚಿಸಿದೆ. ಅದರಲ್ಲಿ ಮುದ್ರಣ ಮತ್ತು ಪತ್ರಿಕೋದ್ಯಮದ ಇತಿಹಾಸ, ಪ್ರಸ್ತುತ ಸಂಪುಟದ ಮಹತ್ವ, ಸಂಪಾದನೆಯ ವಿಧಾನ, ಸುದ್ದಿಗಳ ವಿಂಗಡಣೆ, ಪತ್ರಿಕೆಗಳ ವಸ್ತುವೈವಿಧ್ಯ ಮತ್ತು ಭಾಷಾ ವೈಶಿಷ್ಟ್ಯ, ಅನುವಾದದ ಕ್ರಮಗಳು ಹೀಗೆ ಮುಖ್ಯ ವಿಷಯಗಳ ವಿವರಗಳಿವೆ, ವಿಶ್ಲೇಷಣೆಗಳಿವೆ. ಅನುಬಂಧದಲ್ಲಿರುವ ಮೊಗ್ಲಿಂಗ್ ಕೃತಿಗಳ ಪಟ್ಟಿ, ಅವರ ಬದುಕಿನ ಘಟನೆಗಳ ವಿವರಗಳು, ಬಾಸೆಲ್ ಮಿಶನ್ ಮುದ್ರಿತ ಪತ್ರಿಕೆಗಳು ಮತ್ತು ಅಪೂರ್ವ ಛಾಯಾಚಿತ್ರಗಳು ಸಂಪಾದಿತ ಸಂಪುಟಕ್ಕೆ ಸಮಗ್ರತೆಯನ್ನು ತಂದಿವೆ.

ಮಂಗಳೂರ ಮತ್ತು ಕನ್ನಡ ಸಮಾಚಾರ ಪತ್ರಿಕೆಯ ಸಂಚಿಕೆಗಳ ವಿಷಯ ವ್ಯಾಪ್ತಿ ಮತ್ತು ಸ್ವಾರಸ್ಯ ಸುದ್ದಿಗಳಿಗೆ ಸಂಬಂಧಿಸಿದಂತೆ ಕೆಲವು ಮಾತುಗಳನ್ನು ಪ್ರಸ್ತಾವಿಸುತ್ತೇನೆ. ಮೊದಲ ಸಂಚಿಕೆಯ ಸಂಪಾದಕೀಯವನ್ನು ಪೀಠಿಕೆ ಎಂದು ಬರೆಯಲಾಗಿದೆ. ಮುಂದಿನ ಸಂಚಿಕೆಗಳಲ್ಲಿ ಸುದ್ದಿಗಳನ್ನು ವಿಷಯ ಎಂದು ಸೂಚಿಸಲಾಗಿದೆ. ಪತ್ರಿಕೆಯನ್ನು "ಈ ಕಾಗದವು" ಎಂದಿದ್ದಾರೆ. "ಯೀ ಕಾಗದವು ಕೊತ್ವಾಲಕಟ್ಟೆಗೆ ಯೆದುರಾಗಿರುವ ಯೊಹಾನ್ ಅಪ್ಪಂಣನ ಮನೆಯಲ್ಲಿ ಕ್ರಯಕ್ಕೆ ಕೊಡಲ್ಪಡುವದು", "ಯೀ ಕಾಗದ ಕೊತ್ವಾಲಕಟ್ಟೆ ಎದುರಿನಲ್ಲಿಯೂ ತಾಲುಕು ಕಚೇರಿ ಹತ್ತರ ಯಿರುವ ಯಿಂಗ್ಲಿಷ್ ಸಾಲೆಯಲ್ಲಿಯೂ ಶಿಕ್ಕುವದು", "ಟಪಾಲ ದಸ್ತೂರಿ ಕೂಡಿ ಕ್ರಯ 2 ದುಡ್ಡು" ಹೇಗಿದೆ ನೋಡಿ ಪತ್ರಿಕೆಯ ಮಾರಾಟ ವ್ಯವಸ್ಥೆ!

ಇನ್ನು ಕೆಲವು ಸುದ್ದಿಗಳ ವಿವರ. ಸರಕಾರದ ನಿರೂಪಗಳು, ಕತೆ, ದಾಸರ ಪದಗಳು, ವೂರ ವರ್ತಮಾನ, ಕಾಬೂಲ್ ದೇಶದಲ್ಲಿ ಯುದ್ಧ, ಗಾದೆಗಳು, ಕ್ರಿಮಿನಲ್ ಮತ್ತು ಶಿವಿಲ್ ಕೋರ್ಟ್ ವಿಧಿಸಿದ ಶಿಕ್ಷೆಗಳ ವಿವರ, ಮಳೆ, ಶಿಂದೂ ದೇಶ, ಮುಂಬೈ ಕಳ್ಳರ ಸಮಾಚಾರ, ಯಿಂಗ್ಲಂಡ್ ದೇಶದ ವೊಟ್ಟು ಆದಾಯ ವೆಚ್ಚವು, ಕಂಪೆನಿಯವರ ಪೂರ್ವ ಚರಿತ್ರೆ, ದಾವೀದನ ಕೀರ್ತನೆಗಳ ಮಾತು, ಉದ್ಯೋಗಸ್ಥರ ವಿವರ, ಲಾಹೋರ ಸಂಸ್ಥಾನ, ಚೈನಾ ದೇಶ, ವರ್ತಮಾನ, ಕಲ್ಲಿಕೋಟಿನ ವರ್ತಮಾನ, ಖಾನೆಶುಮಾರಿ ಲೆಕ್ಕ, ಮಿಡಿತೆಗಳು, ಜೀನಸಿನ ಪಟ್ಟಿ, ಪ್ರಿನ್ಸಿಪಾಲ್ ಕಲೆಕಟರ ಕಛೇರಿ, ಯಿಂಗ್ಲಂಡ್ ದೇಶದ ಐಶ್ವರ್ಯ ಕಥೆ, ಭೂಗೋಳದ ಸಾರವು (ಹಲವು ಸಂಧಿಗಳಿವೆ), ಮೈಲಗಜ್ಜಿಗೆ ಅಭ್ಯಂತರಿಸುವ ಶಿತ್ಲೆಯು, ಹಿಂದು ದೇಶದ ಸಂಚಾರದ ಕಥೆಯು(ಹಲವು ಭಾಗಗಳಿವೆ), ಮಹಿಸೂರು, ಸಾಲ್ಟ್ ಡ್ಯೂಟೀಸ್, ಇಂಗ್ಲಾಂಡ್ ದೇಶದ ರಾಣಿಯು 4ನೆ ಮಗುವನ್ನು ಹೆತ್ತದ್ದು, ವಿದ್ಯಾಲಾಭವು, ದೇಶದ ರೇವನಿ ಲೆಕ್ಕ, ವಿಲಾಯತಿ ವರ್ತಮಾನ, The Miracles of Krishna compared with those of Jesus Christ ಮತ್ತು ಅದರ ಕನ್ನಡ ಭಾಷಾಂತರ, ಬ್ರಾಹ್ಮಣರ ಧರ್ಮವು ಹಿಂದುದೇಶದಲ್ಲಿ ಪ್ರಬಲವಾದ ಕಾಲದ ವಿಷಯವು....ಹೀಗೆ ಬಿಡಿ ಬರಹಗಳಿವೆ. ಕೆಲವು ಬರಹಗಳು ಹಲವು ಕಂತುಗಳಲ್ಲಿವೆ. ಓದುಗರಿಗೆ ಮಾಹಿತಿಗಳನ್ನು ಕೊಡುವುದು ಮಾತ್ರವಲ್ಲ ಅದು ಕುತೂಹಲ ಹುಟ್ಟಿಸುವ ರೀತಿಯನ್ನು ಗಮನಿಸಬೇಕು. ಕೆಲವು ಶಿಕ್ಷೆಯ ವಿವರಗಳು ಕುತೂಹಲಕಾರಿಯಾಗಿವೆ.

ಕನ್ನಡ ಪತ್ರಿಕೆಗಳು ಮತ್ತು ಪತ್ರಿಕೋದ್ಯಮದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನಕ್ಕೆ ಈ ಸಂಪುಟದ ಕೊಡುಗೆ ಅಪಾರವಾಗಿದೆ. ಈ ಕೃತಿಯನ್ನು ಭಾಷೆ, ಸಾಹಿತ್ಯ, ಪತ್ರಿಕೋದ್ಯಮ, ಇತಿಹಾಸ, ನ್ಯಾಯಾಂಗ, ಆಡಳಿತ, ಒಟ್ಟು ಚಾರಿತ್ರಿಕ ಸಾಂಸ್ಕೃತಿಕ ಅಧ್ಯಯನಾಸಕ್ತರು ಓದಬೇಕು.

–ಡಾ. ಕೆ. ಚಿನ್ನಪ್ಪಗೌಡ

ಲಿಥೀಯಂಗಾಗಿ ಈ ದಂಗೆಯೇ..... ಪುಟ 16 ರಿಂದ

ಬೊಲಿವಿಯದ ಮಿಲಿಟರಿ ದಂಗೆಗಳ ಹಿಂದೆ ಯು. ಎಸ್. ಮತ್ತು ಯುರೋಪಿಯನ್ ಕಂಪನಿಗಳ ಸರಕಾರಗಳ ಕುಮ್ಮಕ್ಕು ಇರಬಹುದು ಎಂದು ಊಹಿಸಲಾಗಿದೆ.

ವಿದ್ಯುತ್ ವಾಹನಗಳ ಮತ್ತು ಇತರ ಹಲವು ಟೆಕ್ ಕ್ಷೇತ್ರಗಳ ದೈತ್ಯ ಉದ್ಯಮಿ ಎಲೋನ್ ಮಸ್ಕ್ ಅವರು 2020 ರಲ್ಲಿ ಟ್ವಿಟರ್ ಪೋಸ್ಟ್ ನಲ್ಲಿ “ನಮಗೆ ಬೇಕಾದಾಗ ನಾವು ದಂಗೆ ಮಾಡುತ್ತೇವೆ!” ಎಂದು ಬೊಲಿವಿಯಾದ ಬಗ್ಗೆ ಹೇಳಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಈಗ ಬೊಲಿವಿಯದ ಬಳಿ ಲಿಥೀಯಂ ಸಂಸ್ಕರಿಸುವ ಸಾಮರ್ಥ್ಯ ಬಹಳ ಕಡಿಮೆಯಿದೆ. ಹಾಗಾಗಿ ಲೀಥೀಯಂ ಖನಿಜ ರಫ್ತಿನ ಮೇಲೆ ಅದು ಅವಲಂಬಿಸಬೇಕಾಗಿದೆ. ಆದರೆ 2023 ರಲ್ಲಿ ಚೀನಾದೊಂದಿಗೆ ಸಹಿ ಮಾಡಿದ ಪಾಲುದಾರಿಕೆಗಳು ಈ ಪರಿಸ್ಥಿತಿಯನ್ನು ಬದಲಾಯಿಸಬಹುದು. ಇದು ಬೊಲಿವಿಯನ್ ಆರ್ಥಿಕತೆಗೆ ಹೊಸ ಹಾದಿಗಳನ್ನು ತೆರೆಯುತ್ತದೆ ಎಂದು ಪರಿಣತರು ಹೇಳಿದ್ದಾರೆ.

"ಜನವರಿಯಲ್ಲಿ, 50,000 ಟನ್ ಉತ್ಪಾದಿಸುವ ನಿರೀಕ್ಷೆಯಿರುವ ಎರಡು ಕಾರ್ಖಾನೆಗಳನ್ನು ನಿರ್ಮಿಸಲು ಬೊಲಿವಿಯಾದ ಸರ್ಕಾರಿ ಸ್ವಾಮ್ಯದ ಕಂಪನಿ ಯಾಸಿಮಿಯೆಂಟೋಸ್ ಡಿ ಲಿಟಿಯೊ ಬೊಲಿವಿಯಾನೊ (YLB) ಜಂಟಿ ಉದ್ಯಮದಲ್ಲಿ ಜಾಗತಿಕ ಲಿಥಿಯಂ ಬ್ಯಾಟರಿ ಅಗ್ರಗಾಮಿ ಚೀನಾದ CATL ನಿಂದ 1 ಶತಕೋಟಿ ಡಾಲರುಗಳ ಆರಂಭಿಕ ಹೂಡಿಕೆಯನ್ನು ಘೋಷಿಸಲಾಯಿತು. ಎರಡು ಕಾರ್ಖಾನೆಗಳು ವರ್ಷಕ್ಕೆ 50 ಸಾವಿರ ಲಿಥಿಯಂ ಕಾರ್ಬೋನೇಟ್ ಉತ್ಪಾದನೆ ಮಾಡಲಿವೆ. ಒಟ್ಟು ಹೂಡಿಕೆಯು US$9.9 ಶತಕೋಟಿಯನ್ನು ತಲುಪಬಹುದು ಎಂದು ಹೇಳಲಾಗಿದೆ.

"ಜೂನ್ ನಲ್ಲಿ, YLB 1.4 ಶತಕೋಟಿ ಡಾಲರುಗಳನ್ನು ತಲುಪುವ ಎರಡು ಇತರ ಒಪ್ಪಂದಗಳಿಗೆ ಸಹಿ ಹಾಕಿತು: ಒಂದು ಚೀನಾದ ಸಿಟಿಕ್ ಗುವಾನ್ ಗ್ರೂಪ್ ನೊಂದಿಗೆ ಮತ್ತು ಇನ್ನೊಂದು ರಷ್ಯಾದ ಯುರೇನಿಯಂ ಒನ್ ಗ್ರೂಪ್ ನೊಂದಿಗೆ (ರಷ್ಯಾದ ಪರಮಾಣು ದೈತ್ಯ ರೊಸಾಟಮ್‌ನ ಅಂಗಸಂಸ್ಥೆ). ಇನ್ನೂ ಎರಡು ಲಿಥಿಯಂ ಕಾರ್ಬೋನೇಟ್ ಉತ್ಪಾದನಾ ಘಟಕಗಳು ವರ್ಷಕ್ಕೆ 45,000 ಟನ್ ಗಳನ್ನು ತಲುಪಬಹುದು ಎಂದೂ ಹೇಳಲಾಗಿದೆ.

ಜನವರಿ ಮತ್ತು ನವೆಂಬರ್ 2022 ರ ನಡುವೆ ಬೊಲಿವಿಯಾ ಕೇವಲ 635.5 ಟನ್ ಲಿಥಿಯಂ ಕಾರ್ಬೋನೇಟ್ ಅನ್ನು ಉತ್ಪಾದಿಸಿದೆ. ಈ ಹೊಸ ಒಪ್ಪಂದಗಳೊಂದಿಗೆ, [ಲಿಥಿಯಂ ಕಾರ್ಬೋನೇಟ್] ಉತ್ಪಾದನೆಯು 2025 ರ ವೇಳೆಗೆ ಸುಮಾರು 100,000 ಟನ್ ಗಳನ್ನು ತಲುಪಬಹುದು.

ಇದರ ಜೊತೆಗೆ, ಸಿಟಿಗ್ ಗುವಾನ್ ಬೊಲಿವಿಯಾದಲ್ಲಿ ಲಿಥಿಯಂ ಬ್ಯಾಟರಿಗಳು ಮತ್ತು ಎಲೆಕ್ಟ್ರಿಕ್ ವಾಹನಗಳ ಉತ್ಪಾದನೆಯಲ್ಲಿ ಹೂಡಿಕೆ ಮಾಡುವ ಬಗ್ಗೆ ಯೋಚಿಸುತ್ತಿದೆ.

ಈ ಒಪ್ಪಂದಗಳು ಚೀನಾ–ರಷ್ಯಾಗಳ ಟೆಕ್ ಪ್ರಾಬಲ್ಯದ ಬಗ್ಗೆ ಆತಂಕಿತರಾಗಿರುವ ಎಲೊನ್ ಮಸ್ಕ್ ನಂತಹ ಯು.ಎಸ್–ಯುರೋಪಿಯನ್ ವಿದ್ಯುತ್ ವಾಹನ ಮತ್ತಿತರ ಕ್ಷೇತ್ರಗಳ ದೈತ್ಯ ಟೆಕ್ ಉದ್ಯಮಗಳಿಗೆ ಆತಂಕಕಾರಿಯಾಗಿವೆ. ಇದು ಈ ಮಿಲಿಟರಿ ದಂಗೆಗೆ ಪ್ರೇರಣೆಯಾಗಿರಬಹುದು.

NEW No. MAG(3)/NPP/205/2021-2022
JANASHAKTHI KANNADA VARA PATRIKE July 1-7, 2024 Price: Rs. 10/- Date of Publication: 28 June 2024 RNI No. KARKAN /2006/17926 Posted on 04-07-2024
Posted at BG PSO, BG - 560026 **Posted at Periodical Rate -** Rs. 2

ಬೊಲಿವಿಯದ ಜನ ಮತ್ತೊಂದು ಮಿಲಿಟರಿ ದಂಗೆಯನ್ನು ಸೋಲಿಸಿದ್ದಾರೆ, ಲಿಥೀಯಂಗಾಗಿ ಈ ದಂಗೆಯೇ?



ಬೊಲಿವಿಯಾದ ಜನರು ಮಿಲಿಟರಿ ದಂಗೆಯನ್ನು ಯಶಸ್ವಿಯಾಗಿ ಸೋಲಿಸಿದ್ದಾರೆ! ಅಧ್ಯಕ್ಷ ಲೂಯಿಸ್ ಆರ್ಸ್ ಅವರ ಪ್ರಜಾಪ್ರಭುತ್ವ ಸರ್ಕಾರವನ್ನು ರಕ್ಷಿಸಲು ಜನರ ಚಳುವಳಿಗಳು ಸಜ್ಜುಗೊಂಡವು. ಇವೊ ಮೊರೇಲ್ಸ್ ಅವರನ್ನು ಅಧ್ಯಕ್ಷ ಪದವಿಯಿಂದ ಹೊರಹಾಕಿದ್ದ ದಂಗೆಯ ಕೇವಲ ಐದು ವರ್ಷಗಳ ನಂತರ ಇದು ನಡೆದಿದೆ. ದಂಗೆ-ವಿರೋಧಿ ಪ್ರತಿಭಟನೆಗಳಿಗೆ ಒಂದು ವರ್ಷದ ಪ್ರತಿರೋಧ ಮತ್ತು ಹಿಂಸಾತ್ಮಕ ದಮನದ ನಂತರ, ಬೊಲಿವಿಯನ್ ಜನರು ಪ್ರಜಾಪ್ರಭುತ್ವವನ್ನು ಪುನಃಸ್ಥಾಪಿಸಿದ್ದರು ಮತ್ತು ಲೂಯಿಸ್ ಆರ್ಸ್ ಅವರನ್ನು ಆಯ್ಕೆ ಮಾಡಿದ್ದರು ಎಂದು ನೆನಪಿಸಿಕೊಳ್ಳಬಹುದು. ಲಿಥಿಯಂ ಉತ್ಪಾದಿಸಲು ಚೀನಾ ಮತ್ತು ರಷ್ಯಾ ಗಳ ಜತೆ ಬೊಲಿವಿಯಾ ಮಾಡಿಕೊಂಡಿರುವ ಒಪ್ಪಂದಗಳು ದಂಗೆಯ ಪ್ರಯತ್ನಗಳಿಗೆ ಕಾರಣವಾಗಿರಬಹುದು ಎಂದು ಊಹಿಸಲಾಗಿದೆ.

ಜಗದ ಸುತ್ತ

ವಸಂತರಾಜ ಎನ್.ಕೆ.

ಬೊಲಿವಿಯನ್ ಅಧ್ಯಕ್ಷ ಲೂಯಿಸ್ ಆರ್ಸ್ ಬುಧವಾರ ಜೂನ್ 26 ರ ಮಧ್ಯಾಹ್ನ ಬೊಲಿವಿಯಾದ ಜನರನ್ನು ಉದ್ದೇಶಿಸಿ ಮಿಲಿಟರಿ ದಂಗೆಯ ಪ್ರಯತ್ನವನ್ನು ಸೋಲಿಸಲಾಗಿದೆ ಎಂದು ಘೋಷಿಸಿದರು.

ಜೂನ್ 26 ರ ಮಧ್ಯಾಹ್ನ, ರಾಜಧಾನಿ ಲಾ ಪಾಜ್ ನ ಮಧ್ಯಭಾಗದಲ್ಲಿ ಜನರಲ್ ಜುವಾನ್ ಜುನಿಗಾ ಅವರ ಆದೇಶದ ಮೇರೆಗೆ ನೂರಾರು ಮಿಲಿಟರಿ ಸಿಬ್ಬಂದಿ ಸಜ್ಜುಗೊಂಡರು ಮತ್ತು ಮಂತ್ರಿ ಸಭೆಯ ಮೊದಲು ಕ್ವೆಮಾಡೊ ಅರಮನೆಯನ್ನು (ಸರಕಾರಿ ಅಧ್ಯಕ್ಷೀಯ ಬಂಗಲೆ) ಸುತ್ತುವರೆದರು. ಅವರು ಟ್ಯಾಂಕ್ ಗಳಿಂದ ಅರಮನೆಯ ಮುಖ್ಯ ಬಾಗಿಲನ್ನು ಒಡೆದು ಬಲವಂತವಾಗಿ ಪ್ರವೇಶಿಸಲು ಪ್ರಯತ್ನಿಸಿದರು.

2019 ರ ಇವೊ ಮೊರೇಲ್ಸ್ ವಿರುದ್ಧದ ದಂಗೆಯಲ್ಲಿ ಭಾಗಿಯಾಗಿದ್ದಕ್ಕಾಗಿ ಜೈಲಿನಲ್ಲಿರುವ ಜೈನ್ನೈನ್ ಅನೆಜ್ ಮತ್ತು ಲೂಯಿಸ್ ಫರ್ನಾಂಡೋ ಕ್ಯಾಮಾಚೊ ಸೇರಿದಂತೆ ಬೊಲಿವಿಯಾದ "ರಾಜಕೀಯ ಕೈದಿಗಳನ್ನು" ಬಿಡುಗಡೆ ಮಾಡುತ್ತಾರೆ ಎಂದು ಜನರಲ್ ಜುನಿಗಾ ನಂತರ ಘೋಷಿಸಿದರು.

ಬೊಲಿವಿಯಾದ ಮಾಜಿ ಅಧ್ಯಕ್ಷ ಇವೊ ಮೊರೇಲ್ಸ್ ತಕ್ಷಣವೇ ಈ ಬೆಳವಣಿಗೆಗಳ ಬಗ್ಗೆ ಎಚ್ಚರಿಸಿದರು ಮತ್ತು ಪ್ರಜಾಪ್ರಭುತ್ವದ ರಕ್ಷಣೆಗಾಗಿ ಸಜ್ಜುಗೊಳಿಸಲು ಬೊಲಿವಿಯನ್ ಜನರಿಗೆ ಕರೆ ನೀಡಿದರು. ಸಾಂವಿಧಾನಿಕ ಆದೇಶವನ್ನು ನಾಶಮಾಡುವ ಮಿಲಿಟರಿಯ ಪ್ರಯತ್ನವನ್ನು ತಾನು ತಿರಸ್ಕರಿಸಿದ್ದೇನೆ ಮತ್ತು ಆರ್ಸ್ ಮತ್ತು ಇವೊ ಎಂದು ಹೇಳಿದರು.

ಬೊಲಿವಿಯಾದ ವಿದೇಶಾಂಗ ಸಚಿವೆ ಸೆಲಿಂಡಾ ಸೋಸಾ ಅವರು ವೀಡಿಯೊ ಸಂದೇಶದಲ್ಲಿ ಹೀಗೆಂದರು:, "ಬೊಲಿವಿಯಾ ದೇಶದ ಪ್ರಜಾಪ್ರಭುತ್ವ, ಶಾಂತಿ ಮತ್ತು ಭದ್ರತೆಯ ಮೇಲೆ ದಾಳಿ ಮಾಡುವ ಬೊಲಿವಿಯನ್ ಸೈನ್ಯದ ಕೆಲವು ಘಟಕಗಳ ಅನಿಯಮಿತ ಸಜ್ಜುಗೊಳಿಸುವಿಕೆಯನ್ನು ಸರಕಾರ ಖಂಡಿಸುತ್ತದೆ. ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಗೌರವಿಸುವುದನ್ನು ಖಚಿತಪಡಿಸಿಕೊಳ್ಳಲು ಬೊಲಿವಿಯನ್ ಜನ ಮತ್ತು ಅಂತರರಾಷ್ಟ್ರೀಯ ಸಮುದಾಯಕ್ಕೆ ನಾವು ಕರೆ ನೀಡುತ್ತೇವೆ."

ಸೈನ್ಯವು ಅರಮನೆಯ ಮೇಲೆ ದಾಳಿ ಮಾಡಲು ಪ್ರಯತ್ನಿಸಿದಾಗ, ನೂರಾರು ಬೊಲಿವಿಯನ್ ಜನರು ಪ್ರಜಾಪ್ರಭುತ್ವವನ್ನು ಗೌರವಿಸಬೇಕು ಮತ್ತು ಸೈನ್ಯದ ತುಕಡಿಗಳು ಹಿಂತೆಗೆಯಬೇಕು ಎಂದು ಅಣಿನೆರೆಯಲು ಪ್ರಾರಂಭಿಸಿದರು. ಸಾಮೂಹಿಕ ಸಂಘಟನೆಗಳು, ಟ್ರೇಡ್ ಯೂನಿಯನ್‌ಗಳು ಮತ್ತು ಸಾಮಾನ್ಯ ಜನರೊಂದಿಗಿನ ಈ ಪ್ರತಿಭಟನೆಗಳು ಮಿಲಿಟರಿ ಪೊಲೀಸ್ ಅಧಿಕಾರಿಗಳಿಂದ ಭಾರೀ ದಬ್ಬಾಳಿಕೆಯನ್ನು ಎದುರಿಸಿದವು, ಅವರು ಅಶ್ರುವಾಯು ಹಾರಿಸಿದರು ಮತ್ತು ಪ್ಲಾಜಾ ಮುರಿಲ್ಲೊಗೆ ಪ್ರವೇಶವನ್ನು ನಿರ್ಬಂಧಿಸಿದರು.

ಸರಕಾರದ ಪ್ರಜಾಪ್ರಭುತ್ವಕ್ಕೆ ಅಣಿನೆರೆದ ಜನ ಸಂಘಟನೆಗಳು

20 ಲಕ್ಷಕ್ಕಿಂತಲೂ ಹೆಚ್ಚು ಕಾರ್ಮಿಕರನ್ನು ಪ್ರತಿನಿಧಿಸುವ ಬೊಲಿವಿಯನ್ ವರ್ಕರ್ಸ್ ಸೆಂಟ್ರಲ್' (COB) ಅನಿರ್ದಿಷ್ಟ ಸಾರ್ವತ್ರಿಕ ಮುಷ್ಕರವನ್ನು ಘೋಷಿಸಿತು ಮತ್ತು "ಸಾಂವಿಧಾನಿಕ ಕ್ರಮವನ್ನು ಹಾಗೂ ಬೊಲಿವಿಯಾದಲ್ಲಿ ನಮ್ಮ ಕಾನೂನುಬದ್ಧವಾಗಿ ಸ್ಥಾಪಿಸಲಾದ ಸರ್ಕಾರವನ್ನು ರಕ್ಷಿಸಲು ಮತ್ತು ಪುನಃಸ್ಥಾಪಿಸಲು ಲಾ ಪಾಜ್ ನಗರಕ್ಕೆ ಎಲ್ಲಾ ಯೂನಿಯನ್ ಮತ್ತು ಸಾಮಾಜಿಕ ಸಂಘಟನೆಗಳ ಸದಸ್ಯರು ಅಣಿ ನೆರೆಯಬೇಕು" ಎಂದು ಕರೆ ನೀಡಿತು.

ಅರಮನೆಯ ಮಿಲಿಟರಿ ಸುತ್ತುವರಿದ ಒಂದು ಗಂಟೆಯ ನಂತರ, ಬೊಲಿವಿಯನ್ ಅಧ್ಯಕ್ಷ ಲೂಯಿಸ್ ಆರ್ಸ್ ಅವರು ಜುನಿಗಾ ಬದಲಿಗೆ ಜೋಸ್ ಸ್ಯಾಂಚೆಜ್ ಅವರನ್ನು ಹೊಸ ಮಿಲಿಟರಿ ಕಮಾಂಡರ್ ಎಂದು ಹೆಸರಿಸಲು ಪತ್ರಿಕಾಗೋಷ್ಠಿಯನ್ನು ನಡೆಸಿದರು. ಬೊಲಿವಿಯನ್ ಜನರ ಯಾವುದೇ ರಕ್ತಪಾತವನ್ನು ತಪ್ಪಿಸಲು ಕೇಂದ್ರಕ್ಕೆ ಸಜ್ಜುಗೊಂಡ ಮಿಲಿಟರಿ ಸಿಬ್ಬಂದಿಗೆ ತಮ್ಮ ನಿಲ್ದಾಣಗಳಿಗೆ ಮರಳಲು ಸ್ಯಾಂಚೆಜ್ ಆದೇಶಿಸಿದರು ಮತ್ತು ಅವರು ಲೂಯಿಸ್ ಆರ್ಸ್ ಅವರ ಕಾನೂನುಬದ್ಧ ಮತ್ತು ಸಾಂವಿಧಾನಿಕ ಸರ್ಕಾರವನ್ನು ಬೆಂಬಲಿಸುವುದಾಗಿ ದೃಢಪಡಿಸಿದರು.

ಅಧ್ಯಕ್ಷ ಆರ್ಸ್ ಅರಮನೆಯಲ್ಲಿ ದಂಗೆಯ ಕಮಾಂಡರ್ ಜುನಿಗಾ ನನ್ನು ಮುಖಾಮುಖಿಯಾಗಿ ಎದುರಿಸುತ್ತಿರುವ ಪ್ರಜಾಪ್ರಭುತ್ವವನ್ನು ಗೌರವಿಸುವಂತೆ ದೃಢವಾಗಿ ಹೇಳುವ ವೀಡಿಯೊ ಕೂಡ ಹೊರಹೊಮ್ಮಿತು.

ಅಧ್ಯಕ್ಷ ಆರ್ಸ್ ಮತ್ತು ಹೊಸ ಮಿಲಿಟರಿ ಮುಖ್ಯಸ್ಥ ಸ್ಯಾಂಚೆಝ್ ಅವರ ಘೋಷಣೆಯ ಸ್ವಲ್ಪ ಸಮಯದ ನಂತರ, ಆರಂಭದಲ್ಲಿ ಪ್ಲಾಜಾವನ್ನು ನಿರ್ಬಂಧಿಸಿದ ಮತ್ತು ಅರಮನೆಯನ್ನು ಸುತ್ತುವರೆದಿರುವ ಟ್ಯಾಂಕ್ ಗಳು ಹಿಂತೆಗೆದುಕೊಳ್ಳಲು ಪ್ರಾರಂಭಿಸಿದವು. ದಂಗೆಯ ಪ್ರಯತ್ನವನ್ನು ತಿರಸ್ಕರಿಸಿ ಅಧ್ಯಕ್ಷ ಆರ್ಸ್ ಗೆ ಬೆಂಬಲವನ್ನು ದೃಢೀಕರಿಸಲು ಸಾವಿರಾರು ಜನರು ಪ್ರದೇಶವನ್ನು ಸುತ್ತುವರೆದರು. "ಆರ್ಸ್ ನೀವು ಒಬ್ಬಂಟಿಯಲ್ಲ! ಪ್ರಜಾಪ್ರಭುತ್ವ ಜಿಂದಾಬಾದ್!" ಎಂದು ಅವರು ಘೋಷಿಸಿದರು.



ಬೊಲಿವಿಯಾದಲ್ಲಿ ದಂಗೆಯ ಪ್ರಯತ್ನವು ಅಂತರರಾಷ್ಟ್ರೀಯ ಪರಿಣಾಮಗಳನ್ನು ಬೀರಿತು. ಲ್ಯಾಟಿನ್ ಅಮೇರಿಕಾ ಮತ್ತು ಕೆರಿಬಿಯನ್ ಆದ್ಯಂತ ರಾಜಕೀಯ ನಾಯಕರು ಬೊಲಿವಿಯನ್ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಸೈನ್ಯದ ಒಂದು ಭಾಗದ ಪ್ರಯತ್ನವನ್ನು ತೀವ್ರವಾಗಿ ತಿರಸ್ಕರಿಸಿದರು ಮತ್ತು ಪ್ರಯತ್ನದ ತ್ವರಿತ ಸೋಲನ್ನು ಸಂಭ್ರಮಿಸಿದರು.

ಇವೊ ಮೊರೇಲ್ಸ್ ಅವರನ್ನು ಅಧ್ಯಕ್ಷ ಪದವಿಯಿಂದ ಹೊರಹಾಕಿದ್ದ ದಂಗೆಯ ಕೇವಲ ಐದು ವರ್ಷಗಳ ನಂತರ ಇದು ನಡೆದಿದೆ. ದಂಗೆ-ವಿರೋಧಿ ಪ್ರತಿಭಟನೆಗಳಿಗೆ ಒಂದು ವರ್ಷದ ಪ್ರತಿರೋಧ ಮತ್ತು ಹಿಂಸಾತ್ಮಕ ದಮನದ ನಂತರ, ಬೊಲಿವಿಯನ್ ಜನರು ಪ್ರಜಾಪ್ರಭುತ್ವವನ್ನು ಪುನಃಸ್ಥಾಪಿಸಿದರು ಮತ್ತು ಲೂಯಿಸ್ ಆರ್ಸ್ ಅವರನ್ನು ಆಯ್ಕೆ ಮಾಡಿದರು ಎಂದು ಹಲವರು ನೆನಪಿಸಿಕೊಂಡರು.

ಹೊಂಡುರಾಸ್ ನ ಅಧ್ಯಕ್ಷರು ಮತ್ತು ಲ್ಯಾಟಿನ್ ಅಮೇರಿಕನ್ ಮತ್ತು ಕೆರಿಬಿಯನ್ ರಾಜ್ಯಗಳ ಸಮುದಾಯದ (CELAC) ಅಧ್ಯಕ್ಷರಾದ ಕ್ಸಿಯಮಾರಾ ಕ್ಯಾಸ್ಟ್ರೋ "ಬೊಲಿವಿಯಾದಲ್ಲಿ ಪ್ರಜಾಪ್ರಭುತ್ವಕ್ಕೆ ಬೆದರಿಕೆ ಹಾಕುವ ಫ್ಯಾಸಿಸಂ ಅನ್ನು ಖಂಡಿಸಲು ಮತ್ತು ನಾಗರಿಕ ಶಕ್ತಿ ಮತ್ತು ಸಂವಿಧಾನಗಳನ್ನು ಗೌರವಿಸುವಂತೆ ಒತ್ತಾಯಿಸಲು" CELAC ಸದಸ್ಯ ರಾಷ್ಟ್ರಗಳ ಎಲ್ಲಾ ಅಧ್ಯಕ್ಷರಿಗೆ ಕರೆ ನೀಡಿದರು.

ಇಂಟರ್ ನ್ಯಾಷನಲ್ ಪೀಪಲ್ಸ ಅಸೆಂಬ್ಲಿ (IPA) ಹೀಗೊಂದು ಹೇಳಿಕೆ ಹೊರಡಿಸಿತು: "ಬೊಲಿವಿಯಾದ ವೀರ ಜನರು ದಂಗೆಯನ್ನು ಯಶಸ್ವಿಯಾಗಿ ಸೋಲಿಸಿದ್ದಾರೆ! ಅಧ್ಯಕ್ಷ ಲೂಯಿಸ್ ಆರ್ಸ್ ಅವರ ಪ್ರಜಾಪ್ರಭುತ್ವ ಸರ್ಕಾರವನ್ನು ರಕ್ಷಿಸಲು ಜನರ ಚಳುವಳಿಗಳು ಸಜ್ಜುಗೊಂಡವು. ನಾವು ಯಾವಾಗಲೂ ಪ್ರಜಾಪ್ರಭುತ್ವ ಮತ್ತು ಸಾರ್ವಭೌಮತ್ವದೊಂದಿಗೆ ನಿಲ್ಲುತ್ತೇವೆ. ಇಂದು ಬೊಲಿವಿಯನ್ ಜನರು, ಬೊಲಿವಿಯನ್ ಗಣ್ಯರ ಮತ್ತು ಅವರ ಯು.ಎಸ್ ಧಣಿಗಳ ದೇಶವನ್ನು ಅಸ್ಥಿರಗೊಳಿಸುವ ಪ್ರಯತ್ನಗಳ ವಿರುದ್ಧ ಎದ್ದೇಳುವುದನ್ನು ನಾವು ನೋಡಿದ್ದೇವೆ."

ಬೊಲಿವಿಯಾದಲ್ಲಿನ COB ಮತ್ತು ಇತರ ಜನ ಸಂಘಟನೆಗಳು ಜನರ ವಿಜಯವನ್ನು ಆಚರಿಸಿವೆ. ಆದರೆ ಬೊಲಿವಿಯನ್ ಜನರು ಮತ್ತು ಅಂತರರಾಷ್ಟ್ರೀಯ ಸಮುದಾಯವು ಯಾವುದೇ ಮುಂದಿನ ದಂಗೆಯ ಪ್ರಯತ್ನಗಳ ವಿರುದ್ಧ ತಮ್ಮ ಜಾಗರಣೆ ಮತ್ತು ಎಚ್ಚರಿಕೆಯ ಸ್ಥಿತಿಯನ್ನು ಮುಂದುವರಿಸಲು ಕರೆ ನೀಡಿದೆ.

ಲಿಥಿಯಂ ಉತ್ಪಾದಿಸಲು ಚೀನಾ ರಷ್ಯಾ ಜತೆ ಒಪ್ಪಂದ ದಂಗೆಗೆ ಕಾರಣವೇ?

ಲಿಥಿಯಂ ಉತ್ಪಾದಿಸಲು ಚೀನಾ ಮತ್ತು ರಷ್ಯಾ ಗಳ ಜತೆ ಬೊಲಿವಿಯಾ ಮಾಡಿಕೊಂಡಿರುವ ಒಪ್ಪಂದಗಳು ದಂಗೆಯ ಪ್ರಯತ್ನಗಳಿಗೆ ಕಾರಣವಾಗಿರಬಹುದು ಎಂದು ಊಹಿಸಲಾಗಿದೆ.

ಬೊಲಿವಿಯ ದೇಶವು ಕೇವಲ 1.2 ಕೋಟಿ ಜನಸಂಖ್ಯೆ ಮತ್ತು 46 ಶತಕೋಟಿ ಡಾಲರುಗಳ ಜಿಡಿಪಿಯೊಂದಿಗೆ, ಪ್ರಪಂಚದ ಸುಮಾರು 23% ಲಿಥಿಯಂ ನಿಕ್ಷೇಪಗಳಿಗೆ ನೆಲೆಯಾಗಿದೆ. ಲಿಥಿಯಂ ವಿದ್ಯುತ್ ವಾಹನಗಳು ಮತ್ತಿತರ ಇಲೆಕ್ಟ್ರಾನಿಕ್ ಉಪಕರಣಗಳ ಉತ್ಪಾದನೆಯ ಟೆಕ್ ಉದ್ಯಮಕ್ಕೆ ಪ್ರಮುಖ ಖನಿಜವಾಗಿದೆ. ಲಿಥೀಯಂ ಖನಿಜದ ಮೇಲೆ ಹಿಡಿತ ಸಾಧಿಸುವ ಉದ್ದೇಶದಿಂದ, ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**